Registered No. M. 1393.

ಕಂಠೀರವ

KANTEERAVA

KANAREse. BI-WEEKLY

ವಾರಕ್ಕೆರಡಾವರ್ತಿ ಪ್ರಕಟವಾಗುವ ಶ್ರೇಷ್ಠವರ್ಗದ ಕನ್ನಡ ವಾರ್ತಾಪತ್ರಿಕೆ.

ಸಂಪುಟ ೨೨	ಮಂಗಳೂರು, ೧೯೪೦ನೇ ಇಸವಿ ಜುಲೈ ತಾರೀಕು ೨೩ನೇ ಮಂಗಳವಾರ	ಸಂಚಿಕೆ ೩೩
VOL. XXII	MANGALORE, TUESDAY, JULY 23, 1940	NO. 33

ಸರ್ವರೋಗ ನಿವಾರಿಣಿ

(Regd.)

ಸರ್ವರೋಗ ನಿವಾರಿಣಿ

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

AMRUTANJAN DEPOTS. BOMBAY. MADRAS. CALCUTTA

ಅಮೃತಾಂಜನ, ಲಿಮಿಟೆಡ್

ಬೊಂಬಾಯಿ —— ಮದ್ರಾಸ್ —— ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE

Bombay Life Assurance Co., Ltd.

(ESTD. 1908)

LIFE INSURANCE DISPELS DARKNESS OF THE MIND AND BRINGS ENLIGHTENMENT AND COURAGE, IMMORTALISES MAJOR PORTION OF YOUR INCOME WHETHER YOU SURVIVE OR NOT AND THUS MAKES LIFE WORTH LIVING TO YOU AND YOUR DEPENDANTS IN REALITY.

ASK US WHAT PARTICULAR SCHEME OF INSURANCE WILL SATISFY YOUR REQUIREMENTS AND YOUR PURSE.

Agency Applications from Active and Influential Ladies and Gentlemen are invited.

To Insure or to Represent consult:—

KOCHIKAR BROTHERS, LTD.,

Madras Branch Secretaries & Chief Agents for Bombay City and Suburbs.

The Bombay Life Bldg., Sir Lalubhai Samaldas Road, Gandhi Nagar, UDIPI

OR ANY OF THEIR FOLLOWING OFFICES AT:

(1) Puthiyara, Calicut. (2) Car Street, Mangalore. (3) Central Station Road, Trivandrum.

(4) Gautam Nivas, Charni Road, Girgaum, Bombay, No. 4. (5) Post Box No. 337, Mount Road, Madras. (6) Visweshwarapuram Circle, Bangalore City.

ವಿ[illegible]ದುರ್ಜಿ

ನನ್ನ ಜೀವನಾನದಲ್ಲಿ ಎರಡು ದುರಭ್ಯಾಸಗಳು ನನ್ನ ಬೆನ್ನು ಹತ್ತಿದ್ದುವು. ಎಲ್ಲಿಗಾದರೂ ನಾನು ಪ್ರಯಾಣಕ್ಕೆ ಹೊರಡುವಾಗ, ನಾನು ಇಂಥ ಕಡೆಗೇ ಹೊರಡುವೆನೆಂದು ತಿಳಿಸುವ ಪದ್ಧತಿ ಇರಲಿಲ್ಲ. ಇದಕ್ಕೆ ಕಾರಣವಿದ್ದಿತು; ಏನೆಂದರೆ, ನಾನು ಹಾಗೆ ತಿಳಿಸಿದ್ದೇ ಆದರೆ, ನಮ್ಮಾಕೆ ತಾನೂ ನನ್ನೊಂದಿಗೆ ಹೊರಡುವೆನೆಂದು ಹಟ ಹಿಡಿಯಬಹುದಾಗಿ ನನಗೆ ಬೆದರಿಕೆ ಇತ್ತು. ಹೆಂಗಸರ ಪ್ರಯಾಣವೇನೆಂದರೆ ಅದೇನು ಸಾಮಾನ್ಯವೇ? ನಮಗೆ ಗಂಡಸರಿಗೆ ನಮ್ಮ ನಿತ್ಯದ ಉಡುಪೇ ಸಾಕಾದರೂ, ಗಂಟುಗದಡಿಗಳೇನೂ ಬೇಡವಾದರೂ ಹೆಂಗಸರ ಪ್ರಯಾಣವು ಒಂದೆರಡು "ಟ್ರಂಕು"ಗಳು, ಹಾಸಿಗೆ ಇವೆಲ್ಲಾ ಶಾಸ್ತ್ರೋಕ್ತವಾಗಿ ಇಲ್ಲದೆ ಎಂದೂ ಸಾಗದು. ಅಷ್ಟೇ ಅಲ್ಲದೆ, ಮೆನೆಯಲ್ಲಿದ್ದದ್ದಕ್ಕೂ ಹೆಚ್ಚಾಗಿ, ಹೊರಗೆ ಹೊರಟ ಕಡೆ, ಮಡಿ ಮೈಲಿಗೆ, ಆಚಾರ ಸಂಪ್ರದಾಯ ಇವುಗಳ ಗಡಿಬಿಡಿಯೊಂದು ಪ್ರತ್ಯೇಕವೇ. ಈ ಅವಾಂತರಕ್ಕೆ ಬೆದರಿ ನಾನು ಎಲ್ಲಿಗೆ ಹೋಗುವುದಿದ್ದರೂ ಯಾರಿಗೂ ತಿಳಿಸದೆ ಹೋಗಿ ಬಂದು ಬಿಡುತ್ತಿದ್ದೆ. ಈ ಗುಟ್ಟು ನಮ್ಮವಳಿಗೂ ಗೊತ್ತಿತ್ತು. ಇದಕ್ಕಾಗಿ ನನಗೂ ಅವಳಿಗೂ ಆಗಾಗ ವ್ಯಾಜ್ಯಗಳೂ ಆಗುತ್ತಿದ್ದುವು.

ನನ್ನ ಇನ್ನೊಂದು ಅಭ್ಯಾಸವೆಂದರೆ,—ನಾನು ಯಾರಿಗೂ ಪತ್ರ ಬರೆಯುತ್ತಿದ್ದಿಲ್ಲ. ಅದು ದುಡ್ಡು ಖರ್ಚಾಗುವುದೆಂಬುದರಿಂದಲ್ಲ; ಬರೇ ಯೋಗಕ್ಷೇಮಕ್ಕಾಗಿ ಕಾಗದವೇತಕ್ಕೆ? ವಿಶೇಷ ವಿದ್ದರಲ್ಲವೇ ಕಾಗದ ಬರೆಯಬೇಕು? ಅಂಥ ವಿಶೇಷವೇನೂ ನಮ್ಮಲ್ಲಿ ಕೆಲವು ವರ್ಷಗಳಿಂದ ನಡೆಯಲಿಲ್ಲ. ಯಾರೂ ಸಾಯಲೂ ಇಲ್ಲ; ಯಾರೂ ಹುಟ್ಟಲೂ ಇಲ್ಲ. ಮದುವೆ ಮುಂಜಿಗಳಂತೂ ಮೊದಲೇ ಇಲ್ಲ. ಅಂಥದೇನಾದರೂ ಇದ್ದರೆ, ನಾನೇ ಸ್ವತಃ ಹೋಗಿ, ಸಂಬಂಧಪಟ್ಟವರನ್ನು ಕರೆದು ತರುವ ಪ್ರವೃತ್ತಿ ನನ್ನದು.

ನನಗೆ ಬಂಧುಗಳು ಹೆಚ್ಚು ಮಂದಿ ಇರಲಿಲ್ಲ. ನನ್ನ ಹೆಂಡತಿಗೂ ತವರಿನಲ್ಲಿ ಯಾರೂ ಇರಲಿಲ್ಲ. ಅವಳು ಹುಟ್ಟುವಾಗಲೇ ಅನಾಥಳು. ಅವಳ ಚಿಕ್ಕ ತಾಯಿ, ಅವಳೊಬ್ಬ ವಿಧವೆ, ಇವಳನ್ನು ಸಾಕಿ, ದೊಡ್ಡದು ಮಾಡಿ ಬಡವನಾದ ನನಗೆ ಧಾರೆ ಎರೆದು ಕೊಟ್ಟಳು. ಆ ಚಿಕ್ಕ ತಾಯಿಗೆ ಕೊಂಚ ತಿನ್ನುವುದಕ್ಕಿತ್ತು. ಇರುವುದಕ್ಕೊಂದು ದೊಡ್ಡ ಮನೆ ಇತ್ತು. ಆಕೆ ವರ್ಷಂಪ್ರತಿ ನನ್ನ ಹೆಂಡತಿಗೆ ೨ ಸೀರೆ, ೪ ಕುಪ್ಪಸಗಳನ್ನು ಕಳುಹಿಸುವ ಪದ್ಧತಿ ಇತ್ತು.

ನನ್ನ ಹೆಂಡತಿಯ ಚಿಕ್ಕ ತಾಯಿ ನನಗೆ ೨-೩ ಕಾಗದ ಬರೆದಿದ್ದಳು. ಆದರೆ ಬರೇ ಯೋಗಕ್ಷೇಮದ ಕಾಗದ ಪತ್ರಗಳೆಂದು ನಾನು ಅದಕ್ಕೆ ಉತ್ತರವನ್ನೇ ಬರೆದಿರಲಿಲ್ಲ. ಇದನ್ನು ಕಂಡು ಆಕೆಯೂ ಮುಂದೆ ಕಾಗದ ಬರೆಯಲಿಲ್ಲ. ಆಕೆಯಿಂದ ವರ್ತಮಾನ ಬಾರದೆ, ೬ ತಿಂಗಳು ಕಳೆದಿತ್ತು.

* * *

ಒಂದು ದಿನ ನನ್ನ ಹೆಂಡತಿ ನನ್ನೊಡನೆ ದೊಡ್ಡ ರಣಾಗ್ರವನ್ನೇ ಹೂಡಿದಳು. ಈ ವರ್ಷ ಅವಳ ಚಿಕ್ಕ ತಾಯಿ ಸೀರೆ ಕುಪ್ಪಸಗಳೊಂದನ್ನೂ ಇನ್ನೂ ಕಳುಹಿಸಿರಲಿಲ್ಲ. "ನಿಮ್ಮ ಸ್ವಭಾವ ನಾನು ಬಲ್ಲೆ. ಚಿಕ್ಕಮ್ಮನ ಆ ಕಾಗದಗಳಿಗೆ ನೀವು ಉತ್ತರವನ್ನೇ ಬರೆದಿರಲಿಕ್ಕಿಲ್ಲ. ಅದರಿಂದ ಬೇಸರಗೊಂಡು ಆಕೆಯೂ ಸೀರೆ, ಕುಪ್ಪಸಗಳ ಪಾರ್ಸೆಲ್ ಕಳುಹಿಸಿರಲಿಕ್ಕಿಲ್ಲ. ಇಲ್ಲಿ ನೋಡಿ! ಉಟ್ಟ ಸೀರೆಯೆಲ್ಲಾ ಹರಿದು ಹೋಗಿದೆ. ನೀವೂ ತೆಗೆಸಿ ಕೊಡಲಾರಿರಿ. ಕೊಡುವವರನ್ನೂ ಸಂತೋಷಪಡಿಸಲಾರಿರಿ. ನಿಮ್ಮದು ವಿಚಿತ್ರ ಮರ್ಜಿ" ಎಂದು ಕೂಗಾಡಿದಳು.

"ಇಷ್ಟು ದಿನಗಳೇನು ನಾನು ಕಾಗದ ಬರೆದೇ ನಿನ್ನ ಸೀರೆ ಕುಪ್ಪಸ ಬಂದದ್ದೇ?"

"ನಾನು ಕಾಗದ ಬರೆಯುತ್ತಾ ಇದ್ದೆ. ಈ ಸಲ ನೀವು ಬರೆದಿರಬಹುದೆಂದು ನಾನು ಬರೆದಿರಲಿಲ್ಲ"

"ಹಾಗಾದರೆ ಸುಮ್ಮನಿರು; ನಾನೆಲ್ಲಾ ಮಾಡುತ್ತೇನೆ. ಸುಮ್ಮನೇ ರಂಪ ಮಾಡಬೇಡ. ನಾಳೆ ಇಷ್ಟು ಹೊತ್ತಿನೊಳಗಾಗಿ ನಿನ್ನ ಸೀರೆ ಕುಪ್ಪಸ ಎಲ್ಲಾ ನಿನ್ನ ಕೈ ಸೇರುವ ಹಾಗೆ ಮಾಡುತ್ತೇನೆ."

ನಾನು ಅಂದೇ ರೈಲಲ್ಲಿ ಹೊರಟು ನನ್ನ ಹೆಂಡತಿಯ ಚಿಕ್ಕಮ್ಮನಿದ್ದ ಊರಿಗೆ ಬಂದೆ ರೈಲಿಳಿಯುವಾಗ, ರಾತ್ರಿ ೧೨ ಗಂಟೆಯಾಗಿ ಹೋಗಿತ್ತು. ನಾನು ಆಕೆಯ ಚಿಕ್ಕಮ್ಮನ ಮನೆ ನೋಡಿದ್ದು ಒಮ್ಮೆ ಮಾತ್ರ,—ನನ್ನ ಲಗ್ನ ಕಾಲದಲ್ಲಿ. ಆ ಮನೆ ಯಾವ ಬೀದಿಯಲ್ಲಿ ಎಂದು ಈಗ ಸರಿಯಾಗಿ ನನಗೆ ನೆನಪಿರಲಿಲ್ಲ. ಅಲ್ಲದೆ ಆ ಊರ ಮುನಿಸಿಪಲ್ ಸಿಬಂದಿಯವರಲ್ಲಿ, ಕಾಫಿ ಕುಡಿಯುವವರಿಗಿಂತಲೂ, ಬೀದಿ ದೀಪಗಳಿಗೆ ಹಾಕುವ ಚಿಮಿಣಿ ಎಣ್ಣೆ ಕುಡಿದು ಬದುಕುವವರೇ ಹೆಚ್ಚೆಂದು ತೋರುತ್ತದೆ. ಹಾಗಾಗಿ, ಸಣ್ಣ ಪುಟ್ಟ ರಸ್ತೆಗಳಲ್ಲಿ, ಓಣಿಗಳಲ್ಲಿ (ದೀಪದ) ಕಂಬಗಳಿದ್ದರೂ, ದೀಪಗಳು ಸೊನ್ನೆ.

ಆದರೂ ಆ ಕತ್ತಲಲ್ಲಿ ನಾನು ಬಹಳ ಕಷ್ಟ ಪಟ್ಟು ಅಲೆದಲೆದು ಕೊನೆಗೆ ಆ ಮನೆ ಹುಡುಕಿ ತೆಗೆದೆ. ಆ ಸಾಲಿನಲ್ಲಿ ಸಿಂಹಗಳ ಮುಖವಾಡ ವಿರುವ ಗೇಟಿನ ಮನೆ ಅದೊಂದೇ. ಗೇಟಿನೊಳಗೆ ಉರಿಯುತ್ತಿದ್ದ ಒಂದು ಚಿಕ್ಕ ಬೆಳಕಿನ ಸಹಾಯದಿಂದ ಆ ಮನೆಯ ಗುರುತು ನನಗಾಯಿತು.

ಗೇಟಿನ ಬೀಗ ಹಾಕಿತ್ತು. ನನ್ನಿಂದ ತೆಗೆಯಲಾಗಲಿಲ್ಲ, "ಬಾಗಿಲು, ಬಾಗಿಲು" ಎಂದು ಕೂಗಿದೆ. ಗೇಟನ್ನು ಹಿಡಿದು ಜೆನ್ನಾಗಿ ಅಲುಗಾಡಿಸಿದೆ.

ಅಷ್ಟರಲ್ಲಿ ಇಬ್ಬರು ಧಾಂಡಿಗರು ಓಡಿಬಂದರು. ಬೀಗ ತೆಗೆದರು. ನನಗೆ ಸಂತೋಷವಾಯಿತು.

ಆದರೆ ಇಲ್ಲ! ಅವರು ನನ್ನನ್ನು ಸ್ವಾಗತಿಸಲು ಬಂದವರಲ್ಲ. ಅವರು ಬೀಗ ತೆಗೆದ ಒಂದೆರಡು ನಿಮಿಷಗಳಲ್ಲಿಯೇ "ಕಳ್ಳ! ಕಳ್ಳ!" ಎಂದು ಆರ್ಭಟಿಸುತ್ತ, ನನ್ನ ಮೈಮೇಲೆ ಬಿದ್ದರು. ನನ್ನನ್ನು ದರದರನೆ ಹಿಡಿದೆಳೆದುಕೊಂಡು ಹೋಗಿ, ಮನೆಯ ಯಜಮಾನನ ಮುಂದೆ ನಿಲ್ಲಿಸಿದರು.

ಮನೆಯ ಯಜಮಾನನು ನನ್ನ ಪೂರ್ವೋತ್ತರವನ್ನೆಲ್ಲ ವಿಚಾರಿಸಿ ತಿಳಿದುಕೊಂಡನು. "ಈ ಮನೆಯ ಯಜಮಾನಿ, ಈ ಮನೆಯನ್ನು, ಒಂದು ವರ್ಷದ ಮಟ್ಟಿಗೆ, ನನಗೆ ಬಾಡಿಗೆಗೆ ಕೊಟ್ಟು ಬಾಡಿಗೆ ಹಣವನ್ನು ಮುಂಗಡ ತೆಗೆದು ಕೊಂಡು ತೀರ್ಥಯಾತ್ರೆಗೆ ಹೋಗಿದ್ದಾರೆ. ನೀವು ಅವರ ಸಂಬಂಧಿಕರೆನ್ನುವುದರಿಂದ, ನಿಮಗೆ ಈ ದಿನ "ಪೋಲೀಸ್ ಪ್ರಾಕಪ್" ತಪ್ಪಿತು. ಇವರಿಬ್ಬರೂ ನಮ್ಮ ಕಾವಲುಗಾರರು. ಅವರಿಗೆ ನಿಮ್ಮನ್ನು ಬಿಡುವ ಹಾಗೆ ಹೇಳುತ್ತೇನೆ. ನೀವು ಹೋಗಬಹುದು" ಎಂದನು.

* * *

ಆ ರಾತ್ರಿ ನನ್ನ ಅವಸ್ಥೆ ಏನು ಹೇಳಲಿ! ಎಲ್ಲಿಯಾದರೂ ಮಲಗೋಣವೆಂದರೆ, ಒಂದು ಜೂರು ಬಟ್ಟೆಯೂ ನನ್ನಲ್ಲಿ ಇರಲಿಲ್ಲ. ಉಟ್ಟು ದೊಂದು ಪಂಚೆ; ತೊಟ್ಟುದೊಂದು ಶರ್ಟ್! ನನ್ನ ಈ ದುರವಸ್ಥೆಯ ಅನುಭವದಿಂದ ನನಗೆ ನಿದ್ದೆಯೂ ಅಂದು ಬಾರದು.

ನಾನು ಎಲ್ಲೆಲ್ಲೋ ಅಂಡಲೆದು, ಆ ರಾತ್ರಿ ಕಳೆದೆ. ಆದರೂ ನನಗೆ ಊರಿಗೆ ಹೋಗುವ ಟ್ರೈನ್ ಸಿಕ್ಕುವುದು ಸಂಜೆ ಗಂಟೆ ೪ಕ್ಕೆ. ಅಲ್ಲಿನ ತನಕ ಊಟವಾದರೂ ಒಂದು ಬೇಡವೇ? ನನ್ನಲ್ಲಿ ಅಷ್ಟಕ್ಕೂ ದುಡ್ಡಿರಲಿಲ್ಲ. ಚಿಕ್ಕಮ್ಮನಿರುವಾಗ ಊಟ ತಿಂಡಿಗೇನು ಕೊರತೆ ಎಂದು ನಂಬಿ, ರೈಲ್ ಚಾರ್ಜ್ ಅಷ್ಟನ್ನೇ ತಂದಿದ್ದ ನನಗೆ—ಚಿಕ್ಕಮ್ಮನಿಲ್ಲದೆ ಉಪವಾಸವೇ ಗತಿಯಾಯಿತು.

ನಾನು ಸಂಜೆ ಗಂಟೆ ಮೂರರ ವರೆಗೂ ಊರು ಸುತ್ತಿ, ಸುತ್ತಿದಲ್ಲಿಯೇ ಮತ್ತೆ ಸುತ್ತಿ ದೀಪದ ಕಂಬ ಲೆಕ್ಕವಮಾಡುತ್ತ ಕಾಲ ಕಳೆದೆ. ನಮ್ಮೂರ ಕಡೆಯವರೊಬ್ಬರು ಇಲ್ಲಿಗೆ ಬಂದು ಇಟ್ಟಿದ್ದ ಒಂದು ಹೋಟಲಿನಲ್ಲಿ ಒಂದಿಷ್ಟು ತಿಂಡಿ ತಿಂದು, ಹೊಟ್ಟೆ ತುಂಬ ನೀರು ಕುಡಿದೆ. ಕಾಫಿ ಕುಡಿಯಲು ಹಣವಿರಲಿಲ್ಲ. ಅಲ್ಲದೆ ಇಲ್ಲಿಯ ಕಾಫಿ ಕಪ್ಪಿಗೆ, ನಮ್ಮೂರಿನ "ಡಬಲ್ ಚಾರ್ಜು." ಹಾಗಾಗಿಯೇ, ನಮ್ಮೂರಿಂದ ಇಲ್ಲಿಗೆ ಜನರು ಓಡಿಬಂದು, ಕಾಫೀ ಹೋಟ್ಲ್ ಇಟ್ಟು ದುಡ್ಡು ಸಂಪಾದಿಸುತ್ತಿದ್ದರು.

* * *

ಆತ್ತ ರೈಲ್ ಚಾರ್ಜೂ ದಂಡವಾಯಿತು; ಇತ್ತ ಸೀರೆ ಕುಪ್ಪಸಗಳೂ ದೊರಕಲಿಲ್ಲ! ಇದನ್ನು ನಮ್ಮಾಕೆ ಎಲ್ಲಿಯಾದರೂ ತಿಳಿದರೆ, ನನ್ನ ಪ್ರಾಣ ಹಿಂಡಿ ಹಾಕುವುದೇ ಖಂಡಿತ. ಆದುದರಿಂದ "ಮೌನಂ ಸರ್ವಾರ್ಥ ಸಾಧನಂ" ಎನ್ನುತ್ತ, ನಾನು ಸುದ್ದಿಯಿಲ್ಲದೆ, ರೈಲಿಳಿದು, ಮೆತ್ತಗೆ ಮನೆ ಸೇರಿದೆ.

ಆದರೆ ನಾನು ಮನೆಯೊಳಗೆ ಕಾಲಿಟ್ಟದ್ದೇ ತಡ; ನನ್ನ ಹೆಂಡತಿ ಸಡಗರದಿಂದ ಮುಂದೆ ಬಂದು "ನೀವು ಚಿಕ್ಕಮ್ಮನಲ್ಲಿಗೆ ಹೋಗುವ ಅಗತ್ಯವೇ ಇರಲಿಲ್ಲ!" ಎಂದಳು.

ನಾನು ಅಪ್ರತಿಭನಾದೆ. ಪ್ರಾಯಶಃ ಊಹನೆಯಿಂದಾಡುತ್ತಿರುವಳೆಂದು ನಾನು ಭಾವಿಸಿ, "ಇಲ್ಲ, ಅಲ್ಲಿಗಲ್ಲ ಹೋದುದು. ನಾನೂ ಯಜಮಾನರೂ ಜವುಳಿ ಖರೀದಿಗೆ ಬೇರೊಂದು ಕಡೆಗೆ ಹೋಗಿದ್ದು, ಈಗ ತಾನೇ ಬಂದೆವು" ಎಂದೆ.

"ಅದು ಹೇಗೆ? ನೀವು ನಿನ್ನೆ ರಾತ್ರಿ ಬರಲಿಲ್ಲವೆಂದು, ಈ ದಿನ ಬೆಳಗ್ಗೆ, ನಾನು ಜವುಳಿ ಅಂಗಡಿಗೆ ಹೇಳಿ ಕಳುಹಿಸಿದಾಗ, ನಿಮ್ಮ ಸಾಹುಕಾರರಿದ್ದರು; ನೀವಿರಲಿಲ್ಲ!"

ನಾನು ಸುಮ್ಮನಿದ್ದೆ. ನನ್ನ ಬಾಯಿ ಕಟ್ಟಿತು.

"ಅದು ಹೇಗೂ ಇರಲಿ. ನೀವು ರೈಲಿಗಿಷ್ಟು ದುಡ್ಡು ಹಾಳು ಮಾಡಿದಿರಿ; ಹೋಗಲಿ! ಇಗೋ! ನನ್ನ ಚಿಕ್ಕಮ್ಮ ತೀರ್ಥಯಾತ್ರೆ ಮುಗಿಸಿಕೊಂಡು ನಿನ್ನೆ ತಾನೇ ಇಲ್ಲಿಗೆ ಬಂದಿದ್ದಾರೆ. ಸೀರೆ, ಕುಪ್ಪಸ, ತೀರ್ಥಪ್ರಸಾದ ಎಲ್ಲಾ ತಂದಿದ್ದಾರೆ" ಎಂದು ನಮ್ಮಾಕೆ ಹೇಳಿದಳು.

ನಮ್ಮ ಮನೆಗೆ ೨೫—೩೦ ರೂಪಾಯಿಗಳ ಸಾಮಗ್ರಿಗಳು ಉಚಿತವಾಗಿ ಬಂತೆಂದು ಕೇಳಿದ ಕೂಡಲೇ, ನಾನು ಪ್ರಯಾಣ ಕಾಲದಲ್ಲಿ ಪಟ್ಟ ಕಷ್ಟವೆಲ್ಲಾ ನನಗೆ ಒಮ್ಮೆಲೇ ಮರೆತುಹೋಯಿತು. ನನ್ನ ಆಥವಾ ನನ್ನ ಹೆಂಡತಿಯ ಬಂಧುಗಳಾಗಿ ಇನ್ನೂ ಇಂಥ ಅರ್ಧ ಡಜನ್ ವಿಧವೆಯರು ಇರಬಾರದಾಗಿತ್ತೇ ಎಂದು ನನ್ನ ಮನಸ್ಸಿನೊಳಗೇ ನಾನು ಅಂದುಕೊಂಡೆ!

"ನಾನು ಮನೆ ಬಿಟ್ಟು ಹೊರಟು ಕೆಲ ತಿಂಗಳಾಯಿತು. ಮನೆಯನ್ನು ಒಬ್ಬ ಜವಿೂನ್ದಾರರಿಗೆ ವರ್ಷಕ್ಕೆ ಬಾಡಿಗೆಗೆ ಕೊಟ್ಟಿದ್ದೇನೆ. ಪ್ರಾಯಶಃ ಈ ಸಂಗತಿ ನಿಮಗೆ ತಿಳಿಯದು."

"ಇಲ್ಲ; ಗೊತ್ತಿಲ್ಲ".

"ಹಾಗಾದರೆ, ನೀವಲ್ಲಿಗೆ ನನ್ನನ್ನು ಹುಡುಕಿಕೊಂಡು ಹೋದಾಗ, ನಿಮಗೆ ಅಲ್ಲಿ ಕೊಂಚ ತೊಂದರೆಯಾಗಿರಬಹುದು."

ನಾನು ತೊಂದರೆ ಏನಾಯಿತೆಂದು ವಿವರಿಸಲು ನಾಚಿ, "ಅಷ್ಟೇನೂ ಇಲ್ಲ. ರಾತ್ರಿ ಹೊತ್ತು; ಅಲ್ಲದೆ ನಾನು ಮನೆಯವರಿಗೆ ಅಪರಿಚಿತ; ಅಷ್ಟೇ ತೊಂದರೆ" ಎಂದೆ.

* * *

ನನ್ನ ಹೆಂಡತಿಯ ಚಿಕ್ಕಮ್ಮ, ನಮ್ಮ ಮನೆಯಲ್ಲಿರುವಷ್ಟು ಕಾಲ, ನನ್ನ ಹೆಂಡತಿ ಆಕೆಯನ್ನು ಮಾತ್ರ "ಶೋಡಷೋಪಚಾರ"ಗಳಿಂದ ಉಪಚರಿಸುತ್ತಿದ್ದಳಲ್ಲದೆ, ನನ್ನ ಊಟ, ತಿಂಡಿ, ಸ್ನಾನ, ಕಾಫಿಗಳ ಗೊಡವೆಯೊಂದೂ ಆಕೆ ಗಿರಲೇ ಇಲ್ಲ. ಆದರೆ ಆಕೆಯಿಂದ ನಮಗೆ ಲಾಭವಿರುವಷ್ಟು ಕಾಲ, ನಾನೂ ಇದಕ್ಕೆ ವಿರೋಧಿಯಾಗಿರಲಿಲ್ಲವೆನ್ನಿ.

ಒಂದು ದಿನ ನಾನು ನನ್ನ ಹೆಂಡತಿಯನ್ನು ಕರೆದು "ನೋಡು! ನಿನ್ನ ಚಿಕ್ಕಮ್ಮನಿರುವುದು ಒಂದು ಜೀವ. ಆ ಒಂದು ಜೀವಕ್ಕಾಗಿ ಅಷ್ಟೊಂದು ದೊಡ್ಡ ಮನೆಯೇಕೆ? ಅದನ್ನು ಮುಂದಕ್ಕೂ ಬಾಡಿಗೆಗೇ ಕೊಟ್ಟು ಬಿಡಲಿ. ಅವರು ನಮ್ಮಲ್ಲಿಯೇ ಇದ್ದು ಬಿಡಲಿ. ಆಗದೇ?" ಎಂದೆನು.

"ಅವರ ಮಡಿ ಮೈಲಿಗೆಗೆ ನಿಮಗೆ ಸರಿ ಬಿದ್ದೀತೆ?"

"ಅವರ ಸೀರೆ ಕುಪ್ಪಸ, ದುಡ್ಡು ನಮಗಾ ದೀತಾದರೆ, ಅವರ ಮಡಿ ಮೈಲಿಗೆಯೂ ಏತಕ್ಕಾಗದು?" ಎಂದು ನಾನು ಕೇಳಿದೆ.

ಈ ನನ್ನ ಸೂಚನೆಯನ್ನು ನನ್ನ ಹೆಂಡತಿ ಆಕೆಯ ಚಿಕ್ಕಮ್ಮನ ಮುಂದಿಟ್ಟಿದ್ದಾಳೆ. ಚಿಕ್ಕಮ್ಮ ಇನ್ನೂ ಏನನ್ನೂ ನಿರ್ಧಾರವಾಗಿ ಹೇಳಿಲ್ಲ. ಆಕೆ ಸ್ವತಂತ್ರ ಜೀವಿ. ಆದರೆ ಒಂದು ವೇಳೆ, ಆಕೆ, ನನ್ನ ಸೂಚನೆಗೊಪ್ಪಿ ಬಿಟ್ಟರೆ ಆಕೆಯ ಸುಮಾರು ೪೦೦—೫೦೦ ರೂಪಾಯಿಗಳ ವಾರ್ಷಿಕ ಉತ್ಪನ್ನವೂ ನಮ್ಮ ಮನೆಗೇ ಸೇರುವುದು. ಅದಕ್ಕಾಗಿ ನಾನು ಕೈಲಾದ ಪ್ರಯತ್ನವನ್ನೆಲ್ಲಾ ಮಾಡುತ್ತಿದ್ದೇನೆ. ಲೋಕದಲ್ಲಿ ಹಲವರೂ ಹೀಗೆಯೇ ಪ್ರಯತ್ನಪಡುತ್ತಿರುವುದನ್ನೂ ನಾನು ಕಂಡೇ ಇದ್ದೇನೆ.

"R"

ಕಾಮಿನಿಯ ಸೌಂದರ್ಯದ ಕೀರ್ತಿಯ ಕಲಶ

ಮೃದು ಮತ್ತು ವೈಭವದಿಂದ ಬೆಳೆವ ಕೂದಲು. ನಿಮ್ಮ ಚೆಲುವನ್ನು ಹೆಚ್ಚಿಸಲು ಮತ್ತು ರಕ್ಷಿಸಲು ಮರೆಯದೆ ಕೊಳ್ಳಿರಿ—

ಕಾಮಿನಿಯಾ ಓಯ್ಲ್

(ರಿಜಿಸ್ಟರ್ಡ್)

ಪರಿಶುದ್ಧವೂ ಅತ್ಯುತ್ತಮವೂ ಆದ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಇದು ತಲೆಯ ತೊಡರುಗಳಿಗೆಲ್ಲ ದಿವ್ಯ ಔಷಧಿ. ಅಲ್ಲದೆ ಕೂದಲ ಬೇರನ್ನು ಬೆಳೆಯಿಸಿ, ಕೂದಲು ಉದುರುವುದನ್ನು ತಡೆಯುವುದಲ್ಲದೆ, ಇದರ ಪ್ರಿಯವಾದ ಸುಗಂಧ ಮನಸ್ಸನ್ನು ಆಹ್ಲಾದಕರವಾಗಿ ಇರಿಸುವುದು.

ಕಾಮಿನಿಯಾ ತೈಲ

ಬಂಗಾರದ ಪದಕಗಳನ್ನೂ ಪ್ರಶಂಸಾ ಪತ್ರಗಳನ್ನೂ ಸಂಭಾವನಾ ಪತ್ರಗಳನ್ನೂ ಅದರ ಅತ್ಯುತ್ಕೃಷ್ಟತೆಗಾಗಿ ರಾಷ್ಟ್ರದ ಸಕಲರಿಂದಲೂ ಪಡೆದಿದೆ.

ಬಾಟ್ಲಿಯೊಂದರ ಬೆಲೆ ರೂಪಾಯಿ 1. 3 ಬಾಟ್ಲಿಗಳಿಗೆ ರೂ. 2-10-0. ವಿ. ಪಿ. ಖರ್ಚು ಬೇರೆ. ಮುಕ್ಕಾಖಾಣೆ ಅಂಚೆ ಚೀಟು ಕಳುಹುವವರಿಗೆ ಮಾದರಿ ಸೀಸೆ ಪುಕ್ಕಟೆ. ಎಲ್ಲೆಲ್ಲೂ ಕೆಮಿಸ್ಟ್ಸ್‌ನ ಮತ್ತು ಡ್ರಗ್ಗಿಸ್ಟ್ಸ್‌ನ ಹಾಗೂ ಜೀನಸು ಅಂಗಡಿಗಳಲ್ಲೂ ಇದು ಮಾರಲ್ಪಡುತ್ತದೆ.

ಸುಗಂಧಗಳ ರಾಜ—ಒಟ್ಟೋ ದಿಲ್‌ಬಹಾರ್

(ರಿಜಿಸ್ಟರ್ಡ್)

ವಿಶಾಲ ಜಗತ್ತಿನಲ್ಲಿ ಇದಕ್ಕಿರುವ ಆದರವೇ ಇದರ ಶ್ರೇಷ್ಠತೆಯನ್ನು ವ್ಯಕ್ತಪಡಿಸುತ್ತದೆ. ನಿಮ್ಮ ಕರವಸ್ತ್ರದ ಮೇಲೆ ಬಿದ್ದ ಇದರ ಕೆಲವೇ ಬಿಂದುಗಳು ಮನಮೋಹಕ ಹಾಗೂ ಆಜ್ಞಳಿಯದ ಡೈಲಿ ಮತ್ತು ಜಾಜಿ ಹೂಗಳ ಸುಗಂಧವನ್ನು ಹೊರಸೂಸುವುದು. ¼ ಔನ್ಸ್ ಬಾಟ್ಲಿಯ ಬೆಲೆ ರೂ. 1¼ ಮತ್ತು ಒಂದು ಡ್ರೇವ್ ಬಾಟ್ಲಿಯ ಬೆಲೆ 12 ಆಣೆಗಳು. ವಿ. ಪಿ. ಚಾರ್ಜು ಬೇರೆ. ಪುಕ್ಕಟೆ ಮಾದರಿ ಸೀಸೆಗಾಗಿ 2 ಆಣೆ ಅಂಚೆ ಚೀಟು ಕಳುಹಿಸಿ. ಸುಗಂಧ ಕಾರ್ಡಿನ ಬೆಲೆ 1 ಆಣೆ.

ಪ್ರಧಾನ ಏಜಂಟರು:—

ಎಂಗ್ಲೋ ಇಂಡಿಯನ್ ಡ್ರಗ್ ಎಂಡ್ ಕೆಮಿಕಲ್ ಕಂಪೆನಿ, ಬೊಂಬಾಯಿ 2.

ನಾಜಿ ಜರ್ಮನಿಯಲ್ಲಿ ವಿದ್ಯಾಭ್ಯಾಸ

ಯುದ್ಧದೇವತೆಗೆ ಆಹುತಿ ಕೊಡಲೆಂದು ತಯಾರಾಗುವ ನಾಜಿ ತರುಣ—ತರುಣಿಯರು

卐

ನಾಜಿ ಜರ್ಮ[redacted]ನ್ನು ಉಳಿಸುವ, ಬೆಳೆಸುವ, ಆಳಿಸುವ [redacted] ತಂದೆತಾಯಿಯರದಲ್ಲ; ರಾಷ್ಟ್ರದ್ದು

ಹಿಟ್ಲರ್-ಜರ್ಮನಿ-ಹಸಿವೆ-ಮುಂತಾದ ನಾಜಿ ಮಂತ್ರ

ಇಂದಿನ ಜರ್ಮನಿಯಲ್ಲಿ ವಿದ್ಯಾಭ್ಯಾಸವು ನಾಜಿ ಪಾರ್ಟಿಯ ಒಂದು ಯಂತ್ರವಾಗಿ ಮಾರ್ಪಟ್ಟಿದೆ. ತರುಣರಿಗೆ ವಿದ್ಯೆ ಕೊಡುವುದಿದ್ದರೆ ಅದು ಅವರನ್ನು ನಾಜಿ ತತ್ವಕ್ಕಾಗಿ ಬಲಿಕೊಡಲು. ಹಾಗಿರಲು ಆ ಪುಟ್ಟ ಜರ್ಮನ್ ಹುಡುಗ-ಹುಡುಗಿಯರನ್ನು ಹೇಗೆ ತರಬೇತಿ ಮಾಡುತ್ತಿದ್ದಾರೆ?

ಜರ್ಮನ್ ಲೇಬರ್ ಮಂತ್ರಿಯಾದ ಡಾ| ಲೇ. ವಿದ್ಯಾಭ್ಯಾಸದ ವಿಚಾರವಾಗಿ ಬರೆಯುತ್ತ "ಮಗುವು ಮೂರು ವರ್ಷ ಪ್ರಾಯದ್ದಾಗುವಾಗಲೇ, ಅವರ ಮಾರ್ಪಾಟ ಆರಂಭವಾಗುತ್ತದೆ. ಮಗುವಿಗೆ ಜ್ಞಾನ ಉಂಟಾದೊಡನೆ ರಾಷ್ಟ್ರಧ್ವಜ ಆದರ ಕೈಗೆ ಬೀಳುವುದು; ಮುಂದೆ ಶಾಲೆ, ಹಿಟ್ಲರ್ ಯುತ್, ಸ್ಟ್ಯಾರ್ಮ್ ಟ್ರೂಪ್ ಮತ್ತು ಮಿಲಿಟರಿ ತರಬೇತಿ. ಆದರೂ ಆತನನ್ನು ನಾವು ಹೋಗಗೊಡುವುದಿಲ್ಲ. ಇಷ್ಟಾದ ಬಳಿಕ, ಲೇಬರ್ ಸರ್ವಿಸ್ ಆರಂಭವಾಗಿ, ಅದು ಅವನನ್ನು ಸಾಯುವ ತನಕ,—ಆತನಿಗದು ಒಪ್ಪಿಗೆಯಾಗಿರಲಿ—ಇಲ್ಲದಿರಲಿ—ತನ್ನ ವಶವಿರಿಸಿಕೊಳ್ಳುವುದು."

ನಾಜಿಗಳ ಬೈಬಲ್ ಗ್ರಂಥವಾದ ಹಿಟ್ಲರನ "ಮೈನ್ ಕೆಂಫ್" (ಆತ್ಮಕಥೆ)ಯಲ್ಲಿ ಏನಿದೆ ನೋಡೋಣ. "ವಿದ್ಯೆಯ ಸಾಮಾನ್ಯ ತಾತ್ಪರ್ಯವೆಂದರೆ, ಮುಂದಿನ ಸೇನೆಗೆ ಸಿದ್ಧಗೊಳಿಸುವುದು. ಆಗ ಇಂದಿನಂತೆ ಕ್ರಮೇಣ ವ್ಯಾಯಾಮವಿತ್ತು, ಸೇನೆಯನ್ನು ಸ್ಥಾಪಿಸಬೇಕಾಗಿಲ್ಲ; ಬದಲು ಮೊದಲೇ ತಕ್ಕ ದೇಹದಾರ್ಢ್ಯತೆಯನ್ನಾಂತವರ ಸೇನೆ ಸಿದ್ಧವಿದ್ದಂತೆಯೇ ಸರಿ. ರಾಷ್ಟ್ರವು ತನ್ನ ವಿದ್ಯೆಯ ಸರ್ವಶಕ್ತಿಯನ್ನು, ಜ್ಞಾನವನ್ನು ಮಕ್ಕಳ ತಲೆಯಲ್ಲಿ ತುಂಬುವದಕ್ಕಾಗಿ ಅಲ್ಲ—ಬದಲು ಆರೋಗ್ಯವೂ ಧೃಡಕಾಯರೂ ಆಗಿ ಮಾರ್ಪಡಿಸುವದರಲ್ಲಿ ಪ್ರಯೋಗಿಸಬೇಕು. ಜ್ಞಾನವಿಕಾಸವು ಬರೇ ಎರಡನೆಯ ಸ್ಥಾನದ್ದು."

ಜರ್ಮನಿಯಲ್ಲಿ ವಿದ್ಯಾಭ್ಯಾಸ ಹೇಗೆ ಕೊಡಲಾಗುತ್ತಿದೆ ಎಂಬುದಕ್ಕೆ ಈ ಹೇಳಿಕೆಗಳೇ ಸಾಕಾಗಿವೆ. ಜರ್ಮನ್ ಮಕ್ಕಳಿಗೆ ವಿದ್ಯಾಭ್ಯಾಸವೀವುದಿದ್ದರೆ, ಅದು ಮಿಲಿಟರಿ ತರಬೇತಿಗಾಗಿ ಹೊರತು, ಬೇರೆ ವಿಚಾರಗಳಿಗೆ ಅಲ್ಲ. ತನ್ನ ಸ್ವಂತ ವಿಚಾರವನ್ನು ಚರ್ಚಿಸಿ, ವಿವಿಧ ವಿಚಾರಗಳಲ್ಲಿ ತಕ್ಕ ತೀರ್ಮಾನಕ್ಕೆ ಬರಲು ಯೋಗ್ಯವಾದ ಜ್ಞಾನವನ್ನೂ, ವಿದ್ಯೆಯನ್ನೂ ಕಲಿವ ಅಧಿಕಾರ ಜರ್ಮನ್ ತರುಣರಿಗಿಲ್ಲ!

ಶಾಲೆಗಳೇನು ಮಾಡಬೇಕು?

ಹಿಟ್ಲರನ ಪಾರ್ಟಿಯ ವಿದ್ಯಾಭ್ಯಾಸದ ಸರ್ವಾಧಿಕಾರಿಯೂ, ಬರ್ಲಿನ್ ವಿಶ್ವವಿದ್ಯಾನಿಲಯದ ಪ್ರೊಫೆಸರೂ ಆದ ಪೋಮ್ಲೆರ್ ನಾಜಿ ವಿದ್ಯಾಭ್ಯಾಸದ ವಿಧಾನದ ಗೂಢವನ್ನು ಜಗತ್ತಿಗೆ ಅರುಹಿದ್ದಾನೆ.

"ಪ್ರಪಂಚವೇ ಯುದ್ಧಸನ್ನದ್ಧವಾತ್ತಿರುವ ಈ ಕಾಲದಲ್ಲಿ, ಶಸ್ತ್ರಾಸ್ತ್ರಗಳ ಮೇಲಿನ ಆಗ್ರಹ ಹಾಗೂ ಅಭಿಮಾನಗಳಿಗಿಂತ ಹೆಚ್ಚಾಗಿ ವಿದ್ಯಾರ್ಥಿಗಳಿಂದ ಹಾಗೂ ಉಪಾಧ್ಯಾಯರಿಂದ ಅಪೇಕ್ಷಿಸಲಾಗಿದೆ. ನಮ್ಮ ಇತಿಹಾಸದ ಪ್ರಾಮುಖ್ಯ ದಿನಗಳಲ್ಲಿ, ಸಂದರ್ಭಗಳಲ್ಲಿ, ಸರ್ವಾಧಿಕಾರಿಯು ಭಾಷಣಗಳ ಮೂಲಕ ಮಂದಿಯ ಮುಂದಿಡುವ ಧ್ಯೇಯ, ನಿಯಮ, ಕರ್ತವ್ಯಗಳ ಕುರಿತಾಗಿ ತಿಳಿದು, ಅವುಗಳನ್ನು ಸರಿಯಾದ ರೀತಿಯಲ್ಲಿ, ವಿವರವಾಗಿ ಉಪಾಧ್ಯಾಯರು ಮಕ್ಕಳಿಗೆ ತಿಳಿಸಿ, ಅಸ್ತಿವಾರವನ್ನು ಬಲಪಡಿಸಬೇಕು. ಈ ವಿಚಾರಗಳನ್ನು ಕಲಿಸುವದರಲ್ಲಿ ಚರಿತ್ರೆ ಹಾಗೂ ಭೂಗೋಳ ಪಾಠಗಳು ಅತ್ಯುತ್ತಮ ಸಾಧನಗಳು. ಆದರೆ, ಮಕ್ಕಳ ಮನಸ್ಸಿಗೆ ಮಂದ ಟ್ಟಾಗುವ ರೀತಿಯಿಂದ, ಕಾರ್ಯತಃ ವಿವರಿಸಿ ಹೇಳುವದರಲ್ಲಿ ಎಲ್ಲವೂ ಅಡಗಿದೆ!"

ಮಕ್ಕಳಿಗೇನನ್ನು ಕಲಿಸಲಾಗುತ್ತಿದೆ?

ನಾಜಿ ನಾಯಕರು, ವಿದ್ಯಾಧಿಕಾರಿಗಳು ಉದ್ಘೋಷಿಸುತ್ತಿರುವ ವಿಚಾರಗಳನ್ನು ಮಕ್ಕಳಿಗೆ ಹೇಗೆ ಕಲಿಸುತ್ತಿದ್ದಾರೆ ಎಂಬುದಕ್ಕೆ ಅಲ್ಲಿನ ಎಲಿಮೆಂಟರಿ ಶಾಲಾ ಪಠ್ಯ ಪುಸ್ತಕವೊಂದರಿಂದೊಂದು ಉಪಾಹರಣೆ ಕೊಡಬಹುದು.

"ಯುದ್ಧಕ್ಕೆ ಮುಂಚೆ, ಜರ್ಮನ್ ರಾಷ್ಟ್ರದ ಗಡಿ, ಇಂದಿನ ರಾಷ್ಟ್ರದ ಗಡಿಯೇ ಎಂದು ನಾವು ತಿಳಿದಿದ್ದೆವು. ಇಂದು ಸಂಘಟನೆ ಹಾಗೂ ರಾಷ್ಟ್ರದ ಬೆಳವಣಿಗೆ ಗಡಿಗಳ ಮೇಲೆ ಹೊಂದಿಕೊಂಡಿಲ್ಲವೆಂಬುದನ್ನು ನಾವು ತಿಳಿದಿದ್ದೇವೆ."

ಅದೇ ಪುಸ್ತಕದಲ್ಲಿ ಒಂದುವರೆ ಮಿಲಿಯ ಜನಸಂಖ್ಯೆ ಇರುವ ಅಲ್ಸಾಕ್ ಲೊರೈನ್ ಪ್ರಾಂತ್ಯವು ಜರ್ಮನ್ ರಾಷ್ಟ್ರವೆಂದೂ, ಫ್ರೆಂಚರು ಜರ್ಮನರ ವಂಶವನ್ನೇ ನಾಶಪಡಿಸಲು ಯತ್ನಿಸುತ್ತಿದ್ದಾರೆಂದೂ ಬರೆಯಲ್ಪಟ್ಟಿದೆ.

ಗಣಿತವೂ ಕೂಡ ಇದೇ ಕಥೆಯನ್ನು ಹೇಳುತ್ತದೆ. ತಾಸಿಗೆ ೨೬೦ ಕಿಲೋಮೀಟರ್ ಗಳಂತೆ ಹಾರಾಡುವ ಬಾಂಬೆಸವ ವಿಮಾನವೊಂದಕ್ಕೆ ಮ್ಯೂನಿಚ್‌ನಿಂದ ಸ್ವಾಸ್‌ಬರ್ಗಿಗೆ ಹಾರಲು ಬೇಕಾದ ಸಮಯವೆಷ್ಟು ಎಂಬುದೇ ಗಣಿತ. ವಿಜ್ಞಾನದ ಹೆಸರೇ "ಮಿಲಿಟರಿ ರಕ್ಷಣಾ ವಿಜ್ಞಾನ" ಎಂದು.

ಪರಿಣಾಮ

ಈ ರೀತಿಯ ವಿದ್ಯೆಯಿಂದ ಮಕ್ಕಳಲ್ಲಾಗುವ ಪರಿಣಾಮದ ಕುರಿತಾಗಿ ಹೇಳಬೇಕಾಗಿಲ್ಲ. ನಾಜಿ ಜರ್ಮನಿಯ ತರುಣ ತಂಡದ ಪತ್ರಿಕೆಯಾದ "ಹಿಟ್ಲರ್ ಯುತ್", ಪ್ರಕಟಿಸಿದ ೧೪ರ ಒಳಗಣ ಮಕ್ಕಳಿಂದ ಬರೆಯಲ್ಪಟ್ಟ ಲೇಖನಗಳ ಪುಸ್ತಕದಿಂದ ಒಂದು ಉದಾಹರಣೆ ಓದಿ!

". . . . ಬಿಗಿಲಿನ ಧ್ವನಿ ಕೇಳಿತು. ನಾನು ಎಚ್ಚತ್ತೆ. ನಾವೆಲ್ಲ ಸಾಲಾಗಿ ನಿಂತೆವು. ಪ್ರತಿಯೊಂದು ಕಾರ್ಯವೂ ಬೇಗನೇ ಸರಿಯಿತು. ನಮ್ಮ ಮುಂದೆ ತಪ್ಪಿಸಿಕೊಳ್ಳಲೆಸಿದ ಇಬ್ಬರು—ಅಡಗಿಕೊಂಡು ಬಂದರು. ನಾವೆಲ್ಲರೂ ಸುತ್ತುಗಟ್ಟಿ ಅವರನ್ನು ಮುಗಿಸಿದೆವು. ಅವರೇ ಸ್ವರ್ಗದ ದೂತರು! . . . ."

ರಾಜಕೀಯ ವಿಚಾರದ ಪ್ರಚಾರವು ವಿದ್ಯೆಯ ಮಟ್ಟವನ್ನು ಅತಿಯಾಗಿ ಇಳಿಸಿರುವುದಲ್ಲದೆ, ಮಕ್ಕಳ ಮನಸ್ಸು ವಿದ್ಯೆಗಿಂತ ಹೆಚ್ಚಾಗಿ ಆಟಗಳ ಕಡೆಗೆ, ವ್ಯಾಯಾಮದೆಡೆಗೆ ಸರಿಯುತ್ತಿದೆ. ಪರಿಣಾಮವಾಗಿ, ಜರ್ಮನ್ ತರುಣರಿಗೆ ವಿದ್ಯೆಯೇ ಇಲ್ಲ. ಭಾಷೆ ಚೆನ್ನಾಗಿ ತಿಳಿಯದು; ಗಣಿತ ಸೊನ್ನೆ; ವ್ಯಾಪಾರೀ ವಿಧಾನ ತಿಳಿದಿಲ್ಲ

ಪ್ರಾಥಮಿಕ ವಿದ್ಯಾಭ್ಯಾಸವು ಅತ್ಯಂತ ನಿಕೃಷ್ಟ ಸ್ಥಿತಿಗಿಳಿದಿದೆ ಎಂದು ನಾಜಿ ವರದಿಯಿಂದಲೇ ತಿಳಿದುಬಂದಿದೆ. ಆದರೆ, ಕಡ್ಡಾಯ ಶಿಕ್ಷಣದಿಂದಾಗಿ, ಮಕ್ಕಳ ಸಂಖ್ಯೆ ಹೆಚ್ಚಿದೆ; ನಾಜಿ ತತ್ವದಿಂದ ಉಪಾಧ್ಯಾಯರ ಸಂಖ್ಯೆ ಇಳಿದಿದೆ.

ಉಪಾಧ್ಯಾಯರ ಕೊರತೆಗೆ ಕಾರಣ, ಅವರ ಮೇಲಿರುವ ಹೊರೆಯ ಭಾರ. ಅಲ್ಪ ವೇತನ; ಅಧಿಕ ಜವಾಬ್ದಾರಿ. ಸ್ವಾತಂತ್ರ್ಯದ ಹೆಸರಿಲ್ಲ; ಬದಲು ನಾಜಿ ತತ್ವಕ್ಕೆ ವಿರುದ್ಧವಾದ ಅಭಿಪ್ರಾಯವನ್ನು ಕಲ್ಪಿಸಿದನೆಂದರೆ ಜೀವನದ ನಾಶ!

ಉಪಾಧ್ಯಾಯರ ಕೊರತೆ, ಹಾಗೂ ರಾಜಕೀಯ ವಿಚಾರದಿಂದ ಮಕ್ಕಳನ್ನು ಸೈನಿಕರನ್ನಾಗಿ ಜ್ಞಾನಹೀನ ಬಲಶಾಲಿಗಳಾಗಿ, ಮಾರ್ಪಡಿಸುವುದರಿಂದ, ಜರ್ಮನರ ಜ್ಞಾನದ ಮಟ್ಟ ಇಳಿಯುತ್ತಲಿದೆ. ಬಿಳಿ ಜಗತ್ತಿನ ಜ್ಞಾನಭಂಡಾರ ಕರಗುತ್ತಿದೆ! ನಾಜಿ ತತ್ವಕ್ಕಾಗಿ, ಸರ್ವಾಧಿಕಾರಿಗಳ ಆಜ್ಞೆಗಾಗಿ ತಲೆಕೊಡಲು ಮಾತ್ರ ತಿಳಿದವರ ಸಂಖ್ಯೆ ಬೆಳೆಯುತ್ತಿದೆ; ಬೆಳೆದಿದೆ!

ವಿದ್ಯಾಭ್ಯಾಸದ ಈ ತೆರನ ಪರಿಸ್ಥಿತಿಯಿಂದಾಗಿ, ನಾಜಿ ಜರ್ಮನಿಯು ತನ್ನ ರಾಷ್ಟ್ರ, ತತ್ವ, ನಾಯಕನ ಹೊರತು ಬೇರಾವುದನ್ನೂ ಅರಿಯದಾಗಿದೆ. ಇದರ ಪರಿಣಾಮವಾಗಿ, ತಿಳಿದುಕೊಳ್ಳುವ, ವಿವೇಚಿಸುವ ಜ್ಞಾನ ಮುಂದಿಯಲ್ಲಿಲ್ಲವಾಗಿದೆ. ಒಟ್ಟಿನಲ್ಲಿ ಹಿಟ್ಲರ್ ಇಂದು ತನ್ನ ಆಂತರ್ಯಾಗಗಳಿಂದ, ಸಾಹಸಗಳಿಂದ, ಕನಸಿನ ವೈಭವಗಳಿಂದ ಮುಂದಿಯನ್ನು ಮುನ್ನಡೆಯಿಸುತ್ತಿದ್ದಾನೆ ಅದೇ ಇವರ ಗೆಲುವು; ಆದರೆ ತೃಪ್ತಿಯನ್ನು ತರಲಿಲ್ಲೆಂದಾದೊಡನೆಯೇ, ತೃಪ್ತ ಜೀವನದ ಮಾರ್ಗವನ್ನು ಹಿಡಿಯಲು ಇವರು ಹಿಂದಾಗರು.

ಎತ್ತರವಾಗಿ ಬೆಳೆದಿರುವ ತೆಂಗಿನಗಿಡದ ತುದಿಗೆ ಹತ್ತುವುದಕ್ಕೆ ಅಥವಾ ಜೀವನದಲ್ಲಿ ಅಭಿವೃದ್ಧಿಯ ಮೆಟ್ಟಿಲುಗಳನ್ನು ಹತ್ತಿ ಮೇಲೇರಬೇಕಾದರೆ, ನಿಮಗೆ ಬೇಕಾದಷ್ಟು ದೇಹಶಕ್ತಿ, ಆರೋಗ್ಯ ಇವು ಇರಬೇಕಾದದ್ದು ಆವಶ್ಯಕ

ತಪ್ಪದೆ ಕ್ರಮವಾಗಿ ವಾಟರ್‌ಬರೀಸ್ ಕಾಂಪೌಂಡ್ ಸೇವಿಸಿರಿ. ಆದರಲ್ಲಿರುವ ಮಾಲ್ಟ್ ಮತ್ತು ಕಾಳಜಸತ್ವಗಳು ನಿಮಗೆ ಬೇಕಾದಷ್ಟು ಶಕ್ತಿಯನ್ನೂ ಪುಷ್ಟಿಯನ್ನೂ ಕೊಡುವುವು. ಆದರಲ್ಲಿರುವ ಕಬ್ಬಿಣ ಮತ್ತು ತಾಮ್ರದ ಅಂಶಗಳೂ ಇತರ ಪೋಷಕ ವಸ್ತುಗಳೂ ಇಡೀ ಶರೀರಕ್ಕೆ ಪುಷ್ಟಿ ಕೊಟ್ಟು, ದೇಹದಲ್ಲಿ ಶಕ್ತಿ, ತೇಜಸ್ಸು, ಉತ್ಸಾಹಗಳನ್ನು ಉಂಟುಮಾಡುತ್ತವೆ.

ನಿಮ್ಮ ಭವಿಷ್ಯದ ಶಕ್ತಿ ಮತ್ತು ಸೌಖ್ಯಗಳನ್ನೂ ಆರೋಗ್ಯವನ್ನೂ ರಕ್ಷಿಸಿಕೊಳ್ಳಲು ಇಂದಿನಿಂದಲೇ ಆರಂಭಿಸಿರಿ. ಒಂದು ಸೀಸೆ ವಾಟರ್‌ಬರೀಸ್ ಕಾಂಪೌಂಡ್ ಕೊಂಡುಕೊಳ್ಳಿರಿ. ಎರಡು ಸೈಜ್—೮ ಔನ್ಸ್ ಮತ್ತು ೧೬ ಔನ್ಸ್ ಸೀಸೆಗಳಲ್ಲಿ ಸಿಗುತ್ತದೆ.

YOUR FUTURE ★
THE WELL-BEING OF YOUR DEPENDANTS ★
THE UNCERTAINTY OF TO-MORROW! ★

THESE ARE PROBLEMS WHICH FACE A MAN RELENTLESSLY·

It will not do for you to despair. Human intelligence—its history read with the experience of Wars, Famine, Epidemics, Unemployment, Accidents, has perfected in LIFE INSURANCE a safeguard against the difficulties of Future.

Insurance today is a necessity to the rich and poor. It is an estate—an investment which knows no Depreciation. Take out your Policy in the "Popular". It is a local enterprise and deserves your goodwill and co-operation.

The Popular Insurance Company, Limited,

Head Office: **Mangalore, S. J.**

Bombay Branch:
Prospect Chambers,
Hornby Road.

★

Madras Branch:
13, Thambu Chetty St.,
George Town.

ಕಳೆದ ವಾರ

ಶ್ರೀ. ವಿ. ಡಿ. ಸಾವರ್‌ಕಾರರು

ವೈಸರಾಯರನ್ನು ಕಂಡು ಬಂದರು. ಇದರ ಪರಿಣಾಮವಾಗಿ, ಕಾಂಗ್ರೆಸಿನ ಮತ್ತು ಮುಸ್ಲಿಂ ಲೀಗಿನ ಅಭಿಪ್ರಾಯಗಳನ್ನು ಗಣನೆಗೆ ತೆಗೆದು ಕೊಳ್ಳುವಾಗಲೆಲ್ಲ, ಹಿಂದೂ ಮಹಾಸಭೆಯ ಅಭಿಮತವನ್ನೂ ಪರ್ಯಾಲೋಚಿಸಲಾಗುವುದೆಂದೂ ವೈಸರಾಯರು ಸಾವರ್‌ಕಾರರಿಗೆ ಆಶ್ವಾಸನ ನೀಡಿರುವುದಾಗಿ ಈಗ ಪ್ರಕಟವಾಗಿದೆ. ಈ ವಿಷಯದಲ್ಲಿ ಅಧಿಕಾರಯುಕ್ತವಾದ ಪ್ರಕಟಣೆ ಏನೂ ಇದುವರೆಗೂ ಹೊರ ಬೀಳದಿದ್ದರೂ, ಮೇಲಿನ ವರದಿಯನ್ನು ನಾವು ನಂಬಬಹುದಾಗಿದೆ. ಹಿಂದೂ ಮಹಾಸಭೆಗೆ ಆದರದೇ ಆದ ಜವಾಬುದಾರಿಯು ಹಿಂದೆಯೂ, ಇಂದೂ, ಮುಂದೆಯೂ ಎಂದಿಗಿದ್ದರೂ ತಪ್ಪಿದುದಲ್ಲ. ಆದರಲ್ಲಿಯೂ ಈಗಿನ ಆದರ ಜವಾಬುದಾರಿ ಎಂದರೆ ಬಹಳ ವಿಶೇಷ ತರದ್ದು. ಮಹಾಸಭೆಯ ವರ್ಕಿಂಗ್ ಕಮಿಟಿಯ ಒಂದು ಅಧಿವೇಶನವು, ಬರುವ ತಿಂಗಳಲ್ಲಿಯೇ ನಡೆಯುವುದಾಗಿದ್ದು, ಅದು ತನ್ನ ಕರ್ತವ್ಯಭಾರವನ್ನು ಕಾಲೋಚಿತವಾಗಿ ನಿರ್ವಹಿಸದಿರಲಾರದೆಂದು ಸಂಭಾವಿಸಲಾಗಿದೆ.

* *

ಜೋಧ್ಪುರದ ಮಹಾರಾಜರು

ತಮ್ಮ ಸಂಸ್ಥಾನದಲ್ಲಿ ಶಾಸನವಿರುದ್ಧವಾಗಿ ವರ್ತಿಸಿ ನಿರ್ಬಂಧವಾಸಕ್ಕೆ ಗುರಿಯಾದ ಯಾವತ್ತು ಮಂದಿಯನ್ನೂ ಬಿಡುಗಡೆಮಾಡಬೇಕಾಗಿ ಆಜ್ಞೆ ಮಾಡಿರುವುದಾಗಿ ತಿಳಿದುಬರುತ್ತಿದೆ. ಇಂಡಿಯದ ರಕ್ಷಣೆಗಾಗಿ ಕೆಲಸ ಮಾಡಲು ಆ ಸಂಸ್ಥಾನದ ಯಾವತ್ತು ಮಂದಿಗೂ, ಯಾವತ್ತು ಪ್ರಜೆಗಳಿಗೂ ಏಕಪ್ರಕಾರವಾದ ಸುಸಂದರ್ಭವನ್ನು ಒದಗಿಸಿ ಕೊಡಬೇಕೆನ್ನುವ ಉದ್ದೇಶದಿಂದಲೇ ಈ ಬಿಡುಗಡೆಯ ಆಜ್ಞೆ ಹೊರಟಿತೆಂದು ಹೇಳಲಾಗಿದೆ. ಸಂಸ್ಥಾನದಲ್ಲಿ ಯಾರ ಅತ್ಯುಗ್ರವಾದ ರಾಜಕೀಯ ಅಭಿಪ್ರಾಯಗಳು ಸಂಸ್ಥಾನದ ಅಧಿಕಾರಿಗಳಿಗೆ ಸರಿಬೀಳದೆ, ತನ್ಮೂಲಕ ಅವರಿವರೊಳಗೆ ಜಗಳವೆದ್ದಿತೋ ಅಂತಹವರು ಮುಂದೆ ತಮ್ಮೊಂದಿಗೆ ಸಹಕರಿಸಿ ಹಾಗೆ ಸಂಸ್ಥಾನದಲ್ಲಿ ಶಾಂತ ವಾತಾವರಣವನ್ನು ಕಲ್ಪಿಸಲು ಸಹಾಯ ಮಾಡಬೇಕೆಂದೂ ಮಹಾರಾಜರು ವಿನಂತಿಸಿ ಕೊಂಡಿರುತ್ತಾರೆ. ಇದರ ಪರಿಣಾಮವೂ ರಾಜಕೀಯ ಬಂದಿಗಳ ಬಿಡುಗಡೆಯೂ ಆ ಸಂಸ್ಥಾನದಲ್ಲಿಯೇ ಒಂದು ಹೊಸ ಜೀವಕಳೆಯನ್ನುತುಂಬೀತೆಂಬುದರಲ್ಲಿ ಸಂದೇಹವಿಲ್ಲ. ಹೇಗೂ "ಡಿಫೆನ್ಸ್ ಆಫ್ ಇಂಡಿಯಾ ಆಕ್ಟ್"ನ್ನು ಜಾರಿಗೆ ತಂದೂ ತರುತ್ತಲೂ ಇರುವವರು, ಜೋಧ್ಪುರ ಸಂಸ್ಥಾನದಲ್ಲಿ ಈ ಏರ್ಪಾಡಿನಿಂದ ನಡೆಯುವುದೇನೆಂದು ಕಾದು ನೋಡಲು ಅರ್ಹವೆನಿಸಿದೆ.

* *

ಕತ್ತಲೆಯ ಕೋಣೆಯ ಕಥೆ

ಈ ವಿಷಯದಲ್ಲಿ ಸತ್ಯವೇ ತುಂಬಿರಲಿ, ಅಥವಾ ಅದಿಲ್ಲದಿರಲಿ; ಹೇಗೂ, ಹಾಲ್ವೆಲ್ ಸ್ಮಾರಕವನ್ನು ಅಲ್ಲೇ ಇನ್ನೂ ಇರಿಸಿ ಉಪಯೋಗವಿಲ್ಲವೆಂಬ ಕುರಿತು, ಹಿಂದೂಗಳೂ, ಮುಸ್ಲಿಮರೂ ಕೊನೆಗೆ ಯುರೋಪೀಯರು ಕೂಡ ಏಕಾಭಿಪ್ರಾಯವುಳ್ಳವರೇ ಆಗಿದ್ದಾರೆ. ಪ್ರಕೃತ ಸ್ಥಿತಿಯಲ್ಲಿ, ಯಾವತ್ತು ಸಮಾಜಗಳೂ ಹಿಂದಿನ ಕ್ಲೇಶದಾಯಕವಾದ ಸ್ಮರಣೆಗಳನ್ನು ಮರೆತು ಬಿಡುವ ಹಾಗೆ, ತಕ್ಕ ಪ್ರಯತ್ನಗಳನ್ನು ನಡೆಸುವುದು ಯುಕ್ತವೆಂದೂ, ಆದುದರಿಂದ ಬಂಗಾಳ ಸರಕಾರವು ಆ ಸ್ಮಾರಕವನ್ನು ಅಲ್ಲಿಂದ ಕಿತ್ತು ಬಿಡುವುದೇ ಯೋಗ್ಯವೆಂದೂ ಅವರೆಲ್ಲರೂ ಸಾರಿದ್ದಾರೆ. ಕಲ್ಕತ್ತೆಯ ಬಿಶಪರು ಅದನ್ನು ಅಲ್ಲಿಂದ ತೆಗೆದು ಬಿಡಿ ಎಂದರು. ಕೇಂದ್ರ ಎಸೆಂಬ್ಲಿಯ ಯುರೋಪೀಯ ಮೆಂಬರರಾದ ಮಿ. ಗ್ರಿಫಿತರು "ಒಗ್ಗಟ್ಟಿಗೆ ತಡೆ"ಯಾದ ಇದನ್ನು ಸಾಧ್ಯವಿರುವಷ್ಟು ಬೇಗನೆ ಅಲ್ಲಿಂದ ಜಾರಿಸಿ ಎಂದರು. ಹೀಗಿರುವಾಗ ಬಂಗಾಳ ಸರಕಾರವು ಇನ್ನೂ ಗೌರವಾಭಿಮಾನದಿಂದಲೋ, ಇತರ ಕಾರಣಗಳಿಂದಲೋ ಈ ಕಾರ್ಯವನ್ನು ಜರುಗಿಸುವುದಲ್ಲ. ಅಥವಾ ವಿಳಂಬಿಸುವುದಕ್ಕಾದರೂ ನ್ಯಾಯವಾ[illegible] ಕಾರಣಗಳೇನಿದ್ದೀತು?

* *

ಫ್ರಾನ್ಸಿನ ಪಿಟೆನ್ಸ್ ಸರಕಾರದ

ಶಾಸನಬದ್ಧ ಸ್ಥಾನಮಾನಗಳೇನು? ಫ್ರೆಂಚ್ ಕಾಲನಿಗಳ ಕೆಲ ಕೆಲವು ಅಧಿಕಾರಿಗಳು, ಫ್ರಾನ್ಸ್ ಜರ್ಮನಿಯೊಡನೆ ಮಾಡಿಕೊಂಡ ಸಂಧಿಯನ್ನೊಪ್ಪಿಸಿಕೊಳ್ಳುವುದಿಲ್ಲ; ಅಷ್ಟೇ ಅಲ್ಲ; ಕೊನೆಯವರೆಗೂ ಯುದ್ಧವೇ ಸಿದ್ಧವೆಂದೂ ಅವರು ಪ್ರಕಟಿಸಿದ ಹಾಗಿದೆ. ಫ್ರೆಂಚ್ ಸೋಮಾಲಿಲ್ಯಾಂಡಿನಲ್ಲಿ ಜಿಬೂತಿಯ ಫ್ರೆಂಚ್ ಸರ್ವ ಸೇನಾಪತಿಯು ಜರ್ಮನ್ – ಫ್ರಾನ್ಸ್ ಸಂಧಿಯಂತೆ ನಡೆದುಕೊಳ್ಳಲು ನಿರಾಕರಿಸಿದ್ದಾನೆ. ಮತ್ತೆ ಫ್ರೆಂಚ್ ಇಂಡೋ ಚೀನದ ಹಾಗೂ ಫ್ರೆಂಚ್ ನೌಕಾ ನಿಲ್ದಾಣಗಳ ಭದ್ರತೆಗಾಗಿ, ಫ್ರೆಂಚ್ ಮತ್ತು ಬ್ರಿಟಿಷ್ ಅಧಿಕಾರಿಗಳೊಂದಾಗಿಯೇ ಕಾರ್ಯ ಸಾಗಿಸುತ್ತಿರುವರೆಂದೂ ಸಿಂಗಪುರದಿಂದ ಬಂದ ವಾರ್ತೆ. ಹಾಗಾದರೆ, ಇಂಡೋ ಚೀನದ ವಿಷಯದಲ್ಲಿ ಯಾವ ಮಾತು ನಿಜವೋ, ಅದೇ ಮಾತೇ ಫ್ರೆಂಚ್ ಇಂಡಿಯದ ವಿಷಯದಲ್ಲಿಯೂ ಅನ್ವಯಿಸುತ್ತದೆನ್ನಬಹುದು. ಒಟ್ಟನಲ್ಲಿ, ಫ್ರೆಂಚ್ ಕಾಲನಿಗಳ ಕೊನೆಯ ತೀರ್ಮಾನವೇನಿದ್ದರೂ ಅದು, ಈ ಯುದ್ಧ ಮುಗಿಯುವಲ್ಲಿಯ ವರೆಗೂ ಆಗದೆಂಬಂತೆ ತೋರುತ್ತದೆ.

* *

ಸಿರಿಯವು ಫ್ರೆಂಚರ ಹಿಡಿಯೊಳಗೆ

ಅಡಗಿರುವ ಒಂದು ದೇಶ. ಈಗ ಫ್ರಾನ್ಸು ಕಾಲುಜಾರಿದ ಬಳಿಕ, ಸಿರಿಯದ ಮುಂದಿನ ವ್ಯವಸ್ಥೆ ಏನೆಂದು ನೆರೆಕರೆಯ ರಾಷ್ಟ್ರಗಳಾದ ಇರಾಕ್, ಟರ್ಕಿ ಮೊದಲಾದುವು ಚರ್ಚಿಸತೊಡಗಿದ್ದಾವೆ. "ಏಕ್ಸಿಸ್" ರಾಷ್ಟ್ರಗಳು ಸಿರಿಯದ "ಭಾಗ್ಯವಿಧಾತ"ವಾಗಿರಕೂಡದೆಂದು ಅವುಗಳ ಅಭಿಮತ; ಆದರೆ ಸಿರಿಯಾ ಇನ್ನು ಮುಂದೆ "ಮ್ಯಾಂಡೇಟ್"ಗೆ ಒಳಗಾದ ರಾಷ್ಟ್ರವಾಗಿ ಉಳಿಯಬಾರದೆಂದೂ ಅವುಗಳ ಮನೋಗತ. ಈ ವಿಷಯದಲ್ಲಿ ಇರಾಕಿನ ವಿದೇಶೀ ಮಂತ್ರಿ ಮಾತಾಡುತ್ತ "ಸಿರಿಯನರು ಸ್ವಾತಂತ್ರ್ಯಕ್ಕೆ ಅರ್ಹರಾಗಿದ್ದಾರೆ. ಆದುದರಿಂದ ಅವರ ಭವಿಷ್ಯದ ಕೊನೆಯ ತೀರ್ಮಾನವನ್ನು ಅವರಿಗೇ ಬಿಡುವುದು ಲೇಸು" ಎಂದಿದ್ದಾರೆ. ಆದರೆ ಸಿರಿಯದ ಸಮಸ್ಯೆಯು ಹೀಗೆ ಕೊನೆಗೊಳ್ಳುವುದು ಬ್ರಿಟಿಷರಿಗೆ ಇಷ್ಟವಾದೀತೇ? ಪ್ರಜಾಸತ್ತೆಯ ಸ್ವಾತಂತ್ರ್ಯದ ವಿಜಯಕ್ಕಾಗಿ ಬ್ರಿಟಿಷರು ನಿಜವಾಗಿಯೂ ಆತುರರಾಗಿದ್ದರೂ, ಪ್ರಾಯಶಃ ಸಿರಿಯದ ಅದೃಷ್ಟವು ರೂಪಿಸಲ್ಪಡುವುದು ಆ ಜನಗಳ ಇಷ್ಟದಂತಲ್ಲ; ಮೌಸಲ್ ಎಣ್ಣೆಯ ಗನಿಗಳನ್ನೂ, ಮೆಡಿಟರೇನಿಯನ್ ಬಂದರುಗಳನ್ನೂ ಸಂಧಿಸುವ ಆ ನಳಿಗೆಯ ಮಾರ್ಗ ಯಾವುದೋ ಅದೇ ಅದನ್ನು ನಿರ್ಧರಿಸುವುದು ಎಂದು ಸಂದೇಹಪಡುವವರೂ ಇದ್ದಾರೆ.

* *

[illegible]ರ್ಮನಿಯ ಮಧ್ಯಸ್ಥಿಕೆಯೇ?

[illegible]ರ್ಮನಿ, – ರುಮೇನಿಯಾ, ಬಲ್ಗೇರಿಯಾ [illegible]ತ್ತು ಹಂಗೆರಿಗಳೊಳಗಿನ ವಿವಾದವನ್ನು ತಾನು [illegible]ಧ್ಯಸ್ಥಿಕೆ ವಹಿಸಿ ರಾಜಿಯಿಂದ ತೀರಿಸುವೆನೆಂದಿದೆ. [illegible]ದರೇನು? ಅಲ್ಲಿ ರಾಜಿಯಿಂದ ಇದರ ಇತ್ಯರ್ಥ [illegible]ಗದಿದ್ದರೆ, ಅವುಗಳೊಳಗೆ ಹೊಡೆದಾಟ ನಡೆ[illegible]ವುದು ಸಂಭವವೆಂದಲ್ಲವೇ? ಬಾಲ್ಕನಿನಲ್ಲಿಯಾಗಲೀ, ಮಧ್ಯ ಯುರೋಪಿನಲ್ಲಿಯಾಗಲೀ ಸದ್ಯಕ್ಕೆ ಯುದ್ಧ ನಡೆಯುವುದು ಜರ್ಮನಿಗೆ ಕೊಂಚವೂ ಇಷ್ಟವಿಲ್ಲ—ಕಾರಣ, ಅದರಿಂದ ಜರ್ಮನಿಯ ಸರಬರಾಯಿಗೆ ತೊಂದರೆ ಬರುತ್ತದೆ! ಆದುದರಿಂದ, ಜರ್ಮನಿಯು ತನ್ನ ಹಿಂದಿನ ಸೂತ್ರಚಾಲನೆಯನ್ನೆಲ್ಲ ಕೈಬಿಟ್ಟು, ಇಂದು ಹೊಸದಾಗಿ ಈ ಮಧ್ಯಸ್ಥರ ವೇಷ ಹಾಕಿರುವುದರಲ್ಲೇನೂ ಆಶ್ಚರ್ಯವಿಲ್ಲವೆನ್ನಿ. ಆದರೆ, ಈ ಮಧ್ಯಸ್ಥರ ಕಾರ್ಯವೇನೂ ಎಣಿಸಿದಷ್ಟು ಸುಲಭವಾಗಿಲ್ಲ. ಅತ್ತ ಬೆಸ್ಸರೇಬಿಯಾ ಮುಂತಾದ ಪ್ರಾಂತಗಳನ್ನು, ಈಗ ತಾನೇ ರಷ್ಯಕ್ಕೆ ಕೊಟ್ಟು ಕುಳಿತ ರುಮೇನಿಯಕ್ಕೆ, ಇನ್ನೂ ತನ್ನ ಪ್ರಾಂತಗಳನ್ನು ಬೇರೆಯವರಿಗೆ ಬಿಟ್ಟುಕೊಡಲು ಮನಸ್ಸಿಲ್ಲವಾಗಿ, ಹಂಗೆರಿ—ಬಲ್ಗೇರಿಯಗಳು ಮುಂದೊತ್ತಿದಲ್ಲಿ, ಯುದ್ಧವೇ ಸಿದ್ಧವೆಂಬುದು ಖಂಡಿತ. ಹಾಗಿರುವಲ್ಲಿ, ಜರ್ಮನಿ ಬಹು ಜಾಗರೂಕತೆಯಿಂದ ತಳೆಯ ಸ್ನೇಹಿತನಾದ ಹಂಗೇರಿಯವನ್ನೂ ಸಂತೈಸಬೇಕು; ಹೊಸ ಮಿತ್ರನಾದ ರುಮೇನಿಯದ ಬೆನ್ನೂ ತಟ್ಟಬೇಕು; ನಡುವೆ ಬಲ್ಗೇರಿಯಕ್ಕೆ ಗಾಳಿ ಹಾಕುವುದರೊಡನೆ, ಎಣ್ಣೆಯ ಬಾವಿಗಳೂ ಗೋಧಿ ಹೊಲಗಳೂ ಕೈತಪ್ಪದಂತೆ ನೋಡಿಕೊಂಡು, ರಷ್ಯದ ಸ್ನೇಹವನ್ನೂ ಹೆಚ್ಚಿಸಿಕೊಳ್ಳಬೇಕು. ಇದಿಷ್ಟು ಕೆಲಸವೂ ಪಾಪ,–ಒಂದು ಜರ್ಮನಿಗೆ! ಸಾಧ್ಯವಾದೀತೇ? ಮುಖ್ಯವಾಗಿ, ಟ್ರಾನ್ಸಿಲ್ವೇನಿಯಾ, ದೊಬ್ರೂಜದ ಸಮಸ್ಯೆ, ಜರ್ಮನಿಯಿಂದ ಬಗೆ ಹರಿದೀತೇ? ನೋಡುತ್ತಿರುವ!

* *

ಟೋಕಿಯೋದ ಮಂತ್ರಿಮಂಡಲದಲ್ಲಿ

ಗಡಿಬಿಡಿಯುಂಟಾಗಿದೆ. ಎಡ್ಮಿರಲ್ ಯೋನೈ ಯವರು ರಾಜೀನಾಮೆ ಬರೆದು ಒಪ್ಪಿಸಿದ್ದಾರೆ. ಯುದ್ಧ ಮಂತ್ರಿಗಳಾದ ಜನರಲ್ ಹಾಟಾರವರೂ ರಾಜಿಕೊಟ್ಟಿದ್ದಾರೆ. ಇದಕ್ಕೆಲ್ಲ ಕಾರಣ—ಜಪಾನಿನ ಮಿಲಿಟರಿ ಉರಿಪಿಂಡಗಳ ಪ್ರತಾಪವೇ. ಇನ್ನು ಯಾರು ಹೊಸ ಮಂತ್ರಿಮಂಡಲವನ್ನು ಜಪಾನಿಗಾಗಿ ರಚಿಸುವರೋ ತಿಳಿಯದಾದರೂ, ಪ್ರಿನ್ಸ್ ಕುನೋಯ್‌ಯವರೋ, ಮತ್ತಾರೋ ಅದನ್ನು ರಚಿಸುವರೆಂಬುದು ನಿರ್ವಿವಾದ. ಮತ್ತೆ ಈ ಸರಕಾರದ ಧೋರಣೆ ಏನೋ ಅದು ಮುಂದಿನ ಮಾತು. ಆದರೆ ಆ ಹೊಸ ಸರಕಾರವು, ಚೀನಾ ಯುದ್ಧದಲ್ಲಿ ಒಂದು ಬಲವಾದ ಕೀಲನ್ನು ಜಡಿಯದಿರದೆಂಬ ಕೆಲವರ ಈ ಊಹೆ ಕಾರ್ಯತಃ ನಿಜವಾದರೂ ಆಗಬಹುದು. ಏಕೆಂದರೆ, ಈಗಿನ ಜಪಾನಿನ ಧೋರಣೆಯಿಂದ ಚಾಂಗ್–ಕೈ–ಶೇಕರನ್ನು ಸೋಲಿಸಲಾಗಲಿಲ್ಲ; ವಾಂಗ್‌ಚಿಂಗ್‌ವೀಯವರ ಪ್ರತಿಷ್ಠೆಯಿಂದ ಜಪಾನಿಗೆ ಲಾಭ ದೊರಕಲಿಲ್ಲ. ಹಾಗಾಗಿ ಜಪಾನೀಯರು ಜಡಪಡಿಸುತ್ತಿದ್ದು ಅವರು "ಏಕ್ಸಿಕ್" ರಾಷ್ಟ್ರಗಳ ಗೆಳೆತನಕ್ಕಾಗಿ ಪೇಚಾಡುತ್ತಿದ್ದಾರೆ. ಇತ್ತ ಬ್ರಿಟಿಷರಿಗೂ ಕೈತುಂಬ ಕೆಲಸವಿರುವುದರಿಂದ, ಅವರೂ ಜಪಾನರ ಮಾತಿಗೆಲ್ಲ ತಲೆಯಾಡಿಸಬೇಕಾಗಿ ಬಂದಿದೆ ಅಂತೂ ಸಮಯ ಸಾಧಿಸುತ್ತಿರುವ ಜಪಾನೀಯರು, ಹೊಸ ಸರಕಾರದ ಸ್ಥಾಪನೆಯಿಂದ ಏನು ಲಾಭ ಹೊಡೆಯುವರೋ ನೋಡಬೇಕಾಗಿದೆ.

* *

ಶ್ರೀ. ಜಿನ್ನಾ ಸಾಹೇಬರಿಗೆ ಕೋಪ ಬಂದಿದೆ!

ಬಂಗಾಳ ಮತ್ತು ಪಂಜಾಬಿನ ಪ್ರಧಾನರು ಕಾಂಗ್ರೆಸ್ ಪ್ರೆಸಿಡೆಂಟರೊಡನೆ ರಾಜಕೀಯ ವಿಷಯಗಳನ್ನು ಚರ್ಚಿಸಿದುದಷ್ಟೇ ಸಾಲದೆ, ಸರ್ ಸಿಕಂದರ್ ಹಯಾತ್‌ಖಾನರು ಹಿಂದೂ ಮಹಾಸಭೆಯ ಅಧ್ಯಕ್ಷರೊಡನೆಯೂ ಮಾತಾಡುವ ಮಹಾಪರಾಧವನ್ನೂ ಮಾಡಿಬಿಟ್ಟಿದ್ದಾರೆ. ಹೀಗೆ ಮಾಡಬಹುದಿದ್ದಿತೇ? ಈ ಸಂಬಂಧವಾಗಿ ಶ್ರೀ. ಜಿನ್ನಾರವರು ತಮ್ಮದೊಂದು ಪ್ರಕಟಣೆ ಹೊರಡಿಸಿ, ಹಿಂದೂ ಮುಖಂಡರಿಗೆ ಹಿಂದೂ ಮುಸ್ಲಿಂ ಸಮಸ್ಯೆಗಳನ್ನು ಚರ್ಚಿಸಬೇಕಿದ್ದರೆ, ತಮ್ಮೊಡನೆ ಮಾತ್ರ ಚರ್ಚಿಸಬೇಕಿದ್ದಿತೆಂದೂ ಇತರರೊಡನೆ ಅಲ್ಲವೆಂದೂ ಅದರಲ್ಲಿ ನಮೂದಿಸಿದ್ದಾರೆ! ಇಷ್ಟರ ಮೇಲೂ, ಜಿನ್ನರ ಈ ಅಪ್ಪಣೆ ಹೊರಟ ಮೇಲೂ ಸರ್ ಸಿಕಂದರರು ತಾವೊಬ್ಬ ಮಧ್ಯಸ್ಥರೆಂಬಂತೆ, ಶ್ರೀ. ಸಾವರ್ಕರರನ್ನು ಕಂಡರೆನ್ನುವಾಗ, ಲೀಗಿನ ಗುಂಕಾರರಾದ ಶ್ರೀ. ಜಿನ್ನಾರಿಗಾದರೂ ಸಿಟ್ಟು ಬಾರದೆ ಹೇಗಿದ್ದೀತು? ಆದರೆ, ಇದರಿಂದ ಶ್ರೀ. ಜಿನ್ನಾರವರು, ಎಷ್ಟು ಕಾಲ ತಮ್ಮ ಪ್ರಾಶಸ್ತ್ಯವನ್ನೇ ಸ್ಥಾಪಿಸಿಕೊಂಡು, ಬಂಗಾಳ, ಪಂಜಾಬಿನ ಪ್ರಧಾನರನ್ನೂ "ಶೂನ್ಯ ಮೂರ್ತಿ"ಗಳಂತೆ ಮಾಡಿಡಲು ಯತ್ನಿಸುವರೋ ಎಂದು ಒಬ್ಬನು ಆಶ್ಚರ್ಯದಿಂದ ಮೂಗಿನ ಮೇಲೆ ಬೆರಳಿಡುವಂತಾಗಿದೆ!

ಶಾಸ್ತ್ರೀಯ ಅಮೂಲ್ಯ

ಔಷಧಗಳು

ಅಮೃತಾಕುಂಕುಮ ತೈಲ:— ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡು ಹಿಡಿಯಲ್ಪಟ್ಟುದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕ ಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1–2–0. ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧಮಹರ್ಷಿಗೆ ಅಶ್ವಿನೀದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳೆಂಬ ಮಕ್ಕಳ ವ್ಯಾಧಿಗಳಿಗೂ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂ. 3–0–0. ಅಂಚೆವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದ ಔಷಧಿ.

ಬಾಣಂತಿಯರ ನವಜೀವನಕ್ಕೆ ನಂದನ ವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಅಂಕುಚಿತಮಾಡುವುದು.

ರಸಾಯನ ಗುಣದಿಂದ ಬಾಣಂತಿಯು–ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ: ಬಾಟ್ಲಿ 1ಕ್ಕೆ ರೂ. 2–0–0.

ಪೋಸ್ಟೇಜು ಬೇರೆ ಬೇಕು.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು, ದ. ಕನ್ನಡ.

ಶ್ರೀ। ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ, ಇವರನ್ನು ಮೈಸೂರು ಸಂಸ್ಥಾನದ ನಮ್ಮ ಏಜೆಂಟರನ್ನಾಗಿ ನೇಮಕಮಾಡಿಯಿದೆ.

Money to Lend

LOANS ARE GRANTED AT COMPETITIVE RATES ON BULLION, GOLD ORNAMENTS, GOVERNMENT PAPER, GOODS AND PRODUCE, SHARES & OTHER VALUABLE SECURITIES. ENQUIRE OF ANY OF OUR THIRTY-SEVEN OFFICES.

RESOURCES OF A CRORE

Estd. 1906

CANARA BANK, LIMITED

ವಿದೇಶ

ಬಾಲ್ಕನಿನಲ್ಲಿನ ಘಟನಾವಳಿಗಳು

ಈಚಿಗೆ ನಡೆದ ಮ್ಯುನಿಚಿನ ವಿೂಟಿಂಗಿನಲ್ಲಿ, ಹಂಗೆರಿಯದ ಪ್ರಧಾನರೇ ವೊದಲಾದವರು ಜರ್ಮನ್ ಮುಖಂಡರನ್ನು ತುಂಬಾ ಒತ್ತಾಯ ಪಡಿಸಿದಂತೆ ತಿಳಿದು ಬರುತ್ತಿದೆ. ಹಂಗೆರಿಯು ಈಗ ತನಗೆ ರುಮೇನಿಯದಿಂದ ಟ್ರಾನ್ಸ್‌ಸಿಲ್ವೇನಿಯಾ ಪ್ರಾಂತವು ಸಿಕ್ಕಲೇ ಬೇಕೆಂದು ಸಾಧಿಸಿದುದಾಗಿಯೂ, ಈ ಕೇಳಿಕೆಯಲ್ಲಿ ಹಂಗೆರಿಯಕ್ಕೆ ಇಟೆಲಿಯ ಬೆಂಬಲವೂ ಇದ್ದಿತಾಗಿಯೂ ಹೇಳಲಾಗಿದೆ. ಜರ್ಮನಿ ಏನೋ ಹಂಗೆರಿ ತನ್ನ ಹಕ್ಕುಗಳನ್ನು ಸ್ಥಾಪಿಸಲು ಮುಂದಾದಲ್ಲಿ ಬಾಲ್ಕನಿನಲ್ಲಿ ಯುದ್ಧ ತಪ್ಪದೆಂದು ತಿಳಿದಿದೆ. ಇಷ್ಟರಲ್ಲಿ ರಷ್ಯವೂ ತನ್ನ ಸೇನೆಗಳನ್ನು ರುಥೇನಿಯಾ ಗಡಿಗಳಿಗೆ ತಂದು ನಿಲ್ಲಿಸಿದೆ. ರಷ್ಯದ ಅಭಿಪ್ರಾಯದ ಮೇರೆಗೆ, ರುಥೇನಿಯವು ಉಕ್ರೈನಿನ ಒಂದು ಭಾಗವಾಗಿರಬೇಕಲ್ಲದೆ, ಸ್ಲಾವೋಕಿಯವೂ ಸೋವಿಯೆಟ್ ಯೂನಿಯನಿನೊಳಗೇ ಸೇರಬೇಕೆಂದೂ ಇದೆ.

ಜರ್ಮನಿ–ರುಮೇನಿಯಾ

ರುಮೇನಿಯವು ಜರ್ಮನಿಯ ಕಡೆಗೆ ತನ್ನ ರಕ್ಷಣೆಗಾಗಿ ಕೈನೀಡಿದೆ. ಕಾದಾಟವಿಲ್ಲದೆ ಟ್ರಾನ್ಸಿಲ್ವೇನಿಯವನ್ನು ಬಿಟ್ಟು ಕೊಡುವುದಕ್ಕಿಂತ, ಹಂಗೆರಿಯದ ಮೇಲೆ ಯುದ್ಧ ಹೂಡುವುದೇ ಶ್ರೇಯಸ್ಕರವೆಂದು ರುಮೇನಿಯಾ ನಿಷ್ಕರ್ಷಿಸಿದೆ. ಅರಸರಾದ ಕೆರೋಲರು ಇದೊಂದು ಪರೀಕ್ಷೆಯ ಸಮಯವೆಂದು ಭಾವಿಸಿದ್ದಾರೆ. ಬರ್ಲಿನ್ ಬುಡಪೆಸ್ಟಿನ ಸೈನ್ಯಗಳಿಗೆ ಟ್ರಾನ್ಸಿಲ್ವೇಲಿಯದೊಳಗೆ ನುಗ್ಗಲು ಅನುಮತಿ ಕೊಟ್ಟರೆ, ಆಗ ಅರಸರಾದ ಕೆರೋಲರ ಸೇನೆಗಳು ಅವನ್ನು ಎದುರಿಸುವುವು ಅಲ್ಲದೆ, ಜರ್ಮನರ ಕೈಗೆ ರುಮೇನಿಯದ ಎಣ್ಣೆಯ ಬಾವಿಗಳನ್ನು ಬೀಳಗೊಡುವುದಕ್ಕಿಂತ ಅವುಗಳನ್ನು ಆಲ್ಲಿಯೇ ಧ್ವಂಸ ಮಾಡುವ ಆಲೋಚನೆಯನ್ನೂ ಮಾಡುವುವು. ಈ ಯೋಚನೆಯನ್ನು ರಷ್ಯವೂ ಒಪ್ಪಿದಂತೆ ತೋರುತ್ತದೆ.

ರಷ್ಯಾ ರುಮೇನಿಯಾ

ಇವೆರಡು ದೇಶಗಳೊಳಗಿನ ಪರಸ್ಪರ ಸಂಬಂಧವು ಬಿಗಿಯಾಗಿದೆ. ಜರ್ಮನರ ಕೈಗೆ ಬೀಳುವ ಅಪಾಯಕ್ಕೊಳಗಾಗುವುದಕ್ಕಿಂತ ಡ್ಯಾನೂಬಿನ ಮುಖದಲ್ಲಿರುವ ರೇವುಗಳನ್ನೆಲ್ಲ ತಾನು ಅತಿಕ್ರಮಿಸಲು ಅಪ್ಪಣೆ ಕೊಡಬೇಕಾಗಿ ರಷ್ಯಾ ರುಮೇನಿಯವನ್ನೊತ್ತಾಯ ಪಡಿಸುತ್ತಿರುವುದಾಗಿ ವಾರ್ತೆ. ಆದರೆ ರಷ್ಯಾ ಡಾರ್ಡನೆಲ್ಸ್ ಮತ್ತು ಬೊಸ್ಪರಸುಗಳಲ್ಲಿ ತನಗೆ ಟರ್ಕಿ ಪ್ರವೇಶ ಕೊಡುವಷ್ಟು ಕಾಲ ಇಸ್ತಾಂಬೂಲಿನ ಮೇಲೆ ತನಗೆ ಕಣ್ಣಿಲ್ಲವೆಂದು ಟರ್ಕಿಯನ್ನು ಸಮಾಧಾನಗೊಳಿಸಲೂ ಪ್ರಯತ್ನಿಸುತ್ತಿದೆ.

ವಾನ್ ಪಾಪೆನ್ ಸಾಹೇಬರು ಬಹಳ ಕೆಲಸದಲ್ಲಿದ್ದಾರೆ!

ಅಂಕಾರದಲ್ಲಿರುವ ಜರ್ಮನ್ ರಾಯಭಾರಿಗಳಾದ ವಾನ್ ಪಾಪೆನ್ ಸಾಹೇಬರು ಟರ್ಕಿ ಸರಕಾರಕ್ಕೂ ರಷ್ಯಾ ಸರಕಾರಕ್ಕೂ ತಲೆ ತಲೆ ಗಂಟು ಹಾಕಲು ಬಹಳ ಪೇಚಾಡುತ್ತಿದ್ದಾರೆ. ಆಷ್ಟಾದರೆ ಅವರ ಕೆಲಸವಾಯಿತು. ಆದರೆ ಈ ಜರ್ಮನರ ಪ್ರಚಾರ ಕಾರ್ಯದ ಹಣೆಯಬರಹವನ್ನು ಬಲ್ಲ ತುರ್ಕಿಯವರು ಈ ರಾಯಭಾರಿಗಳ ಮಾತಿಗೆ ಮರುಳಾಗದೆ, ಆಂಗ್ಲೋ–ಟರ್ಕಿ ಸಂಧಿಯನ್ನೇ ಬಲವಾಗಿ ಆಶ್ರೈಸಿರುವುದರಿಂದ ಪಾಪೆನ್ ಸಾಹೇಬರ ಪ್ರಯತ್ನಗಳೆಲ್ಲ ನೀರಲ್ಲಿ ನಾಡಿದ ಹೋಮದಂತಾಗಿದೆ. ಹಾಗೇ ಇತ್ತ ರಷ್ಯವೂ ಪಶ್ಚಿಮ ಭಾಗದ ರಕ್ಷಣೆಗಾಗಿ ಕಾರ್ಯ ನಡೆಸುತ್ತಿದ್ದರೂ, ಸಾಧ್ಯವಿದ್ದರೆ ದೊಡ್ಡ ಕಾದಾಟಗಳಿಂದ ದೂರವಿರಬೇಕೆಂದು ರಷ್ಯದ ಮನೋಗತ.

ಅಮೆರಿಕದಲ್ಲಿ

ಅಮೆರಿಕದ ಅಧ್ಯಕ್ಷ ಪದವಿಯ ಉಮೇದುವಾರರಾಗಿ, ಯು ಎಸ್. ಡೆಮೊಕ್ರೆಟಿಕ್ ಪಾರ್ಟಿಯವರು, ತಮ್ಮ ಕಡೆಯಿಂದ ಮೂರನೆಯ ಬಾರಿಯಾಗಿ ಪ್ರೆಸಿಡೆಂಟ್ ರೂಜ್‌ವೆಲ್ಟರನ್ನು ನಾಮಕರಣ ಮಾಡಿದ್ದಾರೆ. ಪ್ರೆಸಿಡೆಂಟ್ ರೂಜ್‌ವೆಲ್ಟರು ಕೃಷಿ ಶಾಖೆಯ ಸೆಕ್ರೆಟರಿಗಳಾದ ಮಿ ವಾಲೇಸ್‌ರನ್ನು ವೈಸ್ ಪ್ರೆಸಿಡೆಂಟರಾಗಿರಿಸಿದ್ದಾರೆ.

ಬ್ರಿಟಿಷ್ ಜಪಾನರ ಕರಾರು

ಹಾಂಗ್‌ಕಾಂಗ್ ಮತ್ತು ಬರ್ಮಾ [illegible] ವಾಗಿ ಚೀನಕ್ಕೆ ಯುದ್ಧ ಸಾಮಗ್ರಿಗಳನ್ನು ಗೊಡಿಸಬಾರದು, ಆ ಮಾರ್ಗವನ್ನು ಮು[illegible] ಬೇಕೆಂದು ಕೇಳಿದ ಜಪಾನೀಯರ ಕೇಳಿಕೆಯ[illegible] ಮನ್ನಿಸಿ, ಬ್ರಿಟಿಷ್ ಸರಕಾರವು ಹಾಗೇ [illegible] ಲೆಂದೊಪ್ಪಿದೆ. ಆದರೆ ಇದು ತಾತ್ಕಾಲಿಕವಾದು ದೊಂದು ವಿಪರ್ಯಾಡೆಂದು ಹೇಳಲಾಗಿದೆ ಸಾಮಾನ್ಯ ಸಮಯದಲ್ಲಿ ಬ್ರಿಟಿಷ್ ಸರಕಾರವು ಇಂತಹ ಸಂಧಿಗೊಪ್ಪುತ್ತಿರಲಿಲ್ಲ; ಯುದ್ಧದ ದೆಸೆಯಿಂದ ಜಪಾನೀಯರು ಹೇಳಿದುದಕ್ಕೆ ಹೂಂಗುಟ್ಟಬೇಕಾಯಿತೆಂದು ಪತ್ರಿಕೆಗಳ ಹೇಳಿಕೆ!

ಜಪಾನೂ ವಿಕ್ಸಿಕ್ ರಾಷ್ಟ್ರಗಳೂ

ಪೂರ್ವ ಆಸ್ಯದಲ್ಲಿನ ಬ್ರಿಟಿಷ್ ಮತ್ತು ಫ್ರೆಂಚರ ಪ್ರಾಬಲ್ಯವನ್ನು ಮುರಿಯುವುದೂ, ಜರ್ಮನಿ ಮತ್ತು ಇಟೆಲಿಗಳ ಸಖ್ಯವನ್ನು ಸಂಪಾದಿಸುವುದೂ ಇವೆರಡು ಜಪಾನಿನ ಸದ್ಯದ ಉದ್ದೇಶಗಳೆಂದು ಪ್ರಕಟವಾಗಿದೆ. ರೂಜ್‌ವೆಲ್ಟರ ನಾಮಕರಣದ ವಿಷಯದಲ್ಲಿ ಜಪಾನು ಆಸಕ್ತಿ ವಹಿಸಿಲ್ಲವಂತೆ; ಆದರೆ ಆಮೆರಿಕೆದ ವಿದೇಶೀ ನೀತಿಯಲ್ಲಿ ಮುಖ್ಯವಾಗಿ ದೂರದ ಪೂರ್ವದ ವಿಚಾರದ ಧೋರಣೆಯಲ್ಲಿ ಮಾತ್ರ ಜಪಾನಿಗೆ ಅಧಿಕ ಆಸಕ್ತಿ ಇರುವುದಾಗಿ ಜಪಾನೀ ಪ್ರಮುಖ ವಾರ್ತಾಪತ್ರಿಕೆಯೊಂದು ಹೇಳುತ್ತಿದೆ!

ಜಿಬ್ರಾಲ್ಟರಿನ ಮೇಲೆ ದಾಳಿ

ಒಂದು ಶತ್ರು ವಿಮಾನವು ಇಲ್ಲಿ ಆಕ್ರಮಿಸಿ ಬಾಂಬು ಹಾರಿಸಿದುದರ ಫಲವಾಗಿ ೩ ಮಂದಿ ಸತ್ತರು. ಇತರ ನಷ್ಟಗಳೇನೂ ವಿಶೇಷವಾಗಿಲ್ಲ. ಈ ರೀತಿಯ ದಾಳಿ ಇದೇ ಪ್ರಥಮವದ್ದು.

ಇಂಗ್ಲೆಂಡಿನ ಮೇಲೆ ವಿಮಾನ ದಾಳಿ

ದಕ್ಷಿಣ ಪೂರ್ವ ಇಂಗ್ಲೆಂಡಿನ ಮೇಲೆ ನಾಜಿ ವಿಮಾನಗಳು ದಾಳಿ ನಡೆಸಿ, ಬಾಂಬು ಸುರಿಸಿ ಓಡಿದುವು. "ಹೊಡೆ, ಓಡು" ಎಂಬುದಿಷ್ಟು ಅವುಗಳ ಕಾರ್ಯ. ಆದರೆ ಇದರಿಂದ ಆಲ್ಲಿದ್ದ ಯಾವ ಹಡಗುಗಳಿಗೂ ನಷ್ಟವಾಗಿಲ್ಲ.

ಇಂಗ್ಲೆಂಡಿನ ರಕ್ಷಣಾ ಕಾರ್ಯ

ಇಂಗ್ಲೆಂಡಿನ ರಕ್ಷಣೆಗಾಗಿ ಸರ್ವ ಸಿದ್ಧತೆಯೂ ನಡೆದಿದೆ. ಜರ್ಮನ್ ವಿಮಾನಗಳು ವೊದಲಿನಂತೆ ಇಲ್ಲಿ ದಾಳಿ ನಡೆಸಲು ಧೈರ್ಯ ಪಡುವುದಿಲ್ಲ — ಹೀಗೆಂದು ಲಾರ್ಡ್ಸರ ಮಂದಿರದಲ್ಲಿ ಆಹಾರದ ಶಾಖೆಯ ಮಂತ್ರಿಯು ನುಡಿದರು.

ಜರ್ಮನಿಯ ಮೇಲೆ

ರೋಟರ್‌ಡ್ಯಾಂ, ಬೊಲೋನ್ ವೊದಲಾದ ಹಲವು ಕಡೆಗಳಲ್ಲಿ ಬ್ರಿಟಿಷ್ ವಿಮಾನಗಳು ದಾಳಿ ನಡೆಸಿ ನಷ್ಟವನ್ನು ಉಂಟುಮಾಡುವುದರೊಂದಿಗೆ ಎಸ್ಸೆನಿನ "ಕ್ರುಪ್ಸ್ ವರ್ಕ್ಸ್"ನ ಮೇಲೂ ಆಘಾತ ನಡೆದು ತಕ್ಕಷ್ಟು ಗಾಸಿಯಾಗಿದೆ ಎಂದೂ ತಿಳಿದು ಬಂದಿದೆ. ಆಲ್ಲದೆ ಜಲಯುದ್ಧದಲ್ಲಿ ಕ್ರೀಟಾದ ಬಳಿಯಲ್ಲಿ ಇಟೆಲಿ ಕ್ರುಯಿಜರ್ ಒಂದು ಮುಳುಗಿಸಲ್ಪಟ್ಟರುವುದಾಗಿಯೂ ಸುದ್ದಿ.

ಹಿಟ್ಲರನ ಭಾಷಣ

ರಿಚ್‌ಸ್ಟಾಗಿನಲ್ಲಿ ಭಾಷಣಮಾಡುತ್ತ ಹಿಟ್ಲರನು ತಾನು ಸಂಪನ್ನನೆಂದೂ, ಫ್ರಾನ್ಸ್ ಇಂಗ್ಲೆಂಡುಗಳೇ ಈ ಯುದ್ಧಕ್ಕೆ ಕಾರಣಭೂತವಾದುವುಗಳೆಂದೂ ಆತ್ಮಸ್ತುತಿಯ ಮತ್ತು ಪರನಿಂದ್ಯೆಗಳ ಮಾತಾಡಿದನು. ವಿಜಯಿಯಾದವನ ಸೊಕ್ಕಿನ ನುಡಿಗಳಿಂದ ಭಾಷಣವನ್ನು ಮುಂದರಿಸುತ್ತ ಇದುವರೆಗೆ ನಡೆದ ಯುದ್ಧಕಾರ್ಯಗಳ ಸಿಂಹಾವಲೋಕನ ಮಾಡಿ, ಮುಂದೆ ತಾನು, ಇಷ್ಟವಿಲ್ಲದಿದ್ದರೂ, ಬ್ರಿಟಿಷ್ ದ್ವೀಪಗಳನ್ನೇ ನಾಶ ಮಾಡಿ ಬಿಡುವುದಾಗಿ ಬೆದರಿಸಿರುವನು. ಈ ಮಧ್ಯೆ ಹಿಟ್ಲರನು ಬ್ರಿಟಿಷರ ವಿವೇಕ ಬುದ್ಧಿ ಸಕಾರಣ ಕಾರ್ಯಗಳ ಉಪಯೋಗಕ್ಕಾಗಿ ವಿನಂತಿಸಿಕೊಂಡಿರುವನು. ಒಟ್ಟನಲ್ಲಿ ಬ್ರಿಟಿಷರ ಬುದ್ಧಿಯನ್ನು ತಿರುಗಿಸಿ, ಹಾಗೆ ತನ್ನ ಕಾರ್ಯ ಸಾಧಿಸುವ ಪ್ರಯತ್ನವಿದು ಹಿಟ್ಲರನದು. ಇದರಲ್ಲಿ ಸಂಧಿ ಸೂಚನೆಗಳು ಯಾವುವೆಂದು ಅವನು ಸರಿಯಾಗಿ ಸೂಚಿಸಿಲ್ಲ. ಸಂಧಿ ಬ್ರಿಟನ್—ಜರ್ಮನಿಗಳೊಳಗೆ ಸಾಧ್ಯವಾಗಿಯೂ ತೋರಲಿಲ್ಲ. ಅಂತೂ ಇದು ಆಷಾಢಭೂತಿತನದ ಒಂದು ದೊಡ್ಡ ನಾಟಕವೆಂದು ಕೆಲ ಅಮೇರಿಕ ಪತ್ರಿಕೆಗಳ ಟೀಕೆ.

ರುಮೇನಿಯದಲ್ಲಿ

ಕೃಷಿ ಕಾರ್ಯಕ್ಕಾಗಿ ರುಮೇನಿಯದ ಸೈನ್ಯದ ತುಕ್ಕಡಿಗಳನ್ನು ಕಳಚಲಾಗುವುದು. ಇದರಿಂದ ೨ ಲಕ್ಷ ಸೈನಿಕರ ಮೇಲೆ ಪರಿಣಾಮ ಉಂಟಾಗುವುದು.

ಚೀನೀಯರ ಕೋಟೆ ಹೋಯಿತು

ಚಿನ್ಯಾ ಬಳಿಯ ಹುಂಗ್‌ಯಾನ್ ಕೋಟೆಯನ್ನು ಜಪಾನೀಯರು ಹಿಡಿದರು! ಆದರೆ ಜಪಾನೀಯರು ಹವೇಯನ್‌ನಲ್ಲಿ ಸೇನೆಗಳನ್ನು ಇಳಿಸಲು ಮಾಡಿದ ಪ್ರಯತ್ನ ಇದುವರೆಗೆ ಸಾರ್ಥಕವಾಗಿಲ್ಲ.

ಇಟೆಲಿ ಸೇನೆಗಳ ಮೇಲೆ ಆಕ್ರಮಣ

ಕವಿಟಾಜೋ ಎಂಬಲ್ಲಿ ಬ್ರಿಟಿಷರು ಇಟೆಲಿಯವರ ಮೇಲೆ ಬಿದ್ದು ೫೦ ಮಿ ಟ್ಯಾಂಕು ಕೋವಿಗಳನ್ನೂ ಮದ್ದುಗುಂಡು ತುಂಬಿದ ಲಾರಿಗಳನ್ನೂ, ೫ ಫೀಲ್ಡ್ ಕೋವಿಗಳನ್ನೂ ಧ್ವಂಸಮಾಡಿದರು. ಆಡ್. ಎಫ್. ಇವರು ತಬ್ರೂಕ್ ಬಂದರದಲ್ಲಿ ಆಕ್ರಮಣ ನಡೆಸಿ ಪರಿಣಾಮವಾಗಿ ಅಲ್ಲಲ್ಲಿ ಬೆಂಕಿ ಕಾಣಿಸಿಕೊಂಡಿತು.

ನೋಟೀಸು

ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 105 / 1940

ಉಡುಪಿ ಶ್ರೀ ಪೇರೂರು ಮಠದ ಶ್ರೀ ವಿಠಲ್ ದೇವರ ಭಂಡಾರದ ಅಧಿಪತಿಗಳು ಶ್ರೀ ಲಕ್ಷ್ಮೀಂದ್ರ ತೀರ್ಥ ಸ್ವಾಮಿಗಳು —**ವಾದಿರು**

ಮತ್ತು

ಫಾದರ್ ಡೇನಿಸ್ ಲುವಿಸ್ ಕೂಡಾ

—**ಪ್ರತಿವಾದಿರು**

ಇವರೊಳಗೆ.

6ನೇ ಪ್ರತಿವಾದಿ ಸಾವೇರ ಲುವಿಸ್, ಬಾಬ್ಲಿ ಲುವಿಸರ ಮಗ, ಉಡುಪಿ ತಾಲೂಕು ಮೂಡು ತೋನ್ಸೆ ಗ್ರಾಮದಲ್ಲಿರುವವ

ಇವರಿಗೆ.

ದಾವಾ ಆಸ್ತಿಗಳ ಬಾಬ್ತು ವಾದಿರ ಮಠಕ್ಕೆ ಬರತಕ್ಕ ಕಾಯಂ ಗೇಣಿ, ಗೇಣಿ ಬಾಕಿ ಬಡ್ಡಿ ಹುಟ್ಟುವಳ್ಳಿ ಕೂಡಾ ರೂಪಾಯಿ 293–14–2 ಕ್ಕೂ ಗೇಣಿ ಬಾಕಿಗಳನ್ನು ಕಾಯಂ ಗೇಣಿ ರಾಜಿ ಡಿಕ್ರಿ ಶರ್ತ ಪ್ರಕಾರ ವಾಯಿದೆ ವ ರೀಯಾತಿ ವಾಯಿದೆ ಒಳಗೆ ಕೂಡಾ ವಸೂಲು ಕೊಡದಿದ್ದರಿಂದ ಸದ್ರಿ ಕಾಯಂ ಗೇಣಿಯ ದಾವಾ ಆಸ್ತಿ ಸ್ವಾಧೀನತೆಗೂ ವಗೈರೆ ವಾದಿರು ದಾಕಲು ಮಾಡಿರುವ ಮೇಲಿನ ವ್ಯಾಜ್ಯವು ತಾರೀಕು 10–8–1940ಕ್ಕೆ 6ನೇ ಪ್ರತಿವಾದಿಗೆ ನೋಟೀಸು ಬಗ್ಗೆ ಇಟ್ಟರುತ್ತ ದೆಂತಲೂ ಆ ದಿವಸ ಸದ್ರಿ 6ನೇ ಪ್ರತಿವಾದಿಯು ಸದ್ರಿ ಕೋರ್ಟು ಮುಂದೆ ಹಗಲು ಹತ್ತು ಗಂಟೆಗೆ ಹಾಜರಾಗಲಿಕ್ಕೆ ತಪ್ಪಿದ್ದಲ್ಲಿ ಸದ್ರಿ ವ್ಯಾಜ್ಯವನ್ನು ಆತನ ಗೈರುಹಾಜರಿಯಲ್ಲಿ ತೀರ್ಮಾನಿಸಲ್ಪಡುವದೆಂತಲೂ ಈ ಮೂಲಕ ತಿಳಿಸೋಣಾಗಿಯದೆ.

ಉಡುಪಿ, ತಾ. 19 ಜುಲೈ '40 } **V. R. Kidyur,** Counsel for Plaintiff

ನಿರ್ಬಲವಾದ ಮುಗುವು ಶೀಘ್ರದಲ್ಲೆ ವೃದ್ಧಿಹೊಂದುವುದು



ಸ್ಕಾಟ್‌ರ ಕಾಡ್ ಲಿವರ್ ಆಯಿಲ್ ಎಮಲ್ಷನ್ ಸೇವನೆಯಿಂದ ನಿಮ್ಮ ಮಗುವು ನೂತನ ಶಕ್ತಿ, ನರದ ಪಟುತ್ವವನ್ನು ಹೊಂದುವುದು. ಪಾಠಗಳನ್ನು ಸುಲಭವಾಗಿ ಅಭ್ಯಾಸಿಸುವುದು. ಈ ಆಹಾರರೂಪಕವಾದ ಟಾನಿಕ್ ಬಲವನ್ನು ಕಲ್ಪಿಸಿ ಆಯಾಸವನ್ನು ನಿರ್ಮೂಲಿಸುವುದು.

ಕಾಡ್ ಲಿವರ್ ಆಯಿಲ್ ಶೀಘ್ರವಾಗಿ ಜೀರ್ಣಿಸುವಂತೆ ಮಾಡುವ ಗುಣವು ಸ್ಕಾಟ್ಸ್ ಎಮಲ್ಷನ್‌ನಲ್ಲಿ ಇದೆ. ಇದು ಮುಖ್ಯವಾಗಿ ಜೀರ್ಣ ಶಕ್ತಿಯನ್ನು ಹೆಚ್ಚಿಸಿ ಇತರ ಆಹಾರಗಳು ಹೆಚ್ಚು ಸತ್ವವನ್ನು ಕೊಡುವಂತೆ ಮಾಡುವುದು. ಕೆನೆಯಂತೆ ಇರುವ ಇದರ ರುಚಿಯನ್ನು ಎಲ್ಲಾ ಮಕ್ಕಳು ಪ್ರೀತಿಸುವರು.

ಎಲುಬಿನ ಬೆಳವಣಿಗೆ: ಒಂದು ಫಲ ಚಂಚ ಸ್ಕಾಟ್ಸ್ ಎರಡು ಪಿಂಟು (೩೪ ಔನ್ಸ್) ತಾಜಾ ಹಾಲಿನ ಸಮಾನ.
ದೇಹದ ಬೆಳವಣಿಗೆ: ಒಂದು ಫಲ ಚಂಚ ಸ್ಕಾಟ್ಸ್ ಎರಡು ಔನ್ಸು ತುಪ್ಪ ಅಥವಾ ಬೆಣ್ಣೆಯ ಸಮಾನ.

೧. ಆರೋಗ್ಯವಾದ ಹಲ್ಲುಗಳು, ಎಲುಬುಗಳು ಮಾಂಸ ಕಂಡರಗಳು ದೃಢಪಡಿಸಲು,
೨. ಎದೆ ಮತ್ತು ಶ್ವಾಸಕೋಶಗಳಿಗೆ ಬಲವನ್ನುಂಟು ಮಾಡಲು,
೩. ನೆಗಡಿ, ತದಿತರ ಅಂಟುರೋಗಗಳನ್ನು ಎದುರಿಸುವಂತೆ ಮಾಡಲು

ಕಾಡ್ ಲಿವರ್ ಆಯಿಲ್ ಅತ್ಯಾವಶ್ಯಕವಾದ ಸಹಾಯಕ ಆಹಾರವೆಂದು ವೈದ್ಯರು ಅನುಮೋದಿಸಿರುವರು.

ಸ್ಕಾಟ್ಸ್ ಎಮಲ್ಷನ್ ಜೀವಾಂತರ ಶಕ್ತಿಯನ್ನುಂಟುಮಾಡುವುದು

SCOTT'S Emulsion

8 ಮತ್ತು 16 ಔನ್ಸುಗಳ ಸೀಸಾಗಳಲ್ಲಿ ಮಾರಲ್ಪಡುತ್ತದೆ. ದೊಡ್ಡ ಸೀಸಾದಿಂದ ಲಾಭ ಹೆಚ್ಚು.

ರಖಂ ವ್ಯಾಪಾರಿಗಳು: — ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರೀಸ್, (ಇಂಡಿಯಾ) ಲಿಮಿಟೆಡ್ ಕಲ್ಕತ್ತ, ಬೊಂಬಯಿ, ಮದ್ರಾಸ್, ಕರಾಚಿ, ರಂಗೂನ್, ಕೊಲಂಬೊ ಕಾನ್ಪೂರ್, ಪಾಟ್ನಾ, ಅಹಮ್ಮದಾಬಾದ್, ಕೊಚ ಿನ್, ಕಾಲಿಕಟ್ ವಿಶಾಖಪಟ್ಟಣ, ಲಾಹೋರ್, ಅಮೃತಸರ.

ನಿಮ್ಮ ಗಂಟಲು ಬೇನೆ ಮತ್ತು ಶಿಥಿಲಗೊಂಡಿದೆಯೆ?

ನಿಮ್ಮ ಗಂಟಲು ಮರ್ಮಸ್ಥಾನವಾಗಿದ್ದು, ಅಲ್ಲಿ ವಿಷಾಣುಗಳು ಕೂತು, ಸ್ವರವಿನ್ಯಾಸ, ಗಂಟಲು ಬೇನೆ, ಗಂಟಲು ಬೀಗು ಮೊದಲಾದುವನ್ನುಂಟುಮಾಡುತ್ತವೆ. ಆದುದರಿಂದ, ಕ್ರಿಮಿನಾಶಕ ಶ್ವಾಸನಿ[illegible] ಬಿಲ್ಲೆ–ಪೆಪ್ಸ್ ಸೇವಿಸಿ ನಿಮ್ಮ ಗಂಟಲ ಸಂಕಟಗಳನ್ನು ಬೇಗನೆ ಗುಣಪಡಿಸಿಕೊಳ್ಳಿ.

ಪೆಪ್ಸ್ ಬಾಯಲ್ಲಿ ಕರಗಿ, ಅಮೂಲ್ಯ ಔಷಧೀಯ ಸಾರಗಳನ್ನು ಹೊರಸೂಸುವುದು; ಇವು ಶ್ವಾಸದೊಡನೆ ಪುಪ್ಪಸಗಳೊಳಗೆ ಆಳಕ್ಕೆ ಸೇರುತ್ತವೆ. ಆದುಕಾರಣ ಪೆಪ್ಸ್ ಉರಿಗ್ರೊಂಡ ತೆಳು ಜರ್ಮವನ್ನು ಶಾಂತ ಹಾಗೂ ಬಲಗೊಳಿಸಿ, ಉರಿಬಾವು ತಗ್ಗಿಸಿ, ವಿಷಾಣುಗಳನ್ನು ಸಂಪೂರ್ಣ ನಾಶಗೊಳಿಸುತ್ತದೆ. ಪೆಪ್ಸ್ ರುಚಿಕರ, ಆದರೆ, ಬಾಯಿ ಮುಕ್ಕಳಿಸುವ ಔಷಧಕ್ಕಿಂತ ದೀರ್ಘ ಬಾಳಿಕೆಯನ್ನೂ, ಕೆಮ್ಮು, ನೆಗಡಿ, ಶೀತಗಳಿಗೂ ಉತ್ತಮ ಔಷಧ. ಎಲ್ಲಾ ಔಷಧಿ ವ್ಯಾಪಾರಿಗಳೂ ಪೆಪ್ಸ್ ಒಂದು ರೂಪಾಯಿನಂತೆ ವಿಕ್ರಯಿಸುತ್ತಾರೆ. ವಿಜೆಂಟರು: — ಮೆಸರ್ಸ್ ದಾಧಾ ಎಂಡ್ ಕೊ., ಪಾರ್ಕ್ ಟೌನ್, ಮದ್ರಾಸು.



ಪೆಪ್ಸ್ ಸೇವಿಸಿ

PEPS

ವಿಷಹಾರಕ ಶ್ವಾಸನೀಯ ಬಿಲ್ಲೆಗಳು

ರಾ ಜಾ ಸ್ನೋ

ಅಂದಕ್ಕಾಗಿ

ಮಣ್ಯಂ ಅಂಡ್ ಕೋ.,
ಮದರಾಸು ಮತ್ತು ಬೆಂಗಳೂರು

A BA INTEREST

FORMS OF INTER AY BE MANY
WAYS OF INTERES AY BE VARIOUS;
BU
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

THE CANARA BANKING CORPORATION, LTD.

(*Incorporated in British India*)

PANDIT BANK,
MANGALORE.

ಪಂಡಿತ್ ಬೇಂಕ್,

ಕೋರ್ಟು ರಸ್ತೆ, ಮಂಗಳೂರು.

ಕರೆಂಟ್, ಸೇವಿಂಗ್ಸ್ ಬ್ಯಾಂಕ್, ವ ಕಾಯಂ ಠೇವಣಾತಿ ಯಾನೆ ಡಿಪೊಜಿಟ್‌ಗಳನ್ನು ಪಡಕೊಳ್ಳುವದೂ, ಚಿನ್ನಾಭರಣ ವಗೈರೆಗಳ ಈಡಿನ ಮೇಲೆ ಹಣ ಎಡ್ವಾನ್ಸ್ ಮಾಡಿಸುವದೂ, ಸೇಫ್ ಡಿಪೊಜಿಟ್ ಪಡೆಯುವದೂ ವಗೈರೆ ಯಾವತ್ತೂ ಬ್ಯಾಂಕಿಂಗ್ ಕೆಲಸಗಳನ್ನು ಬಹಳ ಸುಲಭವಾದ ಬಡ್ಡಿ ವ ಶರತುಗಳೊಡನೆ ಮಾಡೋಣಾಗುತ್ತದೆ.

ಈ ಬ್ಯಾಂಕ್ ಲಿಮಿಟೆಡ್ ಲಾಯ್ಬಿಲಿಟಿಯದು ಅಲ್ಲವಾದುದರಿಂದ ಡಿಪೊಜಿಟರಿಗೆ ಹೆಚ್ಚಿನ ಭದ್ರತೆ ಉಂಟು.

ಚಿನ್ನಾಭರಣಗಳ ಈಡಿನ ಮೇಲೆ ಬಹಳ ಸುಲಭವಾದ ಬಡ್ಡಿ ದರಗಳಲ್ಲಿ ಹಣ ಎಡ್ವಾನ್ಸ್ ಮಾಡೋಣಾಗುತ್ತದೆ.

ಚಾಲ್ತಿ ಠೇವಣಾತಿ:

ಪ್ರತಿದಿನದ ತಿಲ್ಕಿನ ಮೇಲೆ	ಶೇಕಡಾ 1½ %
ಸೇವಿಂಗ್ಸ್ ಬ್ಯಾಂಕ್:	ಶೇಕಡಾ 3 %

ನಿರಖು ಠೇವಣಾತಿ:

6 ತಿಂಗಳುಗಳಿಗೆ	ಶೇಕಡಾ 4 %
1 ವರ್ಷಕ್ಕೆ	ಶೇಕಡಾ 4½ %

PANDIT SHIVA RAO, B.A., LL.B.,
PROPRIETOR.
PANDIT SANJIVA RAO, B.A.
AGENT.

ಗ್ರೇಂಡ್
ಆಕ್ಷನ್ ಸೇಲ್

ತಾ. 10-7-1940ರಿಂದ
ಕೆಲವೇ ದಿವಸಗಳ ವರೆಗೆ ಮಾತ್ರ.

ಪ್ರತಿ ಆದಿತ್ಯ ಬುಧ ಶುಕ್ರವಾರಗಳಲ್ಲಿ
ಅನೇಕ ತರದ ಜವುಳಿಗಳನ್ನು ಬಹು ಕಡಿಮೆ ಬೆಲೆಯಲ್ಲಿ ಏಲಂ ಮಾಡಲಾಗುವುದು.
ಏಲಂ ಸಂಜೆ ಘಂಟೆ 5ಕ್ಕೆ ಪ್ರಾರಂಭ.
ಏಲಂ ಇಲ್ಲದ ಸಮಯಗಳಲ್ಲಿ ಅತೀ ಕಡಿಮೆ ಬೆಲೆಯಲ್ಲಿ ದಖಂ ಮತ್ತು ಚಿಲ್ಲರೆ ವಿಕ್ರಿತವು ಮಾಡಲಾಗುವುದು.

ನೇಲಂಕಾರ್,
ಎ. ವರದರಾಜು ಚೆಟ್ಟಿಯಾರ್,
ಜವುಳಿ ಅಂಗಡಿ, ಮಾರ್ಕೆಟ್ ರೋಡು,
ಮಂಗಳೂರು.

For Sale

H. M. V. Cabinet Size Gramophone, in perfect order with many latest Film Records. Price Rs. 125/— or nearabout.

Apply sharp:
B. B.,
C/o Kanteerava.

XXII] ಮಂಗಳೂರು, ತಾರೀಕು ೨೩—೭—೧೯೪೦ [೩೩
೧೮೬೨ ವಿಕ್ರಮ ಸಂವತ್ಸರದ ಆಷಾಢ ಬ। ೪ ಕುಜವಾರ

ಸಮತ್ತ ಸಸ್ಯ ವಿದ್ಯೆಗೂ, ಈ ವಿದ್ಯೆಯಿಂದ ತಿಳಿಯಲಾಗುವ ವಸ್ತುಗಳಿಗೂ ಮೂಲನಾಗಿರುವವನೇ— ಪರಮೇಶ್ವರನು. —ಸೂಕ್ತಿಮಾಲೆ.

ಹಡಗುಗಳ ನಿರ್ಮಾಣ

ಈಗ ಕೆಲವು ದಿನಗಳಿಂದ ಇಂಡಿಯದಲ್ಲಿ ಹಡಗು ಕಟ್ಟುವ ಕೈಗಾರಿಕೆಯನ್ನು ಸ್ಥಾಪಿಸುವ ಪ್ರಯತ್ನಗಳ ವಿಚಾರದಲ್ಲಿ ನಾವು ಕೇಳುತ್ತಿದ್ದೇವೆ; ಈ ದೇಶದಲ್ಲಿ ಈ ಮುಖ್ಯ ಕೈಗಾರಿಕೆಯನ್ನು ಈಗಲಾದರೂ ಸ್ಥಾಪಿಸುವ ಆವಶ್ಯಕತೆ, ಕೆಲವು ಮಟ್ಟಗಾದರೂ ಉಂಟೆಂಬುದನ್ನು. ಇಂಡಿಯಾ ಸರಕಾರವೂ ಸದ್ಯ ಅನುಭವಕ್ಕೆ ತಂದುಕೊಂಡಂತೆ ತೋರುತ್ತದೆ.

ಹಿಂದುಸ್ಥಾನದಲ್ಲಿ ಹಡಗು ಕಟ್ಟುವ ಉದ್ಯಮವನ್ನು ಪ್ರೋತ್ಸಾಹಿಸಲು "ಸಂಭಾವನೆ" ಯನ್ನು ಕೊಡಬೇಕು ಎಂದು "ಇಂಡಿಯನ್ ಮರ್ಕೆಂಟೈಲ್ ಮೆರೈನ್ ಕಮಿಟಿ" ಶಿಫಾರಸು ಬರೆದು, ಇಂದಿಗೆ ೧೩ ವರ್ಷಗಳೇ ಕಳೆಯಿತು. ಆ ಕಮಿಟಿಯು ಅದರಲ್ಲಿ, ಸರಕಾರವು ಈ ಉದ್ಯಮಕ್ಕೆ ಅಗ್ಗವಾದ ಬಡ್ಡಿನ ದರದ ಸಾಲಗಳನ್ನು ಕೊಡಬೇಕೆಂದೂ, ಅಗತ್ಯವಿರುವ ಪ್ರದೇಶಗಳನ್ನು ದೊರಕಿಸಿ ಕೊಡಬೇಕೆಂದೂ, ಯಾವತ್ತು ಸರಕಾರಿ ಹಾಗೂ ಪೋರ್ಟ್ ಟ್ರಸ್ಟಿನ ಕೆಲಸಗಳನ್ನೂ ಈ ಹಡಗು ಕಟ್ಟುವ ಯಾರ್ಡಿಗೇ ಒಪ್ಪಿಕೊಡಬೇಕೆಂದೂ ಹೀಗೆ ಸರಕಾರ ಈ ಉದ್ಯೋಗಕ್ಕೆ ಸರ್ವತೋಮುಖವಾದ ಸಹಾಯವಿತ್ತು ಪ್ರೋತ್ಸಾಹಿಸಬೇಕೆಂದೂ ಸೂಚಿಸಿದ್ದಿತು. ಆದರೆ ಬೊಂಬಯಿಯಲ್ಲೊಂದು ಟ್ರೈನಿಂಗ್ ಹಡಗವನ್ನು ಏರ್ಪಡಿಸುವುದಕ್ಕೂ ಹೆಚ್ಚಾಗಿ ಇನ್ನೇತರ ಆವಶ್ಯಕತೆಯನ್ನೂ ಕಾಣದ ಸರಕಾರ ಆಗ ಅಷ್ಟನ್ನೇ ಮಾಡಿ ಸುಮ್ಮನಾಯಿತು. ಅಲ್ಲಿಂದತ್ತ ಹಡಗು ಕಟ್ಟುವ [illegible] ಉದ್ಯಮವು, ಈ ವರ್ಷಗಳಲ್ಲೆಲ್ಲ, ಕನಸಿನ ಗಂಟಾಗಿಯೇ ಉಳಿಯಿತು. ಒಂದು ವೇಳೆ, ನಮ್ಮ ಸರಕಾರ, ಆಗಲೇ ಈ ಹಡಗು ಕಟ್ಟುವ ಏರ್ಪಾಡಿಗೆ ತಕ್ಕ ಪ್ರೋತ್ಸಾಹ ಕೊಟ್ಟಿರುತ್ತಿದ್ದರೆ, ಈಗ ಈ ದೇಶದ ವ್ಯಾಪಾರಕ್ಕೂ, ರಕ್ಷಣೆಗೂ ಎಂತಹ ಅಮೂಲ್ಯ ಸಹಾಯವಾಗುತ್ತಿದ್ದಿತೆಂಬುದು ಎಲ್ಲರೂ ಬಲ್ಲ ಮಾತು!

ಆದರೆ ಅಧಿಕಾರಿಗಳು ಈ ಯೋಜನೆಯ ಕಡೆಗೆ ಒಂದಿಷ್ಟೂ ಲಕ್ಷ್ಯಕೊಡಲಿಲ್ಲ. ಬ್ರಿಟಿಷ್ ಸರಕಾರವು,—ಕೆಲವು ತಿಂಗಳ ಹಿಂದೆ—ಯಾವ ನಿಮಿಷದಲ್ಲಾದರೂ ಯುದ್ಧ ಸಾರಬಹುದಾಗಿದ್ದ ಇಟೆಲಿಯಲ್ಲಾದರೂ ತನಗಾಗಿ ಹಡಗುಗಳನ್ನು ಕಟ್ಟಸಲು ಸಿದ್ಧವಾಗಿದ್ದಿತೇ ಹೊರತು, ಇಂಡಿಯದಲ್ಲಿ ಈ ಕೈಗಾರಿಕೆಗೆ ತಕ್ಕ ಪ್ರೋತ್ಸಾಹ ಕೊಡಬೇಕೆಂದು ಅದಕ್ಕೆ ಹೊಳೆಯಲಿಲ್ಲ. ಆದರೆ ಡೊಮಿನಿಯನ್ನಿನ ಸ್ಥಿತಿ ಇದರಿಂದ ಬೇರೆಯಾಗಿದ್ದಿತು. ಯುದ್ಧವಾರಂಭವಾದಂದಿನಿಂದ, ಆಸ್ಟ್ರೇಲಿಯವು ಹಡಗು ಕಟ್ಟುವ ವಿಷಯದಲ್ಲಿ ನಿರ್ದಿಷ್ಟವಾದ ಒಂದು ಧೋರಣೆಯನ್ನೇ ರೂಪಿಸಿಕೊಂಡಿತು. ಆಸ್ಟ್ರೇಲಿಯಾ ಸರಕಾರವು, ಅಲ್ಲಿನ ಯಾರ್ಡುಗಳಲ್ಲಿ ತಯಾರಾಗುವ ಹಡಗಿನ ಪ್ರತಿಯೊಂದು ಟನ್ನಿಗೆ ೧೦ ಪೌಂಡುಗಳಿಂದ ೧೨॥ ಪೌಂಡುಗಳ ವರೆಗೂ ಸಹಾಯಧನವಾಗಿ ಕೊಡಲು ನಿರ್ಧರಿಸಿ ಹಾಗೆ ಸುಮಾರು ೫೦ ಸಾವಿರ ಪೌಂಡುಗಳನ್ನೂ ಕೊಟ್ಟಿತು. ಹೀಗೆ ಆ ದೇಶವು ಒಂದನೇ ತರಗತಿಯ ಹಡಗುಗಳನ್ನು ಕಟ್ಟುವಲ್ಲಿ ತನ್ನ ಶಕ್ತಿಯನ್ನು ಪ್ರದರ್ಶಿಸಿರುವುದಲ್ಲದೆ, ಆಸ್ಟ್ರೇಲಿಯವು ಹಡಗು ಕಟ್ಟುವ ಜಗತ್ತಿನ ಜನಾಂಗಗಳಲ್ಲಿ ತನಗೊಂದು ಶ್ರೇಷ್ಠ ಸ್ಥಾನವನ್ನು ದೊರಕಿಸಿಕೊಳ್ಳಲೂ ತಕ್ಕ ಸನ್ನಾಹ ಮಾಡಿಕೊಂಡಿದೆ.

ಹೀಗೆಯೇ ದಕ್ಷಿಣ ಆಫ್ರಿಕದಲ್ಲಿಯೂ! ಅಲ್ಲಿ ಹಡಗು ಕಟ್ಟುವ ಯೋಜನೆಯೊಂದು ಸಿದ್ಧವಾಗಿದೆ. ೫ ಸಾವಿರ ಟನ್ನಿನಿಂದ ೮ ಸಾವಿರ ಟನ್ನಿನ ವರೆಗೆ ಹಡಗು ಕಟ್ಟಲು ಸರ್ವಸಿದ್ಧತೆಗಳೂ ನಡೆದಿದೆ. ಮತ್ತೆ ಟರ್ಕಿಯಲ್ಲಿಯಾದರೂ, ಅಲ್ಲಿನ ಸರಕಾರವು ವಿಶಾಲ ಪ್ರಮಾಣದಲ್ಲಿ ವ್ಯಾಪಾರೀ ಹಡಗುಗಳನ್ನು ೨ ಮಿಲಿಯ ಪೌಂಡುಗಳ ವೆಚ್ಚದಿಂದ ಕಟ್ಟಲು ಯೋಜನೆ ಹೂಡಿದುದು ಇದೇ ೪ ತಿಂಗಳ ಕೆಳಗೇ!

ಆದರೆ ಇಂಡಿಯದಲ್ಲಿ? ಮರದ ಹಡಗುಗಳನ್ನೂ, ಮೋಟರ್ ಬೋಟುಗಳನ್ನೂ ಇನ್ನೂ ಕಟ್ಟಲೋ, ಬೇಡವೋ ಎಂದು ಸರಬರಾಯಿ ಇಲಾಖೆ ಆಲೋಚಿಸುತ್ತಾ ಇದೆ! ನಿಜವಾಗಿಯೂ ಭಾರತದಲ್ಲಿ ಈ ಉದ್ಯಮಕ್ಕೆ ತಕ್ಕ ಸೌಕರ್ಯಗಳಿಲ್ಲವೇ? ಕಳೆದ ಮಹಾಯುದ್ಧ ಕಾಲದಲ್ಲಿ, ಇಂಡಿಯದ ಹೈ ಕಮಿಶನರ ವಶವಿದ್ದ ಶತ್ರುಗಳ ಹಡಗುಗಳ ಕಾರ್ಯಭಾರದಿಂದ ದೊರಕಿದ ಮುನಾಫೆ ೩೮ ಲಕ್ಷ ಪೌಂಡು, ರಿಜರ್ವ್ ಫಂಡು ೧೫ ಲಕ್ಷ ಪೌಂಡುಗಳಷ್ಟಾಗಿದ್ದಿತು. ಇದನ್ನಾದರೂ ಸರಕಾರವು ಭಾರತದಲ್ಲಿನ ಹಡಗು ಕಟ್ಟುವ ಕಾರ್ಯಕ್ಕಾಗಿ ಉಪಯೋಗಿಸಬಹುದಾಗಿದ್ದಿತು. ಆದರೆ ಇಲ್ಲ! ಆ ಹಣವೆಲ್ಲಾ ದೇಶದ ಜನರಲ್ ರೆವಿನ್ಯೂವಿನೊಳಗೇ ಅಡಗಿಹೋಯಿತು. ಇಂಡಿಯಾ ಸರಕಾರದ ಸರಬರಾಯಿ ಶಾಖೆ, ಈಗೇನೋ ಹಡಗುಗಳನ್ನು ಕಟ್ಟುವ ಮಾತುಗಳನ್ನಾರಂಭಿಸಿರುವುದು ಸಹಜವೇ ಆದರೂ, ಇಲ್ಲಿಯ ವರೆಗೆ ಹಿಂದೀ ನೌಕೆ ಅಥವಾ ವ್ಯಾಪಾರಿ ಹಡಗು ಪಡೆಯ ಸ್ಥಾಪನೆಯ ಕಾರ್ಯಕ್ಕೆ ಅಡ್ಡಿ ಹೇಳಿದವರು ಇದೇ ಶಾಖೆಯ ಮುಖ್ಯಾಧಿಕಾರಿಗಳೇ ಎಂಬುದನ್ನೂ, ಅದರಲ್ಲಿಯೂ ಹಿಂದೀಯರ ಹಡಗು ಕಟ್ಟುವ ಆ ಆವರ ವಂಶಕ್ರಮಾಗತವಾದ ಶಕ್ತಿ ಸಾಮರ್ಥ್ಯಗಳ ವಿಚಾರದಲ್ಲಿ ಕುಹೇಷ್ಟೆ ಮಾಡಿದವರೂ ಇವರೇ ಎಂಬುದನ್ನೂ ಯಾರೂ ಮರೆಯಲಾಗದು.

ಇಂಡಿಯಾ ಸರಕಾರವು, ಈಗ ಕೆಲ ಮಟ್ಟಿಗಾದರೂ, ಇಂಡಿಯದಲ್ಲಿ ಹಡಗುಗಳನ್ನು ಕಟ್ಟುವ ಈ ಕಸುಬಿಗೆ ಪ್ರೋತ್ಸಾಹ ಕೊಡುವುದು ಅಗತ್ಯವೆಂದು ಮನಗಂಡಿದ್ದರೂ, ನಮ್ಮ ರೇವುಗಳ ಅಧಿಕಾರಿಗಳಿನ್ನೂ ಅದನ್ನು ಅನುಭವಕ್ಕೆ ತಂದುಕೊಂಡಂತೆ ತೋರಲಿಲ್ಲ. ಹಿಂದು ಸ್ಥಾನದ ಹಡಗುಗಳ ವಹಿವಾಟದಲ್ಲಿ ಬಹಳ ಅನುಭವ ಪಡೆದಿರುವ ಮೆ॥ ಸಿಂಧ್ಯ ಕಂಪೆನಿಯವರು, ತನ್ಮದೇ ಒಂದು ಹಡಗು ಕಟ್ಟುವ ಯಾರ್ಡನ್ನು ಸ್ಥಾಪಿಸಲಿರುವರೆಂಬೀ ವಾರ್ತೆಯು ಸರ್ವಪ್ರಕಾರದಲ್ಲಿಯೂ ಸಂತೋಷಪ್ರದವೇ ಆಗಿರುವಾಗ, ಆ ಕಂಪೆನಿಯವರು ಆ ಯಾರ್ಡಿಗಾಗಿ ಕಲ್ಕತ್ತೆಯನ್ನು ಬಿಟ್ಟು ವಿಶಾಖಪಟ್ಟಣದತ್ತ ಕಡೆಗೆ ತಮ್ಮ ದೃಷ್ಟಿಯನ್ನು ಪ್ರಸರಿಸಿರುವುದು ಬಂಗಾಳದಲ್ಲಿ ಕೆಲವು ಮಟ್ಟನ ಅತೃಪ್ತಿಯನ್ನು ಉಂಟುಮಾಡಿದ ಹಾಗೆ ತೋರುತ್ತದೆ. ಅಲ್ಲಸೆ ಕಲ್ಕತ್ತೆಯಿಂದ ಈ ಕಂಪೆನಿಯವರಿತ್ತ ಸರಿಯಲು ಕಲ್ಕತ್ತಾ ಪೋರ್ಟ್ ಟ್ರಸ್ಟಿನ ಅಧಿಕಾರಿಗಳ ಸಹಾನುಭೂತಿ ಸಾಲದ ನಡವಳಿಕೆಯೂ ಕಾರಣವಾಗಿದೆ ಎಂದೂ ಹೇಳಲಾಗಿದೆ. ವಸ್ತುತಃ ಆ ಅಧಿಕಾರಿಗಳು ಬುದ್ಧಿವಂತರಾಗಿದ್ದರೆ ಇಂತಹ ಅಮೂಲ್ಯ ಸಂಧಿಯನ್ನು ಸ್ವಾಗತಿಸಲೂ ಈ ರಾಷ್ಟ್ರೀಯ ಉದ್ಯಮವನ್ನು ಪ್ರೋತ್ಸಾಹಿಸಲೂ ಎಂದೂ ತಪ್ಪುತ್ತಿರಲಿಲ್ಲವೆನ್ನಿ.

ಹೇಗೂ, ಇಂದಿನ ಈ ಸಂದರ್ಭದಲ್ಲಿಯಾದರೂ, ಇಂಡಿಯದಲ್ಲಿ ಎಲ್ಲಾದರೊಂದೆರಡು ಕಡೆ ಹಡಗು-ಕಟ್ಟುವ ಯಾರ್ಡುಗಳು ಸ್ಥಾಪನೆಯಾಗಿ ಬಹುಕಾಲದ ಈ ಕೊರತೆ ನಿವಾರಣೆಯಾಗದಿರದೆಂದು ಹಾರೈಸೋಣ.

ಒರಿಸಾದಲ್ಲಿ ಮಹಾಪ್ರವಾಹ

ಒರಿಸಾದಲ್ಲಿ ಇನ್ನೊಮ್ಮೆಯೂ ಪ್ರಳಯ ಕಾಲದ ನೆರೆ. ಬಾಲ್ಸೋರಾ ಜಿಲ್ಲೆಯೊಂದರಲ್ಲಿಯೇ ೨೦ ಸಾವಿರ ಮನೆಗಳು ಉರುಳಿವೆ; ಸುಮಾರು ೧ ಲಕ್ಷ ಮಂದಿ ಗ್ರಾಮಸ್ಥರು ಅನಾಥರಾಗಿದ್ದಾರೆ ಈ ಕಷ್ಟ ನಿವಾರಣೆಗಾಗಿ ಧನ ಸಹಾಯಕ್ಕಾಗಿ ಮುಖಂಡರ ವಿನಂತಿಗಳು ಹೊರಟವೆ. ಪುಣ್ಯಾತ್ಮರೆಲ್ಲರೂ ತೀರ್ಪ್ರ ಸಹಾಯವನ್ನು ನೀಡಿಯೇ ನೀಡುವರು. ಆದರೆ ಸಾರ್ವಜನಿಕ ಸಹಾಯವೆಂಬುದು ಈ ಸಂಕಷ್ಟವನ್ನು ಶಾಶ್ವತವಾಗಿ ಪರಿಹರಿಸುವಲ್ಲಿ ವಿಶೇಷ ಸಹಾಯಮಾಡಲಾರದು. ಈ ಮಹಾ ಪ್ರವಾಹವೆಂಬುದು ಈ ಪ್ರಾಂತವನ್ನು ಪ್ರತಿ ವರ್ಷವೂ "ಸಂದರ್ಶಿಸುವುದೊಂದು" ಪದ್ಧತಿಯನ್ನಿಟ್ಟುಕೊಂಡುಬಿಟ್ಟಿದೆ. ಕೆಲವು ಕಾಲದ ಹಿಂದೆ, ಈ ಆಪತ್ತಿನಿಂದ ಈ ಪ್ರಾಂತವನ್ನು ತಪ್ಪಿಸಲು ತಕ್ಕ ಉಪಾಯಗಳನ್ನು ಸೂಚಿಸುವ ಹಾಗೆ ಒಂದು ಕಮಿಟಿಯ ರಚನೆಯಾಗಿದ್ದಂತೆ ತೋರುತ್ತಿದೆ. ಹಾಗಾದರೆ ಆ ಕಮಿಟಿ ತನ್ನ ವರದಿ ಬರೆದೊಪ್ಪಿಸಿದೆಯೇ? ಅದರ ಶಿಫಾರಸುಗಳೇನು? ಆ ಶಿಫಾರಸುಗಳಲ್ಲಿ ಯಾವುದನ್ನಾದರೂ ಅಲ್ಲಿನ ಸರಕಾರ ಆಚರಣೆಗೆ ತರಲು ನೋಡಿದೆಯೇ? ವಿಜ್ಞಾನ ಶಾಸ್ತ್ರದ ಆಧುನಿಕ ಯುಗದಲ್ಲಿ ಈ ನೆರೆ ಹಾವಳಿ ಸಂಪೂರ್ಣವಾಗಿ ಬಾರದಂತೆ ಮಾಡುವುದಲ್ಲದಿದ್ದರೆ, ಅದನ್ನು ತಡೆಯಲಿಕ್ಕಾದರೂ ಸಾಧ್ಯವಾಗದೇ?

ರಾಜಿನಾಮೆ

ಗೌರವಾರ್ಥ (ಪ್ರೊಹಿಬಿಶನ್) ಮದ್ಯ ನಿಷೇಧದ ಕಮಿಶನರಾದ ಶ್ರೀ. ಜಿ. ನಂದರವರೂ ಗೌರವಾರ್ಥ ಮದ್ಯ ನಿಷೇಧದ ಸುಪರ್‌ವೈಸರಾದ ಶ್ರೀ. ಅರ್ಜುನ್ ಲಾಲರವರೂ ತಮ್ಮ ತಮ್ಮ ಸ್ಥಾನಗಳಿಗೆ ರಾಜಿ ಬರ್ತೆದೊಪ್ಪಿಸಿರುವರು. ಬೊಂಬಯಿ ಸರಕಾರದ ಮದ್ಯ ನೀತಿಯ ಪ್ರತಿಭಟನೆಗಾಗಿ, ಅಹಮ್ಮದಾಬಾದಿನಲ್ಲಿ ಕೆಲಸಮಾಡುತ್ತಿದ್ದ ಇವರ ಈ ರಾಜಿನಾಮೆ.



ಸಿವಿಕ್ ಗಾರ್ಡ್‌ಗಳಿಗೆ ಸರಿಯಾದ ಅಧಿಕಾರ ದೊರೆಯುವಂತೆ, ಶಾಸನಗಳೇರ್ಪಡುವುದಾಗಿ ತಿಳಿದುಬರುತ್ತಿದೆ.

ಕಲ್ಕತ್ತೆಯ ಹಾಲ್ವೆಲ್ ಸ್ಮಾರಕದ ಸಂಬಂಧವಾದ ವಾರ್ತೆ ಮೊದಲಾದುವುಗಳನ್ನು ಪತ್ರಿಕೆಗಳು ಪ್ರಕಟಿಸಬಾರದೆಂಬ ಬಂಗಾಳ ಸರಕಾರದ ಬಹಿಷ್ಕಾರಾಜ್ಞೆ ಕುರಿತು ಚರ್ಚೆ ನಡೆಸಲುಳ್ಳ ಒಂದು ನಿಲುವಳಿ ಸೂಚನೆ ಬಂಗಾಳ ಶಾಸನ ಸಭೆಯ ಮುಂದೆ ಬಂದು ವಿಫಲವಾಯಿತು. ಬಂಗಾಳದ ಹೋಂ ಮಿನಿಸ್ಟರರಾದ ಸರ್ ನಾಜೀಮುದ್ದೀನ್‌ರವರು ಆ ಬಹಿಷ್ಕಾರಕ್ಕೆ ಕಾರಣವೇನೆಂದು ವಿವರಿಸಿ ತಿಳಿಸಿದರು.

ಕ್ವೆಟ್ಟಾ ಪ್ರಾಂತದ ಲೊರೈ ಜಿಲ್ಲೆಯಲ್ಲಿ ಒಂದು ಮೈಲ್ ಲಾರಿ ಹೋಗುತ್ತಿದ್ದಾಗ ಪುಂಡರಾದ ಕಾಡು ಜನರು ಅದನ್ನು ತಡೆದು ಒಬ್ಬ ಹಿಂದೂ ಮಿಸ್ತ್ರಿಯನ್ನು ಗುಂಡು ಹೊಡೆದು ಕೊಂದರು.

ಯುರೋಪಿಯನ್ ಬ್ರಿಟಿಷ್ ಪ್ರಜೆಗಳಿಗೆ ಅವರ ಕಡ್ಡಾಯವಾದ ನ್ಯಾಶನಲ್ ಸರ್ವೀಸಿನ ಸಂಬಂಧ ಆರ್ಡಿನೆನ್ಸ್ ಸದ್ಯದಲ್ಲೇ ಹೊರಡುವುದೆಂದು ಪ್ರಕಟವಾಗಿದೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಅಧಿವೇಶನವು ಬೇಗನ್ನೇ ಪೂನೆಯಲ್ಲಿ ಜರುಗುವುದಿದ್ದು ಅದಕ್ಕೆ ಮಹಾತ್ಮಾಜಿಯವರೂ ದಯೆಮಾಡಿಸುವ ಸಂಭವನಿರುವುದು.

ಕಲ್ಕತ್ತೆಯಲ್ಲಿ "ಹಾಲ್ವೆಲ್" ಸತ್ಯಾಗ್ರಹಿಗಳಾದ ಳಜಮಂದಿಗೆ ತಲಾ ೯ತಿಂಗಳಿಂದ ೧ ವರ್ಷದ ವರೆಗಿನ ಸಜೆ ವಿಧಿಸಲಾಗಿದೆ. ಹಾಗೇ ಇದೇ ಸ್ಮಾರಕದ ಮುಂದೆ ಸತ್ಯಾಗ್ರಹ ನಡೆಸಿದ ಮತ್ತೊಂದು ತಂಡದ ಲಲ ಮಂದಿ ಸತ್ಯಾಗ್ರಹಿಗಳಿಗೆ—ಇವರಲ್ಲಿ ೬ ಮಂದಿ ಮಹಿಳೆಯರು—೯ತಿಂಗಳ್ಗಿಂದ ೧ತಿಂಗಳಿನ ವರೆಗಿನ ಸಜೆ ವಿಧಿಸಲಾಗಿದೆ. ಇವೆಲ್ಲಾ "ಡಿಫೆನ್ಸ್ ರೂಲ್ಸ್"ಗಳ ಮೇರೆಗೆ.

ನಮ್ಮ ವೈಸರಾಯರು ಮದ್ರಾಸಿನ ಸಂಚಾರಕ್ಕಾಗಿ ಇದೇ ತಾ. ೨೧ರಲ್ಲಿ ಸಿಮ್ಲದಿಂದ ಹೊರಡುವರೆಂದಿದ್ದು ಈಗ ಅದು ಇದೇ ಜುಲೈ ತಾ. ೨೪ಕ್ಕೆ ಎಂದು ಬದಲಾವಣೆಯಾಗಿದೆ. ಹಿಂದೂ ಸ್ಥಾನದ ರಾಜ್ಯಘಟನೆಯ ಸಮಸ್ಯೆಗಳ ಕುರಿತು ವೈಸರಾಯರೀಗ ಲಂಡನಿನೊಡನೆ ವ್ಯವಹರಿಸುತ್ತಿದ್ದು, ಅವರು ತಮ್ಮ ಈ ಸಂಚಾರಕಾಲದಲ್ಲಿ ಈ ಕುರಿತಾಗಿ ಏನನ್ನಾದರೂ ನಿರ್ಧಾರವಾಗಿ ಪ್ರಕಟಿಸಲೂ ಬಹುದೆಂದು ಹಾರೈಸಲಾಗಿದೆ.

ವಿಜ್ಞಾನ ಮತ್ತು ಕೈಗಾರಿಕೆಯ ಪರಿಶೋಧನೆಯ ಬೋರ್ಡಿನ ಕೈಕೆಳಗೆ ನಡೆಯುವ ವಿವಿಧ ಪರಿಶೋಧನಾ ಕಾರ್ಯಗಳಿಗಾಗಿ ಇಂಡಿಯಾ ಸರಕಾರವು ೨ಲಕ್ಷ ರೂಪಾಯಿಗಳ ಗ್ರಾಂಟನ್ನು ಮಂಜೂರುಮಾಡಿದೆ.

ಆಲ್ವಾಯಲ್ಲಿ ಒಂದು 'ಅಲ್ಯುಮಿನಿಯಮ್' ಫ್ಯಾಕ್ಟರಿಯನ್ನು ಸ್ಥಾಪಿಸುವಂತೆ ತಿರುವಾಂಕೂರು ಸರಕಾರವು ನಿರ್ಧರಿಸಿದೆ.

ರಾಮ್ನಾಡ್ ಪ್ರಾಂತದ ಒಂದು ಹಳ್ಳಿಗೆ ಸುಮಾರು ೩೦೦ ಮಂದಿ ಆಯುಧಪಾಣಿಗಳಾದವರು ನುಗ್ಗಿ, ಆ ಹಳ್ಳಿಯವರ ಮೇಲೆ ಬಿದ್ದು, ಲೂಟಿ ನಡೆಸಿ, ಆ ಗ್ರಾಮದಲ್ಲಿದ್ದ ಧಾನ್ಯ ಸಂಗ್ರಹವನ್ನೆಲ್ಲಾ ದೋಚಿಕೊಂಡು ಹೋದರಲ್ಲದೆ, ಗ್ರಾಮಸ್ಥರಲ್ಲಿ ೬ ಮಂದಿಯನ್ನೂ ತಮ್ಮೊಂದಿಗೆ ಅಪಹರಿಸಿಕೊಂಡೂ ಹೋಗಿದ್ದಾರೆ.

ಒರಿಸ್ಸಾಕ್ಕೆ ಮಿಶ್ರ ಮಂತ್ರಿಮಂಡಲಿಯನ್ನು ನಿರ್ಮಿಸುವ ವಿಷಯದಲ್ಲಿ, ಅಲ್ಲಿನ ಎಸೆಂಬ್ಲಿಯ ೩೧ ಮಂದಿ ಕಾಂಗ್ರೆಸ್ ಸದಸ್ಯರು ಸಭೆ ಸೇರಿ ಅದು ಕೂಡದೆಂದು ಪ್ರತಿಭಟಿಸಿದ್ದಾರೆ.

ಭಾರತ ರಾಷ್ಟ್ರೀಯ ಮಹಾ ಸಭೆಯ ಮುಂದಿನ ಅಧಿವೇಶನವು ಪೂನೆಯಲ್ಲಿ ನಡೆಯಬೇಕೆಂದಿರುವ ಈ ಪ್ರಶ್ನೆ [illegible] ಸದ್ಯದಲ್ಲಿಯೇ

ಕರಾಚಿಯ ಪ್ರಾಂತದ ಶ್ರೀ. ಪಾಮ್ಮಾನಿ ಇವರನ್ನು ಯಾರೋ ದುಷ್ಟರು ಕೊಲೆಮಾಡಿದರು. ಇವರ ನಿಧನದ ಶೋಕಸೂಚನೆಯಾಗಿ ಕರಾಚಿಯ ವ್ಯಾಪಾರ ವಹಿವಾಟುಗಳನ್ನು ಒಂದು ದಿನದ ಮಟ್ಟಿಗೆ ನಿಲ್ಲಿಸಲಾಗಿದ್ದಿತು; - ಅಲ್ಲಿನ ಯಾವತ್ತು ಶಾಲಾ ಕಾಲೇಜುಗಳನ್ನೂ ಅಂದು ಮುಚ್ಚಲಾಗಿದ್ದಿತು. ಶವಸಂಸ್ಕಾರವು ಬಹಳ ವಿಜೃಂಭಣೆಯಿಂದ ನಡೆಯಿತು. ಮೃತರ ಗುಣ ಕಥನವನ್ನು ಹಲವು ಮಂದಿ ಮಹನೀಯರು ಅದೊಂದು ಸಾರ್ವಜನಿಕ ಸಭೆಯಲ್ಲಿ ಮಾಡಿದರು. ಕೊಲೆಗಾರರ ಪತ್ತೆ ಕೆಲಸವು ಬಹಳ ರಭಸದಿಂದ ನಡೆಯುತ್ತಿದೆ. ಮೃತರು ಶಾಸನ ಸಭಾ ಸದಸ್ಯರೂ ಮಾನ್ಯ ಜನ ಮುಖಂಡರೂ ಆಗಿದ್ದರು.

ಸಿಂಧ್ ಪ್ರಾಂತದ ಹಿಂದೂ ಮಿನಿಸ್ಟರ ರೊಬ್ಬರ ಕಾರ್ಯಾಲಯವನ್ನು, ಆಯುಧ ಪಾಣಿಗಳಾದ ಯಾರೋ ಇಬ್ಬರು ಪ್ರವೇಶಿಸಿ, ಅಲ್ಲಿ ಗುಮಾಸ್ತರೊಬ್ಬರೊಡನೆ ವಿಚಾರ ನಡೆಸಿದ ಹಾಗೂ, ಗುಮಾಸ್ತರು ಅವರೊಡನೆ ಮಾತು ಕಥೆಗಳಾಡುತ್ತಿದ್ದಂತೆ ಪೋಲೀಸರಿಗೆ ಈ ಸಮಾಚಾರ ತಿಳಿಸಿದ ಹಾಗೂ, ಪೋಲೀಸರು ಅತ್ತ ಬರುವಷ್ಟರಲ್ಲಿ ಇವರಿಬ್ಬರು ಜಾರಿದ ಹಾಗೂ ಬಳಿಕ ಪತ್ತೆ ತರದೂದು ನಡೆಯುತ್ತಿರುವ ಹಾಗೂ ಪ್ರಕಟವಾಗಿದೆ. ಇದರ ಪರಿಣಾಮವಾಗಿ ಪೋಲೀಸರು ಅಲ್ಲಿನ ಮಿನಿಸ್ಟರರ ಮನೆಗಳಲ್ಲಿ ಬಿಗಿಯಾದ ಕಾವಲನ್ನೇರ್ಪಡಿಸಿದ್ದಾರೆ.

ಹಿಂದೂ ಮಹಾಸಭೆಯ ವರ್ಕಿಂಗ್ ಕಮಿಟಿಯ ಮುಂದಿನ ಮೀಟಿಂಗ್ ನಾಗ್ಪುರದಲ್ಲಿ ಇದೇ ಬರುವ ಆಗೋಸ್ತು ತಾ. ೧೦–೧೧ರಲ್ಲಿ ಜರುಗುವುದೆಂದು ತಿಳಿದುಬಂದಿದೆ.

ಬೊಂಬಾಯಿಯಲ್ಲಿ ಉಮಾಶಂಕರ ಜೀಭ್ಯಾ ರಾವಲ್ ಎಂಬೊಬ್ಬ ಆಭರಣಗಳ ದಲ್ಲಾಲನು ಆ ನಗರದ ಹಲವು ಮಂದಿ ವರ್ತಕರಿಂದ ಸುಮಾರು ೨ಲಕ್ಷ ರೂಪಾಯಿಗಳ ಬೆಲೆ ಬಾಳುವ ಆಭರಣಗಳನ್ನು ಸಾಲವಾಗಿ ಪಡೆದುಕೊಂಡು, ಅವುಗಳಲ್ಲಿ ೨೩ ಸಾವಿರ ರೂಪಾಯಿಗಳ ಬೆಲೆ ಬಾಳುವ ಆಭರಣಗಳನ್ನು ಮಾರಿ ಆ ದುಡ್ಡನ್ನೂ, ಇತರ ನಗಗಳನ್ನೂ ಕಟ್ಟಕೊಂಡು ಪರಾರಿಯಾದನು. ಹೀಗೆ ಇವನ ಮೋಸಕೃತ್ಯವು ಪೋಲೀಸಿಗೆ ತಿಳಿದುಬರಲು, ರಾವಲನನ್ನು ಕೈದುಮಾಡಿ ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆಗೆ ನಿಲ್ಲಿಸಿದ್ದಾರೆ. ಮ್ಯಾಜಿಸ್ಟ್ರೇಟರು ಆರೋಪಿಯನ್ನು ೧ಲಕ್ಷ ರೂಪಾಯಿಗಳ ಜಾಮೀನಿನ ಮೇಲೆ ಬಿಡಬಹುದೆಂದಿದ್ದಾರೆ.

ಅಹ್ರಾರ್ ನಾಯಕರು ರಾಷ್ಟ್ರಪತಿಗಳಾದ ಮೌಲಾನಾ ಅಜಾದ್–ಪರವಾಗಿ ಕೊನೆತನಕವೂ

ನೋಟೀಸು

ಬೇಂಕ್, ಕೋರ್ಟು ರಸ್ತೆ, ಮಂಗಳೂರು.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಲ್ಲಿ ನಗದು ಈಡಿನ ಮೇಲೆ ಸಾಲ [illegible]ಂಡ ನಂತರ ಕ್ಲಪ್ತ ವಾಯಿದೆಗೆ ಅಸಲು ಬಡ್ಡಿ ಕೊಡದೆ, ಈ ವರೆಗೆ ಬಾಕಿಮಾಡಿ [illegible]ಂಡಿರುವದರಿಂದಲೂ, ಸದ್ರಿ ಸಾಲಗಳನ್ನು ಬರಮಾಡಿಕೊಳ್ಳುವರೆ ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳ ಪೈಕಿ ಕೆಲವು ಜಾರಿಯಾಗಿಯೂ, ಕೆಲವು ಜಾರಿಯಾಗದೆಯೂ ವಾಪಸು ಬಂದಿರುವುದರಿಂದ ಸದ್ರಿಯವರು ಈಡು ಇಟ್ಟ ನಗಗಳನ್ನು ಇದೇ ತಿಂಗಳ ತಾರೀಕು 25ರ ಒಳಗೆ ಬೇಂಕಿಗೆ ಸಲ್ಲತಕ್ಕ ಅಸಲು ಬಡ್ಡಿಯನ್ನು ಕೊಟ್ಟು ಬಿಡಿಸಿಕೊಂಡು ಹೋಗದೆ ಇದ್ದರೆ ಸದ್ರಿಯವರು ಈಡು ಇಟ್ಟ ನಗಗಳನ್ನು ಇದೇ ತಿಂಗಳ ತಾರೀಕು 27ಕ್ಕೆ ಶನಿವಾರ ದಿವಸ ಮಧ್ಯಾಹ್ನ ಘಂಟೆ 2ಕ್ಕೆ ಯಾ ಅನಂತರ ನಮಗೆ ಯುಕ್ತಕಂಡ ತಾರೀಕಿನಲ್ಲಿ ಬಹಿರಂಗವಾಗಿ ಏಲಂಮಾಡೋಣಾಗುವದು ಎಂಬುದನ್ನು ಈ ಮೂಲಕ ತಿಳಿಸಿರುತ್ತದೆ.

ಲೋನ ನಂಬ್ರ	ಹೆಸರು, ವಿಳಾಸ	ಮೊಬಲಗು
7/38	ಕೆ. ನಾಗಪ್ಪ, ರಾಮಪ್ಪಯ್ಯನ ಮಗ, ವೀವರ್, ಕಡೆಕಾರ್, ಜಿಪ್ಪು, ಕಂಕನಾಡಿ, ಕಂಕನಾಡಿ ಪೋಸ್ಟ್	15–0–0
94/38	ಪುಟ್ಟ ಅಮೀನ್, ಕರಗುಡ್ಡ ಅಮೀನರ ಅಳಿಯ, ಮೊಗವೀರ, ಬೊಕ್ಕಪಟ್ಟಣ, ಮಂಗಳೂರು	40–8–0
146/38	ಎಮ್. ಮಂಜಣ್ಣ ರೈ, ಮೈಂದ ಭಂಡಾರಿಯ ಮೊಮ್ಮಗ, ತೆಲ್ಲಂಪಾಡಿ, ಕುಂಬಳೆ ಪೋಸ್ಟ್	16–0–0
245/38	ಐಯಣ್ಣ ಶೆಟ್ಟಿ, ಗುರುಲಿಂಗಪ್ಪ ಶೆಟ್ಟಿಯ ಮಗ, ಫಳ್ನೀರ್, ಮಂಗಳೂರು.	800–0–0
439/38	ಐನವಳ್ಳಿ ಇಸ್ಮಾಯಿಲ್ ಬ್ಯಾರಿ, ಚಿಯ್ಯಾಬ್ಯಾರಿಗಳ ಮಗ, ಐನವಳ್ಳಿ, ಪಾವೂರು ಗ್ರಾಮ, ಫಜೀರ್ ಪೋಸ್ಟ್	5–0–0
514/38	ಕೆ. ರಾಮ ರೈ, ರಾಮಯ್ಯ ನೋಂಡರ ಮಗ, ಮೊಗ್ರಾಲ್, ಪುತ್ತೂರು ಗ್ರಾಮ, ಕುಂಬಳೆ ಪೋಸ್ಟ್	110–0–0
713/38	ಶ್ರೀ ದೇವಮ್ಮ, ತನಿಯ ನಾಯ್ಕರ ಮಗಳು, ಕುದ್ರೋಳಿ, ಮಂಗಳೂರು	4–0–0
623/38	ಬಿ ಸೋಮ, ಮಂಜಪ್ಪನ ಮಗ, ರೈಲ್ವೆ ಕೂಲಿ, ರೈಲ್ವೆ ಸ್ಟೇಶನ್ ಬಳಿ, ಮಂಗಳೂರು	5–0–0
860/38	ಸಿ. ನಾರಾಯಣನ್ ನಂಬಿಯಾರ್. ರಾಮು ನಂಬಿಯಾರರ ಮಗ, ವಿದ್ಯಾರ್ಥಿ, ಗವರ್ನಮೆಂಟ್ ಕಾಲೇಜು, ಗವರ್ನಮೆಂಟ್ ಕಾಲೇಜ್ ಹಾಸ್ಟೆಲ್, ಮಂಗಳೂರು	3–0–0

ಮಂಗಳೂರು,
ತಾ. 21–7–1940.

D. S. Pandit,
Ag. Agent.

ಕಾದಾಡಲು ಸಿದ್ಧರೆಂದು ಬಿಹಾರ ಪ್ರಾಂತದ ಮಜ್ಲಿಸ್–ಇ–ಅಹ್ರಾರ್‌ರ ಸರ್ವಾಧಿಕಾರಿಗಳಾದ ಶ್ರೀ. ಎಸ್. ಆಲಿ ಅಹಮದ್ ರಾಜ್ಪಯವರು ತಮ್ಮದೊಂದು ಪ್ರಕಟಣೆ ಹೊರಡಿಸಿದ್ದಾರೆ

ಮದ್ರಾಸ್ ಗವರ್ನರರ ಯುದ್ಧ ನಿಧಿಗೆ ಇದುವರೆಗೆ ರೂ. ೬,೦೮,೮೬೬–೬–೦ಗಳಷ್ಟು ವಂತಿಗೆ ಕೂಡಿದೆ ಎಂದು ಪ್ರಕಟವಾಗಿದೆ.

ನಾಗಪಟಮ್‌ನಲ್ಲಿ ೭೦೦ ಅಕ್ಕಿ ಗೋಣಿಗಳನ್ನು ತುಂಬಿ ಮೂರು ದೋಣಿಗಳು ಸಾಗುತ್ತಿದ್ದಾಗ ಮಗುಚಿ ಬಿದ್ದು ೫೫೦ ಗೋಣಿಗಳು ನೀರನ್ನು ಸೇರಿವೆ. ೧೫೦ ಗೋಣಿಯನ್ನು ಉಳಿಸಲಾಗಿದೆ.

ಇಂಡಿಯಾ ಸರಕಾರ

ಡಿಫೆನ್ಸ್ ಸೇವಿಂಗ್ಸ್‌ನ್ನು ಕೊಂಡುಕೊಳ್ಳಿ

ಅತ್ಯಲ್ಪ ಹಾಗೂ ಮಧ್ಯಮ ತರಗತಿಯ ಆನುಕೂಲತೆಯ ಜನಗಳಿಗೆ [illegible] ಸಂಚಯ ವಿಧಾನ.

10 ವರ್ಷಗಳ ಸೇವಿಂಗ್ಸ್ ಸರ್ಟಿಫಿಕೇಟುಗಳು
6 ವರ್ಷಗಳ 3% ಡಿಫೆನ್ಸ್ ಬೋಂಡುಗಳು

ಸರಕಾರಕ್ಕೆ ನಿಬಡ್ಡಿಯಿಂದ ಸಾಲಕೊಡಲಪೇಕ್ಷಿಸುವವರಿಗೆ

3 ವರ್ಷಗಳ ಇಂಟರೆಸ್ಟ್ ಫ್ರೀ ಬೋಂಡುಗಳು

ವಿವರಗಳಿಗೆ—
ರಿಜರ್ವ್ ಬ್ಯಾಂಕ್ ಒಫ್ ಇಂಡಿಯಾ,
ಇಂಪೀರಿಯಲ್ ಬ್ಯಾಂಕ್ ಒಫ್ ಇಂಡಿಯಾ,
ಸರಕಾರಿ ಖಜಾನೆ ಯಾ ಪೋಸ್ಟಾಫೀಸಿನ ಯಾವದೇ ಕಾರ್ಯಾಲಯಕ್ಕೆ ಬರೆಯಿರಿ.

ನಿಂದಿನ ವಾರ್ತೆ

ಸಾಮ್‌ಚಂಗ್ ಎಂಬ ಚೀನದ ಸುಪ್ರಸಿದ್ಧ ಪತ್ರಿಕಾ ಉದ್ಯೋಗಿಯನ್ನು ಶಾಂಘೈಯಲ್ಲಿ ಯಾರೋ ಗುಂಡು ಹೊಡೆದು ಕೊಲೆ ಮಾಡಿರುವರು. ಈ ಕೊಲೆ ಅಲ್ಲಿನ ಮುಖ್ಯ ಬೀದಿಯ ಒಂದು ಕೇಫೆಯಲ್ಲಿ ಹಗಲು ಹೊತ್ತು ನಡೆಯಿತು.

ಮೆಡಿಟರೇನಿಯನಿನ ಸಂಬಂಧವಾದ ಒಂದು ಕರಾರಿಗಾಗಿ ಸ್ಪೈನಿನ ಜನರಲ್ ಫ್ರಾಂಕೋ ಇಟೆಲಿಯ ಮುಸಲೋನಿಯನ್ನು ಆಗೋಸ್ತು ಎರಡನೇ ವಾರದಲ್ಲಿ ಕಂಡು ಮಾತಾಡಲಿರುವನೆಂದು ಹೇಳಲಾಗಿದೆ.

ಜಾಂಝಿಬಾರಿನ ಸುಲ್ತಾನರೂ, ಎಗ್ಜಿಕ್ಯುಟಿವ್ ಕೌನ್ಸಿಲೂ, ನ್ಯಾಷನಲ್ ಅಸೆಂಬ್ಲಿ ಸಭೆಯು ಆರ್ಥಿಕ ಸಮಿತಿಯವರೂ ಕಾಲನಿಗಳ ವಿಮಾನಬಲಕ್ಕಾಗಿ ೨ ಫೈಟರುಗಳನ್ನು ಕೊಳ್ಳಲು ೨೦ ಸಾವಿರ ಪೌಂಡುಗಳ ದಾನ ಮಾಡಿದ್ದಾರೆ.

"ಕಿಂಗ್ ಜಾನ್" ಮತ್ತು "ಡೆವೀಸಿಯನ್" ಎಂಬೆರಡು ಬ್ರಿಟಿಷ್ ವ್ಯಾಪಾರೀ ಹಡಗುಗಳು, ವೆಸ್ಟ್ ಇಂಡೀಸಿನ ಬಳಿ ಶತ್ರುಗಳಿಂದ ಮುಳುಗಿಸಲ್ಪಟ್ಟಿದೆ. ಇದರಲ್ಲಿ ಮೊದಲನೆಯದು ೫೨೨೬ ಟನ್ನುಗಳದು; ಎರಡನೆಯದು ೬೪೩೩ ಟನ್ನುಗಳದು.

ಹಿಟ್ಲರರ ಸಂಧಾನದ ಷರತ್ತುಗಳು ಇವು ಆಗಿರಬಹುದೆಂದು ಬರ್ಲಿನ್ ವಾರ್ತಾದಾಯಕರ ಮಾತಾಗಿದೆ. (೧) ಬ್ರಿಟಿಷ್ ಸರಕಾರದಿಂದ ಮಿ. ಚರ್ಚ್‌ಹಿಲ್ಲರೂ ಅವರ ಕಡೆಯವರೂ ನಿವೃತ್ತರಾಗಿ ಮಿ. ಲಾಯಡ್ ಜಾರ್ಜರವರೂ ಸರ್ ಒಸ್‌ವಾಲ್ಡ್ ಮೊಸ್ಲೆಯವರೂ ಬ್ರಿಟಿಷ್ ಮಂತ್ರಿಮಂಡಲವನ್ನು ರಚಿಸಬೇಕು (೨) ಬ್ರಿಟಿಷರು ಆಯುಧಗಳನ್ನು ಕಡಿಮೆಮಾಡಿ ಯುರೋಪ್ ಖಂಡದಲ್ಲಿ ಜರ್ಮನರ ಪ್ರಾಬಲ್ಯವನ್ನೊಪ್ಪಬೇಕು. ಇವೆರಡೂ ಆಗ ಹೋಗದ ಸಂಗತಿ.

ಉತ್ತರ ಉತ್ತಿಮ ಜರ್ಮನಿ ಮತ್ತು ಉತ್ತರ ಹಾಲೆಂಡಿನ ಶತ್ರು ವಿಮಾನ ನಿಲ್ದಾಣಗಳನ್ನು ಬ್ರಿಟಿಷ್ ಬಾಂಬರುಗಳು ಆಕ್ರಮಿಸಿ, ಅವುಗಳಿಗೆ ಹೆಚ್ಚಿನ ನಷ್ಟವನ್ನು ಉಂಟುಮಾಡಿದೆ.

ಮಂಗಳೂರು

ಬಿಡುಗಡೆ

ಮಂಗಳೂರಿನ ಬೋಳಾರ ಮಾಂಗುಡಿಯಲ್ಲಿ ಕಳೆದ ತಾ. ೨೧–೧೦–'೩೯ರಲ್ಲು ದೂಮು ಪೂಜಾರಿ ಎಂಬವನನ್ನು ಅಂಗರ ಕೂಡಾ ೭ ಜನರು ಹೊಡೆದರಾಗಿಯೂ, ಅವರ ಪೈಕಿ ಐತು ಎಂಬವನು ದೂಮನನ್ನು ಕಡಿದನಾಗಿಯೂ ಒಂದು ದಾವೆಯು ಸ್ಥಳೀಯ ಜಿಲ್ಲಾ ಜಡ್ಜರಾದ ಶ್ರೀ. ಟಿ. ಎಸ್. ರಾಮಚಂದ್ರನ್ ಐ. ಸಿ. ಎಸ್.ರವರ ಮುಂದೆ ತನಿಖೆಗೆ ಬಂದಿತ್ತು. ಈ ಘಟನೆಯಲ್ಲಿ ದೂಮನು ಕಳೆದ ದಶಂಬರ ೧೫ರಲ್ಲಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದನು. ಈ ದಾವೆಯು ಇದೇ ತಿಂಗಳಲ್ಲಿ ಜಡ್ಜರ ಮುಂದೆ ತನಿಖೆಗೆ ಬಂದು, ಎಸೆಸರ ಅಭಿಪ್ರಾಯವನ್ನು ಮುಂಜೂರು ಮಾಡಿ, ಜಡ್ಜರು ಆಪಾದಿತರು ನಿರಪರಾಧಿಗಳೆಂದು ತಾ. ೧೬–೭–'೪೦ರಲ್ಲಿ ಅವರನ್ನು ಬಿಡುಗಡೆ ಮಾಡಿದರು. ಆಪಾದಿತರ ಕಡೆಯಿಂದ ಶ್ರೀ. ಗಳಾದ ಮಂಜೇಶ್ವರ ಶಂಕರರಾಯರು ಮತ್ತು ಎ. ಶಂಕರ ಆಳ್ವರು ವ್ಯವಹರಿಸಿದ್ದರು

ತಾಲೂಕು ಸಮಿತಿ

ಕಳೆದ ತಾ. ೧೫ರಂದು ಮಂಗಳೂರು ತಾಲೂಕು ಯುದ್ಧ ಸಹಾಯಕ ಸಮಿತಿಯ ಸಭೆ ಸೇರಿ ನಿಧಿ ಸಂಗ್ರಹ ಸಮಿತಿಯ ರಚನೆಯಾಯಿತು. ಆದರಲ್ಲಿ ತಾಲೂಕಿನ ಆಯಾ ಪ್ರದೇಶಗಳ ಗೌರವಸ್ಥರನ್ನೂ, ಎಲ್ಲಾ ಇಗರ್ಜಿಗಳ ಸಾದ್ರಿಗಳನ್ನೂ, ಬೇಂಕು ಮತ್ತು ಪಂಚಾಯತು ಬೋರ್ಡುಗಳ ಅಧ್ಯಕ್ಷರುಗಳನ್ನೂ, ಇನ್ನಿತರರನ್ನೂ ಸೇರಿಸಿಕೊಳ್ಳಲಾಯಿತು. ತಾಲೂಕು ತಹಶೀಲ್ದಾರರೂ, ಶ್ರೀ. ಸಿ ಎಲ್. ಲೋಬರವರೂ ಕಾರ್ಯದರ್ಶಿಗಳಾಗಿಯೂ, ರೆವಿನ್ಯೂ ಡಿವಿಜನಲ್ ಆಫೀಸರರು ಅಧ್ಯಕ್ಷರಾಗಿಯೂ ಆರಿಸಲ್ಪಟ್ಟರು. ನಿಧಿ ಸಂಗ್ರಹ ಮಾಡಲು ಕೆಲವರಿಗೆ ಅಧಿಕಾರ ಕೊಡಬೇಕು, ಪಠೇಲರುಗಳು ಇದನ್ನು ಟ್ರೆಜರಿ ಡಿ. ಕಲೆಕ್ಟರರಿಗೆ ವಾರ ವಾರವೂ ಮುಚ್ಚಿಸುವ ಏರ್ಪಾಡಾಗಬೇಕು, ಸರಕಾರಿ ನೌಕರರು ಸಕಲ ವಿಧದಿಂದಲೂ ಸಹಕರಿಸಬೇಕು ಎಂಬಿತ್ಯಾದಿ ವಿಚಾರಗಳ ತೀರ್ಮಾನವಾಯಿತು.

ದ. ಕನ್ನಡ

ಪುತ್ತೂರು

ಇಲ್ಲಿನ ಸಹಕಾರಿ ಸಂಘದ ಕಟ್ಟಡದಲ್ಲಿ ಶ್ರೀ. ಬಿ. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಸಿವಿಕ್ ಗಾರ್ಡ್ ದಳದ ಸ್ಥಾಪನೆ ನಡೆಸಿತು. ಜಿಲ್ಲಾ ಬೋರ್ಡು ಕಾಂಗ್ರೆಸ್ ಪಾರ್ಟಿ ಸದಸ್ಯರಾದ ಶ್ರೀ. ಮೊಳಹಳ್ಳಿ ಶಿವರಾಯರು ಮತ್ತು ಶ್ರೀ. ಗಣೇಶ ಸುಂದರರಾಯರು ಸಿವಿಕ್ ಗಾರ್ಡ್ ಎಂದರೇನೆಂದು ತಿಳಿಸಿದರು. ೨೦ ಮಂದಿ ಅಲ್ಲೇ ದಳಕ್ಕೆ ಸೇರಿಕೊಂಡರು.

ಕಾರ್ಕಳ

ಯುದ್ಧಕಾರ್ಯದಲ್ಲಿ ಸಹಕಾರಿಗಳಾಗಲು ಜನತೆಯನ್ನು ಸೆಳೆಯುವದಕ್ಕಾಗಿ ಒಂದು ಪ್ರಚಾರ ಸಮಿತಿಯು ಸ್ಥಾಪಿತವಾಗಿದೆ.

ನಿಮಗೆ ಗೊತ್ತೇ?

ಆರೇಬಿಯದಲ್ಲಿ ಒಂಟೆಗಳ ಬೆನ್ನ ಮೇಲೂ ಸವಾರರು ರೇಡಿಯೋ ಇರಿಸಿದ್ದಾರೆ. ಒಂಟೆಗಳ ಬೆನ್ನ ಡುಬ್ಬದ ಮೇಲೆ "ಏರಿಯಲ್" ತಗಲಿಸಿದ್ದಾರೆ. – ಚೀನಾದೇಶದ ಕೋಚಿನ್ ಎಂಬಲ್ಲಿ ನಿವಾಹ ವಿಚ್ಛೇದನ ಮಾಡಿಕೊಳ್ಳಬೇಕಾದವರು ಋಣ್ಣವ ಕಡ್ಡಿಗಳನ್ನು ಮುರಿದು ಬಿಟ್ಟರೆ ಸರಿ.– ನಜ್ರುಗಳನ್ನು ತೂಕಮಾಡುವ ತ್ರಾಸುಗಳು, ವಿಶೇಷ ಸೂಕ್ಷ್ಮವೆಂದರೆ, ಕಣ್ಣ ರೆಪ್ಪೆಯ ಕೂದಲನ್ನು ತಕ್ಕಡಿಯ ತಟ್ಟೆಯಲ್ಲಿರಿಸಿದರೆ, ಅದು ಭಾರ ತೋರಿಸುತ್ತದೆ. — ಯುನೈಟೆಡ್ ಸ್ಟೇಟ್ಸ್ (ಅಮೇರಿಕಾ)ನಲ್ಲಿ ೩೦ ಮಿಲಿಯ ಜರ್ಮನ್ ವಂಶಜರಿದ್ದಾರೆ – ಅಮೆರಿಕನ ನಾಣ್ಯಗಳನ್ನು ಹೊರಸಿಸಲಾರಂಭಿಸಿದ ಮೊದಲ ರಾಷ್ಟ್ರ ಇಟೆಲಿ. – ಜಗತ್ತಿನ ಸಾಗರಗಳ ಒಟ್ಟು ವಿಸ್ತಾರ [redacted] ಲಕ್ಷ ಚದರ ಮೈಲಿಗಳು, ಅಥವಾ ಒಟ್ಟು ಪ್ರದೇಶದ [redacted] ಕಡಾ ೭೪ರಷ್ಟು. — ಫ್ರಾನ್ಸಿನ [redacted] ಇಡೀ ಜಗತ್ತಿನಲ್ಲಿ ೨೬೯ [redacted] ಇವುಗಳಲ್ಲಿ ಸುಮಾರು [redacted] ಇದೆಯೆಂದೂ ಗೊತ್ತು ಹಚ್ಚಿದೆ. [redacted] ಭಾಷೆಯ ಶಬ್ದಭಂಡಾರ ೭ ಲಕ್ಷ [redacted] ಶೇಕ್ಸ್‌ಪಿಯರ್ ಮಹಾಕವಿಯು ಅಸ [redacted] ವಿಚಾರಗಳನ್ನೂ ಭಾವನೆಗಳನ್ನೂ ತನ್ನ ಗ್ರಂಥಗಳ ಮೂಲಕ ಬರೆಯಲು ಉಪಯೋಗಿಸಿದ ಶಬ್ದಗಳ ಸಂಖ್ಯೆ ಬರೇ ೧೫ ಸಾವಿರ.

ಹತ್ತು ಸಾವಿರ ಸಂಸಾರಗಳಿಗೆ ಅನ್ನವಿಲ್ಲ

"ತಿರುವಾಂಕೂರು ಸಂಸ್ಥಾನ ಶೆರ್ತಲ್ಲೆ ಎಂಬ ಇಡೀ ತಾಲೂಕೇ ಬರಗಾಲಕ್ಕೆ ತುತ್ತಾಗಿದೆ. ಹುರಿಹಿಗ್ಗಗಳ ಕಾರ್ಖಾನೆಗಳು ಮುಚ್ಚಲ್ಪಟ್ಟಿರುವದರಿಂದ, ಸುಮಾರು ೧೫ ಸಾವಿರ ಕೆಲಸಗಾರರು ನಿರುದ್ಯೋಗಿಗಳಾಗಿದ್ದಾರೆ; ಹತ್ತು ಸಾವಿರ ಕುಟುಂಬಗಳು ಹಸಿವಿನಿಂದ ನರಳುತ್ತಿವೆ. ಈ ತಾಲೂಕಿನ ಜನಸಂಖ್ಯೆಯಲ್ಲಿ ಶೇ ೨೫ಕ್ಕಿಂತ ಹೆಚ್ಚಿನ ಮಂದಿಯ ಹೊಟ್ಟೆ ತುಂಬಿಯೇ ಇಲ್ಲ; ಶೇ. ೨೫ರಷ್ಟು ಅರ್ಧ ಉಣಿಸಿನಿಂದ–ಅರ್ಧ ಉಪವಾಸದಿಂದ ನರಳುತ್ತಿದ್ದಾರೆ; ಶೇ. ೨೫ರಷ್ಟು ಅನ್ನವಿಲ್ಲದೆ ಉಪವಾಸವೇ ಇದ್ದಾರೆ. ಉಳಿದವರು ಗೆಡ್ಡೆಗೆಣಸುಗಳನ್ನೂ, ತೆಂಗಿನ ಕಾಯಿಯನ್ನೂ ತಿಂದೇ ಹಸಿವು ಹಿಂಗಿಸಿಕೊಳ್ಳುತ್ತಿದ್ದಾರೆ. ಭಿಕ್ಷಾಟನೆಯ ಮೇರೆ ಮೀರಿದೆ. ಇದೇ ರೀತಿಯ ಸುದ್ದಿಗಳು ವೈಕಮ್, ಕುಂಬಲಾಂಗಿ, ಕೊಚ್ಚಿನ್ ಮುಂತಾದೆಡೆಯಿಂದ ಬರುತ್ತಿದೆ. ಸರಕಾರವು ಇವರಿಗಾಗಿ ಏನು ಮಾಡಿದೆಯೋ! ಧನಿಕರೂ ಸುಮ್ಮನಿದ್ದಾರೆ. ಪರಿಣಾಮವಾಗಿ ಈ ಹಸಿದ ಹುಲಿಗಳು ಕ್ರಾಂತಿಯನ್ನು ತರಬಹುದು! ಧನಿಕರು — ಅಧಿಕಾರಿಗಳು ಈ ಕಡೆಗೆ ಗಮನವೀಯಬೇಕು" ಎಂದು ಕೊಚ್ಚಿಯ ದಿನಪತ್ರಿಕೆಯೊಂದು ತಿಳಿಸುತ್ತದೆ.

ನೀವು ತಿಳಿದಿರಬೇಕು

ನಿಮ್ಮ ತಲೆಯ ಭಾರ ನಿಮಗೆ ತಿಳಿದಿರಬಹುದು. ಆ ತಲೆಯ ಮೇಲಿರುವ ಕೂದಲಿನ ಸರಾಸರಿ ಭಾರವೆಷ್ಟು? ಇದು ೫ರಿಂದ ಆರು ಔನ್ಸುಗಳೊಳಗೆ ಇರಬಹುದು; ಕೂದಲು ತಿಂಗಳಿಗೆ ಅರ್ಧ ಅಂಗುಲದಂತೆ ಬೆಳೆಯುತ್ತಿದೆ ಎಂದು ಅಂದಾಜು ಹಾಕಿದ್ದಾರೆ.

ನೀವೀಗ ಗಾಜಿನ ತಟ್ಟೆಯಲ್ಲಿ ನೀರು–ಕಾಫಿ–ಚಾಗಳನ್ನು ಕುಡಿಯುತ್ತಿ [redacted]. ಆದರೆ ಹಾಗೆ ನೀವದನ್ನು ಉಪಯೋಗಿಸುತ್ತಿದ್ದರೂ ಗಾಜು ಸವೆದು ಹೋಗುತ್ತಿಲ್ಲವೆಂದು ನಿಮ್ಮ ನಂಬುಗೆ. ಆದರೆ ಸತ್ಯ ಸಂಗತಿ ಹಾಗಿಲ್ಲ. ಪ್ರತಿ ಬಾರಿ ನೀವು ಗಾಜಿನ ತಟ್ಟೆಯನ್ನು ಉಪಯೋಗಿಸುವಾಗಲೂ ಅದು ಸ್ವಲ್ಪ ಸ್ವಲ್ಪ ಸವೆದು ಹೋಗುತ್ತಲೇ ಇರುತ್ತದಂತೆ.

ಸಮುದ್ರದ ನೀರು ಆವಿಯಾಗುತ್ತಿದೆಯೆಂದು: ನಿಮಗೆ ತಿಳಿದಿದೆ. ಅದೇ ಹಾಗೆ ಆವಿಯಾದ ನೀರು, ಮಳೆಯಿಂದ ಭರ್ತಿ ಮಾಡಲ್ಪಡದಿದ್ದರೆ ಸಮುದ್ರದ ಗತಿ ಏನು? ೩೦೦೦ ವರ್ಷಗಳಲ್ಲಿ ಲೋಕದ ಸಮುದ್ರವೇ ಆರಿಹೋಗಬಹುದೆಂದು ವಿಜ್ಞಾನಿಗಳ ಅಭಿಮತ.

ಹರ್ ಹಿಟ್ಲರರ ಭಾಷಣದ ಅರ್ಥವೇನು?

ಹರ್ ಹಿಟ್ಲರಿನ ರೀಚಿನ ಈಚಿಗಿನ ಭಾಷಣವು ಬ್ರಿಟನಿನಲ್ಲಿಯಾಗಲೀ, ಅಮೇರಿಕದಲ್ಲಾಗಲೀ ಯಾವನೊಬ್ಬ ವಿವೇಕಿಯನ್ನೂ ಮೋಸಗೊಳಿಸುವಂತಿಲ್ಲ. ಕಾರಣ ಅದೊಂದು ವಿಷಪೂರಿತ ಭಾಷಣ — ಜರ್ಮನಿಯ ಪ್ರಜೆಗಳನ್ನು ಮಾತ್ರ ಸಮಾಧಾನಗೊಳಿಸುವ ಒಂದು ಭಾಷಣ!

ಈ ಭಾಷಣದಲ್ಲಿ ಒಟ್ಟಿಗೆ ಇರುವುದೇನು? ಜರ್ಮನಿಯ ಪ್ರಶಂಸೆ; ಅದರ ನ್ಯಾಯಸಾಧನೆ. ಫ್ರಾನ್ಸ್ ಬ್ರಿಟನುಗಳ ದೂಷಣೆ; ಅವುಗಳ ಅನ್ಯಾಯ ಪ್ರವರ್ತನೆ. ಅಷ್ಟೇ ಅಲ್ಲ; ಬ್ರಿಟನನ್ನು ತಾನು ಧ್ವಂಸಮಾಡುವೆನೆನ್ನುವ ಹಿಟ್ಲರನ ಬೆದರಿಕೆಯೂ, ಬ್ರಿಟನಿಗೊಂದು ವಿನಂತಿಯೂ ಬೇರೆ ಈ ಭಾಷಣದಲ್ಲಿದೆ. ಇದು ಬ್ರಿಟನಿನ ಸಾಮಾನ್ಯ ಜನರ ನೀತಿಗೆಡಿಸಲು ಉದ್ದೇಶಿಸಿದ ಹಿಟ್ಲರನ ದೊಂದು ದೊಡ್ಡ ಗಾಳ!

ಹಿಟ್ಲರನು, ಈ ಭಾಷಣದಲ್ಲಿ ಇತ್ತಂಡಕ್ಕೂ ಸರಿಯಾದ ಸಂಧಿಪ್ರಸ್ತಾವನ್ನೇನೂ ಸೂಚಿಸಿಲ್ಲ. ಬ್ರಿಟಿಷ್ ಸಾಮ್ರಾಜ್ಯವನ್ನು ಈಗಲಾದರೂ ರಕ್ಷಿಸಿಕೊಳ್ಳಬಹುದೆಂದಿಷ್ಟೇ ಹೇಳುತ್ತಾನೆ ಅದು ಹೇಗೆಂದು ಯಾರಿಗೂ ತಿಳಿಯದು! ಇಂತಹ ಸಂದರ್ಭದಲ್ಲಿ, ಹಿಂದೆ ಹಿಟ್ಲರನ ರಾಜಿಯ ಶರ್ತಗಳನ್ನು ನಿರಾಕರಿಸಿದ ಬ್ರಿಟನು, ಇಂದು ಹಿಟ್ಲರ ನೊಡನೆ ವ್ಯವಹರಿಸುವುದೇ? ಅಸಾಧ್ಯ!

ಬ್ರಿಟನ್ ಇಂದು ತನ್ನ ಯಾವತ್ತು ಮಿತ್ರರಿಗಾಗಿ ಕಾದಾಡುತ್ತಿದೆ. ಆ ಒಂದು ರಾಷ್ಟ್ರದ ಅಧಿಕಾರ ತಪ್ಪಬೇಕೆಂದು ಹೋರಾಡುತ್ತಿದೆ. ಹಿಟ್ಲರನಾದರೋ, ಯುರೋಪಿನಲ್ಲಿ ತನಗೆ ನಿರಂಕುಶಾಧಿಕಾರವೇ ಅಗತ್ಯವೆಂದು ಸಾರಿ ಸಾಧಿಸುವುದು ಖಂಡಿತ ಅಲ್ಲದೆ, ಸಾಮ್ರಾಜ್ಯದಿಂದ ಅವನು ಹೆಚ್ಚಿನ ಕೇಳಿಕೆಗಳನ್ನೂ ಕೇಳಬಹುದು. ಅವನು ತಾನು ವಿಜಯಿ ಎಂಬುದನ್ನೆ ನೆನಪಿನಲ್ಲಿ ಇಟ್ಟುಕೊಂಡೇ ಮಾತಾಡುತ್ತಿದ್ದಾನೆ. ಹಾಗಾದರೆ ವಿವಿಧ, ಪರಸ್ಪರ ವಿರುದ್ಧ ದೃಷ್ಟಿಗಳಿಂದ ಮಾತಾಡುವ ಎರಡು ಪಕ್ಷದವರಿಗೆ ಕಲೆತು ಮಾತಾಡಲು, ಏಕೋದ್ದೇಶವುಳ್ಳ ಒಂದು ಕ್ಷೇತ್ರವೆಲ್ಲಿದೆ? ವಸ್ತುತಃ, ಇದರಿಂದ ಸಂಧಿ ಸಾಧ್ಯವಿಲ್ಲವೆಂದೇ ಅರ್ಥ!

ಹಿಟ್ಲರನು ಬ್ರಿಟನಿನ ವಿವೇಕ ಬುದ್ಧಿಗೂ, ಸಕಾರಣ ವಾದಕ್ಕೂ ವಿನಂತಿಸಿಕೊಂಡಿದ್ದಾನೆ. ಅದು ಇನ್ನೊಂದು ದೊಡ್ಡ ತಕ್ಕು . ಗ್ರೇಟ್ ಬ್ರಿಟನ್ ತನ್ನ ವಿವೇಕ ಬುದ್ಧಿಯನ್ನೂ, ಸಕಾರಣವಾದವನ್ನೂ ಚೆನ್ನಾಗಿ ಉಪಯೋಗಿಸಿಕೊಂಡಲ್ಲವೇ — ಈ ಯುದ್ಧಕ್ಕೆ ಇಳಿದುದು? ಯುದ್ಧವನ್ನು ಮುಂದುವರಿಸುತ್ತಿರುವುದು? ಬ್ರಿಟನು ಯುದ್ಧವೇ ಸಿದ್ಧವೆಂದು ಪಣತೊಟ್ಟ ಬಳಿಕ, ಹಿಟ್ಲರನ ಈ ಹುಲು ಬೆದರಿಕೆಗೆ ತಲೆ ಬಾಗದು. ಬ್ರಿಟನಿಗೆ ತನ್ನ ಶಕ್ತಿ ಚೆನ್ನಾಗಿ ತಿಳಿದಿದೆ; ಈ ಯುದ್ಧದಲ್ಲಿ ಅಡಕವಾದ ಧ್ಯೇಯವೂ ಯಾವುದೆಂದೂ ಅದಕ್ಕೆ ಚೆನ್ನಾಗಿ ಗೊತ್ತಿರುವುದೇ!

ಶುಕ್ರ ಸಂಜೀವನ—1/4 ಸೇರಿಗೆ ರೂ. 4.

ಧಾತು ಸ್ಖಲನ, ಸ್ವಪ್ನೇಂದ್ರಿಯ, ನರಗಳ ದೌರ್ಬಲ್ಯ, ನಪುಂಸಕತ್ವ ಇತ್ಯಾದಿ ಧಾತು ಕ್ಷೀಣತೆಯಿಂದಾಗಿ ಉಂಟಾಗುವ ರೋಗಗಳಿಗೆಲ್ಲಾ ಸ್ವರ್ಣಪ್ರಾಯವಾದ ಔಷಧಿ.

ಸಾಧನ ಔಷಧಾಲಯ, ಡಕ್ಕಾ, ಬಂಗಾಲ.

ಅಧ್ಯಕ್ಷ – ಡಾ. ಜೋಗೇಶಚಂದ್ರಘೋಷ್, ಆಯುರ್ವೇದ ಶಾಸ್ತ್ರಿ, ಎಂ.ಎ. ಎಫ್.ಸಿ.ಎಸ್.(ಲಂಡನ್) ಎಂ.ಸಿ.ಎಸ್.(ಅಮೇರಿಕ) ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟರಿ ಪ್ರೊಫೆಸರರು.

ಮದ್ರಾಸು ಕೇಂದ್ರ—17-A, ಬ್ರಾಡ್ವೆ, ಮದ್ರಾಸು.
ಮಂಗಳೂರಿನಲ್ಲಿ ಏಜೆಂಟರು – ಷಾ ಕಂಪೆನಿ,
ಸುಗಂಧ ಮತ್ತು ಔಷಧ ದ್ರವ್ಯಗಳ ವ್ಯಾಪಾರಿಗಳು.

ವೈದ್ಯ ಸಲಹೆ, ಪ್ರಿಸ್ಕ್ರಿಪ್ಷನ್ ಮತ್ತು ಕೆಟಲಾಗು ಉಚಿತ.

ನೋಟೀಸು

ದಕ್ಷಿಣ ಕನ್ನಡ ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಸ್ಮಾಲ ನಂಬ್ರ 196/1940.

ನಾರಾಯಣ ವೆಂಕಟೇಶ ಶೆಣೈ ಇವರ ಜನರಲ್ ಏಜಂಟ್ ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್, ಉಡುಪಿ, ಇದರ ಕಡೆಯಿಂದ ರಿಕವರಿ ಆಫೀಸರ್ ಎಮ್. ಎಸ್. ಭಂಡಾರಿ —ವಾದಿ

ಮತ್ತು

ಕೆ. ಮಾಧವನ್— ಕುಟ್ಟಾಯಿಕಾರಣ್ಯನ್ ಇವರ ಮಗ–ಉಡುಪಿ ತಾಲೂಕು ಮೂಡನಿಡಂಬೂರು ಗ್ರಾಮದ ಕಾಡಬೆಟ್ಟು —ಪ್ರತಿವಾದಿ

ಇವರೊಳಗೆ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನಂದರೆ:—

ಪ್ರತಿವಾದಿಯು ವಾದಿಯ ಉಡುಪಿ ಅಂಗಡಿಯಲ್ಲಿ ತಾ. 14—3—'38ರ ವರೇಗೆ ನಡಿಸಿದ ಲೇನಾದೇವಿ ಬಾಬ್ತು ಪ್ರತಿವಾದಿಯಿಂದ ಬರತಕ್ಕ ರೂಪಾಯಿ 268—0—0ಕ್ಕೆ ವಾದಿಯು ಪ್ರತಿವಾದಿಯ ಮೇಲೆ ಮಾಡಿದ ಸದ್ರಿ ದಾವೆಯು ತಾ. 2—8—'40ಕ್ಕೆ ಆಖೈರ ತಸ್ಕಿಗೆ ಇಟ್ಟರುವುದರಿಂದ ಆ ಕುರಿತು ಉದಾಹರಣೆ ಕೊಡುವರೆ ಪ್ರತಿವಾದಿಯು ಸ್ವತಹಾ ಅಥವಾ ವಕೀಲರ ಮುಖಾಂತರ ಸದ್ರಿ ತಾರೀಕಿನ ದಿವಸ ಸದ್ರಿ ಕೋರ್ಟು ಮುಂದೆ ಹಾಜರಾಗಲಿಕ್ಕೆ ತಪ್ಪಿದರೆ ಸದ್ರಿ ದಾವೆಯು ಪ್ರತಿವಾದಿಯ ಗೈರುಹಾಜರಿಯಲ್ಲಿ ಕೇಳಿ ಫೈಸಲು ಮಾಡಲಾದೀತೆಂತ ಸದ್ರಿ ಪ್ರತಿವಾದಿಗೆ ಈ ಮೂಲಕ ಸೂಚಿಸೋಣಾಗುತ್ತದೆ.

M. Damodar Kamath,
Advocate for Plaintiff.

Udipi, South Kanara
Dated 20—7—40

ನಗರವಾಸಿಯ ಆರೋಗ್ಯ ರಕ್ಷಣೆ

(ಮಾನವನು ತನ್ನ ಜೀವನದಲ್ಲಿ ಆರೋಗ್ಯವೃದ್ಧಿಕಾರಿಯನಾಗಿದ್ದು ಕರ್ತವ್ಯವನ್ನು ಮಾಡಿ ಸಂತೋಷದಿಂದ ಬಹಳ ಕಾಲ ಬಾಳಿ ಬದುಕಿರಬೇಕಾದರೆ ಅನುಸರಿಸಬೇಕಾದ ವಿಧಾನಗಳ ವಿವರ).

೧. ಆರೋಗ್ಯ

"ಶರೀರ ಮಾದ್ಯಂ ಖಲು ಧರ್ಮ ಸಾಧನಂ" ಎಂಬ ನಾಣ್ನುಡಿಯು ಎಲ್ಲಾ ಧರ್ಮ ಕೆಲಸಗಳ ಸಾಧನೆಗೂ ಆರೋಗ್ಯವಾದ ಶರೀರವೇ ಮೂಲ ಎಂಬುದನ್ನು ತಿಳಿಸುತ್ತದೆ. ಆದ ಕಾರಣ ಮಾನವನು ಇಹಲೋಕದಲ್ಲಿ ಉತ್ಕೃಷ್ಟವಾದ ಸುಖವನ್ನೂ ಪರಲೋಕದಲ್ಲಿ ದೇವರೊಂದಿಗೆ ಸೇರಿ ನಿರಂತರವಾದ ಆನಂದಾನುಭವವನ್ನೂ ಪಡೆಯಲು ತನ್ನ ಜೀವಮಾನದಲ್ಲಿ ದೇಹದ ಮತ್ತು ಬುದ್ಧಿ ಶಕ್ತಿಯ ಸಹಾಯದಿಂದ ಯಾವ ಕೆಲಸವನ್ನು ತೃಪ್ತಿಕರವಾಗಿ ನಡೆಸಬೇಕಾದರೂ ಆರೋಗ್ಯವು ಅವಶ್ಯಕವಾಗಬೇಕು. ಶರೀರವು ಆರೋಗ್ಯವಾಗಿದ್ದರೆ ಮನಸ್ಸೂ ಚಟುವಟಿಕೆಯಾಗಿ ಕೆಲಸ ಮಾಡಲು ಸಮರ್ಥವಾಗುತ್ತದೆ. ರೋಗದಿಂದ ನರಳುತ್ತಾ ಮಲಗಿರುವಾಗ ಕಾಯಶಕ್ತಿಯಾಗಲಿ ಬುದ್ಧಿ ಶಕ್ತಿಯಾಗಲಿ ಕೇವಲ ಕಡಮೆಯಾಗಿರುವುದರಿಂದ ಯಾವ ಕೆಲಸವನ್ನಾಗಲಿ, ಆಲೋಚನೆಯನ್ನಾಗಲಿ ಉತ್ಸಾಹದಿಂದ ಮಾಡಲು ಸಾಧ್ಯವಿಲ್ಲ ಎಂದರೆ ಯಾವ ಆದಾಯವನ್ನು ಹೊಂದಲೂ ಅವಕಾಶವಿಲ್ಲ. ಇದರಿಂದಲೇ "ಆರೋಗ್ಯ ಭಾಗ್ಯವೇ ಭಾಗ್ಯ" ಎಂಬ ಗಾದೆಯು ಹುಟ್ಟಿದೆ.

೨. ಶುಚಿತ್ವ

ಶುಚಿತ್ವವೇ ಆರೋಗ್ಯಕ್ಕೆ ಮೂಲ. ನಾವು ಊಟ ಮಾಡುವ ಆಹಾರ, ಕುಡಿಯುವ ನೀರು, ಹಾಲು, ಸೇವಿಸುವ ವಾಯು, ನಮ್ಮ ಮೈ, ಧರಿಸುವ ಉಡುಪು, ವಾಸ ಮಾಡುವ ಮನೆ, ಉಪಯೋಗಿಸುವ ಇತರ ವಸ್ತುಗಳು ಇವನ್ನು ಪರಿಶುದ್ಧವಾಗಿಟ್ಟುಕೊಳ್ಳಬೇಕು. ಇದು ಸುಲಭ ಸಾಧ್ಯವಲ್ಲ. ಇದಕ್ಕೆ ಮಕ್ಕಳಿಗೆ ಬಾಲ್ಯದಿಂದಲೂ ದಿನವಹಿ ತಮ್ಮ ಮೈ ಮತ್ತು ಬಟ್ಟೆಗಳನ್ನು ಶುಚಿಯಾಗಿಟ್ಟುಕೊಳ್ಳುವುದನ್ನು ತೋರಿಸಿ, ಮಾಡಿಸಿ ಕಲಿಸಬೇಕು. ಶುಚಿಯಾಗಿಡುವುದು ಒಂದು ಪುಣ್ಯ ಕೆಲಸವೆಂದೇ ಭಾವಿಸಬೇಕು. ಬಾಲ್ಯದಿಂದಲೂ ವಿಶೇಷ ಗಮನಕೊಟ್ಟು ಕಲಿತು ಅಭ್ಯಾಸಕ್ಕೆ ತಂದು ಆ ಸ್ವಭಾವವನ್ನುಂಟು ಮಾಡಿಕೊಳ್ಳಬೇಕು. ನಮ್ಮ ಆಲೋಚನೆ, ಮಾತು ಮತ್ತು ಕಾರ್ಯವೂ ಪವಿತ್ರವಾಗಿರಬೇಕು. ಕೊಳಕುತನವು ಮನುಷ್ಯರಲ್ಲಿ ಸಹಕರಿಸುವುದಕ್ಕೆ ಅವಕಾಶವನ್ನು ತಪ್ಪಿಸುತ್ತದೆ. ಕೊಳಕರ ಸಂಗಡ ಜನರು ಸೇರುವುದಕ್ಕೆ ಇಷ್ಟಪಡುವುದಿಲ್ಲ. ಶುಚಿಯಾಗಿರುವವರನ್ನು ನೋಡುವುದರಿಂದಲೇ ಮನಸ್ಸಿಗೆ ಆಹ್ಲಾದವುಂಟಾಗುತ್ತದೆ. ಇದರಿಂದಲೇ ಶುಚಿಯಾಗಿರುವವರು ದೈವಾನುಗ್ರಹಕ್ಕೆ ಪಾತ್ರರು ಎಂದು ಹೇಳಲಾಗಿದೆ.

೩. ದೇಹ ರಚನಾಸಾಮಗ್ರಿ

ನಮ್ಮ ದೇಹವು ಚರ್ಮ, ರಕ್ತ, ಮಾಂಸ ಖಂಡ, ಮೂಳೆ, ನರಗಳು, ಮೆದುಳು, ನಾಳ, ಗ್ರಂಥಿ, ಕೂದಲು, ಉಗುರು ಮುಂತಾದುವುಗಳಿಂದ ಮಾಡಲ್ಪಟ್ಟಿದೆ. ಇವುಗಳೆಲ್ಲಾ ಸಸಾರ ಜನಕ, ಶರ್ಕರಪಿಷ್ಟಗಳು, ಮೇದಸ್ಸು, ಲವಣ, ನೀರು ಮತ್ತು ಕೆಲವು ಅನ್ನಾಂಗಗಳಿಂದ ಆಗಿ ವೃದ್ಧಿ ಹೊಂದುತ್ತಿವೆ. ಆದಕಾರಣ ನಾವು ತೆಗೆದುಕೊಳ್ಳುವ ಸಸ್ಯ ಮತ್ತು ಪ್ರಾಣಿ ಸಂಬಂಧವಾದ ಆಹಾರ ಪಾನೀಯಗಳಲ್ಲಿ ಇವು ಇದ್ದೇ ಇರಬೇಕು.

೪. ಆಹಾರ ವಸ್ತುಗಳು

ಇವು ಸಸ್ಯ ವರ್ಗ, ಪ್ರಾಣಿ ವರ್ಗದಿಂದ ಉಂಟಾಗುತ್ತವೆ. (೧) ಸ್ವಾಭಾವಿಕವಾದವು—ರಾಗಿ, ಜೋಳ, ಅಕ್ಕಿ, ಗೋಧಿ ಮುಂತಾದ ಧಾನ್ಯಗಳು; ಉದ್ದು, ಹೆಸರು, ತೊಗರಿ, ಅವರೆ ಮುಂತಾದ ದ್ವಿದಳ ಧಾನ್ಯಗಳು; ಬಟಾಣಿ, ಕಡಲೇ ಕಾಯಿ ಮುಂತಾದ ಕಾಳುಗಳು; ತೆಂಗಿನ ಕಾಯಿ, ಕೊಬರಿ, ಬಾದಾಮಿ, ಗೋಡಂಬಿ ಮುಂತಾದ ಬೀಜಗಳು; ಗಡ್ಡೆಗೆಣಸು, ತರಕಾರಿ, ಸೊಪ್ಪುಗಳು; ರಸವತ್ತಾದ, ಮಾಗಿದ ಹೊಸ ಹಣ್ಣುಗಳು, ಹಾಲು, ಮೊಟ್ಟೆ ಮುಂತಾದುವು. (೨) ಬದಲಾವಣೆಯಾದವು—ಹಿಟ್ಟು, ರೊಟ್ಟಿ, ಅನ್ನ ಮುಂತಾದುವು; ಸಾರು, ಪಲ್ಯ, ಹ... ಮುಂತಾದುವು; ಬೆಲ್ಲ, ಸಕ್ಕರೆ, ಬೆಣ್ಣೆ, ಕೆನೆ, ಮೊಸರು, ಮಜ್ಜಿಗೆ, ತುಪ್ಪ, ಎಣ್ಣೆ, ಕೊಬ್ಬು, ಮೀನು, ಮಾಂಸ ಮುಂತಾದುವು. ಈ ಪ್ರತಿಯೊಂದು ಜಾತಿ ಆಹಾರ ವಸ್ತುವಿನಲ್ಲಿಯೂ ನಮ್ಮ ದೇಹವನ್ನು ಪೋಷಿಸಿ ಬೆಳಿಸಿ ಶಾಖವನ್ನೂ ಶಕ್ತಿಯನ್ನೂ ಕೊಡುವುದಕ್ಕೆ ಬೇಕಾದ ಸಸಾರಜನಕ, ಶರ್ಕರಪಿಷ್ಟಗಳು, ಮೇದಸ್ಸು, ಲವಣ, ನೀರು ಈ ಐದು ಪದಾರ್ಥಗಳು ನಮಗೆ ಬೇಕಾದ ಪ್ರಮಾಣದಲ್ಲಿರುವುದಿಲ್ಲ. ಬೇರೆ ಬೇರೆ ಪ್ರಮಾಣಗಳಲ್ಲಿವೆ. ಆದ ಕಾರಣ ಹಿಟ್ಟು, ಅನ್ನ, ರೊಟ್ಟಿ, ಹಣ್ಣು ಮುಂತಾದ ಒಂದೇ ಜಾತಿಯ ಆಹಾರ ವಸ್ತುವನ್ನೇ ಪೂರ್ತಿಯಾಗಿ ತಿಂದು ಜೀವಿಸುವುದಕ್ಕೆ ಆಗುವುದಿಲ್ಲ. ನಾವು ಪ್ರತಿನಿತ್ಯವೂ ತೆಗೆದು ಕೊಳ್ಳುವ ಆಹಾರದಲ್ಲಿ ಮೇಲೆ ತಿಳಿಸಿದ ವಸ್ತುಗಳು ನಮಗೆ ಬೇಕಾದ ಪ್ರಮಾಣದಲ್ಲಿ ಇರುವಂತೆ ಆಹಾರ ವಸ್ತುಗಳನ್ನು ಮಿಶ್ರ ಮಾಡಿ ತೆಗೆದುಕೊಳ್ಳಬೇಕು. ಮಿಶ್ರಾಹಾರವೇ ಒಳ್ಳೆಯದು. ಆದುದರಿಂದಲೇ ನಾವು ನಿತ್ಯವೂ ತೆಗೆದುಕೊಳ್ಳುವ ಆಹಾರವು ಕೆಳಗಣ ರೀತಿಯಲ್ಲಿ ಮಿಶ್ರವಾಗಿಯೇ ಇದೆ. (೧) ರೊಟ್ಟಿ, ಬೆಣ್ಣೆ, ಸಕ್ಕರೆ, ಮಾಂಸ, ಹಣ್ಣು, ಹಾಲು; (೨) ಅನ್ನ, ಸಾರು, ಹುಳಿ, ಪಲ್ಯ, ಹಾಲು, ತುಪ್ಪ, ಮೊಸರು, ಹಣ್ಣು. (೩) ಹಿಟ್ಟು, ಸೊಪ್ಪು, ಉದಕ, ಮೀನು, ಮಾಂಸ—ಈ ರೀತಿ.

ನಾವು ನಿತ್ಯವೂ ತೆಗೆದುಕೊಳ್ಳುವ ಆಹಾರವು ಪುಷ್ಟೀಕರವಾಗಿಯೂ, ಬಲಕಾರಿಯಾಗಿಯೂ, ಆರೋಗ್ಯಕರವಾಗಿಯೂ ಇರಬೇಕು. ಮತ್ತು ಮೇಲೆ ಹೇಳಿದ ಐದು ವಸ್ತುಗಳನ್ನೆ ಸರಿಯಾದ ಪ್ರಮಾಣದಲ್ಲಿ ಒಳಗೊಂಡಿರಬೇಕು. ಇದಲ್ಲದೆ ಆಹಾರ ಪದಾರ್ಥಗಳು ಸುಲಭವಾಗಿ ಜೀರ್ಣಿಸಿ ರಕ್ತಗತವಾಗಿ ಸಮೆದು ಹೋಗುವ ಶರೀರ ಭಾಗಗಳನ್ನು ಸರಿಪಡಿಸಿ ಶರೀರದ ಅಂಗಗಳನ್ನು ಬೆಳೆಸುವುದಾಗಿಯೂ ಮತ್ತು ಪ್ರತಿದಿನವೂ ನಮ್ಮ ತ್ರಿಕರಣಗಳಿಂದ ಕೆಲಸ ಮಾಡುವುದಕ್ಕೆ ದಾಢ್ರ್ಯ, ಶಾಖ ಮತ್ತು ಶಕ್ತಿಯನ್ನುಂಟು ಮಾಡುವುದಾಗಿಯೂ ಇರಬೇಕು.

ಗೋಧಿಯನ್ನು ಬೀಸಿ ಹಿಟ್ಟು, ಹೊಟ್ಟು, ರವೆಯನ್ನು ವಿಂಗಡಿಸದೆ ಒಟ್ಟಿಗೆ ಸೇರಿಸಿ ರೊಟ್ಟಿಯನ್ನು ಮಾಡಬೇಕು. ಸಣ್ಣ ಹೊಟ್ಟಿನಲ್ಲಿ ಸಸಾರಜನಕ ಪದಾರ್ಥವಿರುವುದರಿಂದ ಅದನ್ನು ತೆಗೆದು ಕಬಾರದು. ಅಕ್ಕಿಯನ್ನು ವಿಶೇಷವಾಗಿ ತೊಳೆಯದೆ ಗಂಜಿಯನ್ನು ಬಸಿಯದೆ ಅನ್ನವನ್ನು ಮಾಡಬೇಕು. ಅಕ್ಕಿಯ ತೌಡಿನಲ್ಲಿ ಸಸಾರಜನಕ ವಸ್ತು ಮತ್ತು ಅನ್ನಾಂಗವು ಇರುವುದರಿಂದ ಅಕ್ಕಿಯನ್ನು ಹೆಚ್ಚಾಗಿ ಬಿಳುಪು ಮಾಡಿ ತೌಡನ್ನು ತೆಗೆದು ಹಾಕಕೂಡದು. ಕುಟ್ಟಿದ ಅಕ್ಕಿಯು ಯಂತ್ರದಲ್ಲಿ ತಯಾರಾದ ಅಕ್ಕಿಗಿಂತಲೂ ಒಳ್ಳೆಯದು.

"ಆಹಾರವನ್ನು ಕುಡಿಯಬೇಕು, ಪಾನೀಯವನ್ನು ತಿನ್ನಬೇಕು" ಎಂದು ಹೇಳುವುದುಂಟು. ಹೀಗೆಂದರೆ ಗಟ್ಟಿಯಾದ ಆಹಾರವನ್ನು ಹಲ್ಲಿನಿಂದ ಚೆನ್ನಾಗಿ ಅಗಿದು ನುರುಗಿಸಿ ಜೊಲ್ಲುರಸದೊಡನೆ ಸೇರಿಸಿ ಕರಗಿಸಿ ದ್ರುವರೂಪವಾಗಿ ಮಾಡಿ ನುಂಗಬೇಕೆಂದು ಅರ್ಥ. ಪಾನೀಯವನ್ನು ತಿನ್ನಬೇಕೆಂದರೆ ನೀರಾಗಲಿ ಹಾಲಾಗಲಿ ಸ್ವಲ್ಪ ಸ್ವಲ್ಪವಾಗಿ ತೆಗೆದುಕೊಂಡು ಬಾಯಲ್ಲಿ ಸ್ವಲ್ಪ ಹೊತ್ತು ಇಟ್ಟು ಕೊಂಡಿದ್ದು ಚೆನ್ನಾಗಿ ಜಪ್ಪರಿಸಿ ನುಂಗಬೇಕೆಂದು ಅರ್ಥ. ಹೀಗೆ ಮಾಡುವುದರಿಂದ ಆಹಾರವು ಜೀರ್ಣವಾಗುವುದಕ್ಕೆ ಜೊಲ್ಲುರಸವು ಸೇರಿ ಅನುಕೂಲವಾಗುತ್ತದೆ. ಹುತ, ಹಿತ, ಮಿತವಾದ ಆಹಾರವನ್ನು ಸಕಾಲದಲ್ಲಿ ತೆಗೆದುಕೊಳ್ಳಬೇಕು. ದಿನಕ್ಕೆ ಮೂರಾವರ್ತಿಗಿಂತ ಹೆಚ್ಚಾಗಿ ಊಟ ಮಾಡಬಾರದು. ಒಂದು ಊಟಕ್ಕೂ ಮತ್ತೊಂದು ಊಟಕ್ಕೂ ಮಧ್ಯದಲ್ಲಿ ಐದು ಗಂಟೆಯ ಕಾಲ ವಿರಾಮವಿರಬೇಕು. ಮತ್ತು ಮಧ್ಯಕಾಲದಲ್ಲಿ ಏನನ್ನೂ ತಿನ್ನಬಾರದು. ಪ್ರತಿಯೊಂದು ಊಟದಲ್ಲಿಯೂ ಹೊಟ್ಟೆ ತುಂಬುವುದಕ್ಕೆ ಒಂದು ತುತ್ತು ಕಡಮೆಯಾಗಿಯೇ ಊಟ ಮಾಡಬೇಕು. ಒಂದೇ ಆವರ್ತಿ ಹೊಟ್ಟೆಗೆ ತುಂಬುವುದಕ್ಕೆ ಬದಲು ಸ್ವಲ್ಪ ಸ್ವಲ್ಪವಾಗಿ ಎರಡು ಮೂರಾವರ್ತಿ ತೆಗೆದುಕೊಳ್ಳಬಹುದು. ರಾತ್ರಿ ಊಟವು ಕಡಮೆಯಾಗಿರಬೇಕು. ಊಟ ಮಾಡುವಾಗ ನೆಂಟರಿಷ್ಟರ ಸಂಗಡ ಸಂತೋಷವಾಗಿ ಮಾತನಾಡುತ್ತಾ, ನಿಧಾನವಾಗಿ ಊಟ ಮಾಡಬೇಕು. ಆಗಾಗ್ಗೆ ಒಂದೆರಡು ಹೊತ್ತು ಉಪವಾಸ ಮಾಡುವುದು ಒಳ್ಳೆಯದು. ಆಹಾರವನ್ನು ಛಳಿಗಾಲ ಉಷ್ಣಗಾಲಕ್ಕನುಗುಣವಾಗಿ ಸೇವಿಸಬೇಕು. ಎಂದರೆ ಛಳಿಗಾಲದಲ್ಲಿ ಶಾಕವನ್ನುಂಟು ಮಾಡುವ ಜಿಡ್ಡು ಪದಾರ್ಥ ಮತ್ತು ಸಕ್ಕರೆಯನ್ನು, ಬೇಸಿಗೆಯಲ್ಲಿ ಮಜ್ಜಿಗೆ ಮೊದಲಾದ ತಂಪು ಪದಾರ್ಥಗಳನ್ನು ತೆಗೆದುಕೊಳ್ಳಬೇಕು. ಮಿತಿಮೀರಿ ತಿಂದು ಅಜೀರ್ಣವನ್ನು ಮಾಡಿಕೊಳ್ಳಬಾರದು. ಜಿಹ್ವಾಚಾಪಲ್ಯಕ್ಕೆ ವಶನಾಗಿ ಅನಾರೋಗ್ಯಕರವಾದ ಅಂಗಡಿಯ ಮಿಠಾಯಿ ಬಿಸ್ಕತ್ತನ್ನೂ ಹೊಟೆಲ್ ತಿಂಡಿಯನ್ನೂ ತಿನ್ನಬಾರದು. ಊಟದ ಮಿತವಿರಬೇಕು. ಅತಿ ಸರ್ವತ್ರ ವರ್ಜಯೇತ ಆಹಾರ ವಸ್ತುಗಳಲ್ಲೆಲ್ಲಾ ಹಾಲು ಅತ್ಯುತ್ತಮವಾದುದು. ಇದರಲ್ಲಿ ದೇಹ ಪೋಷಣೆಗೆ ಬೇಕಾದ ಐದು ಪದಾರ್ಥಗಳೂ ಸರಿಯಾದ ಪ್ರಮಾಣದಲ್ಲಿವೆ. ಆದಕಾರಣ ಈ ಒಂದು ಪದಾರ್ಥವನ್ನೇ ಐವತ್ತು ವರ್ಷ ಸೇವನೆ ಮಾಡಿ ಆರೋಗ್ಯವಾಗಿರುವವರಿದ್ದಾರೆ. ಮಕ್ಕಳಿಗೆ ಈ ಒಂದು ಆಹಾರವನ್ನು ಕೊಡುವುದು ತಿಳಿದ ವಿಷಯವಾಗಿದೆ. ಎಳೆಯದಾದ ಕರಿಯ ಹಸುವಿನ ಹಾಲು ಒಳ್ಳೆಯದು. ಇದನ್ನು ಕಾಯಿಸಿ ಕುಡಿಯುವುದು ಉತ್ತಮ. ಅಜೀರ್ಣವಾದರೆ ಈ ಆಹಾರವನ್ನೂ ಬಿಟ್ಟು ಹಾಲು ಒಂದನ್ನೇ ಮೂರು ದಿನ ತೆಗೆದುಕೊಳ್ಳಬಹುದು. ಒಂದೆರಡು ವೇಳೆ ಆಹಾರವನ್ನು ಬಿಟ್ಟು ನೀರನ್ನು ಕುಡಿದು ಸುಮ್ಮನಿರಬಹುದು. ಇದು ಗುಣವಾಗುತ್ತದೆ. ಔಷಧಿಯ ಅಗತ್ಯವಿಲ್ಲ.

ಸ್ವಾಭಾವಿಕವಾದ ಆಹಾರ ಪದಾರ್ಥಗಳನ್ನು ಬೇಯಿಸದೆ ಹಸಿಯಾಗಿ ತಿನ್ನುವುದು ಒಳ್ಳೆಯದೆಂದು ಹೇಳುತ್ತಾರೆ. ಮಾಂಸಾಹಾರಕ್ಕಿಂತ ಸಸ್ಯಾಹಾರವೇ ಒಳ್ಳೆಯದೆಂಬ ಅಭಿಪ್ರಾಯ ಹೆಚ್ಚುತ್ತಾ ಇದೆ.

ಅನ್ನಾಂಗಗಳು ನಾವು ತೆಗೆದುಕೊಳ್ಳುವ ಧಾನ್ಯಗಳು, ತರಕಾರಿಗಳು, ಹಣ್ಣುಗಳು

[ಪುಟ ೧೦ ನೋಡಿ]



ನಗರವಾಸಿಯ ಆರೋಗ್ಯ ರಕ್ಷಣೆ

[೯ನೇ ಪುಟದಿಂದ]

ಮತ್ತು ಜಿಡ್ಡು ಪದಾರ್ಥಗಳಲ್ಲಿರುತ್ತವೆ. ಇವುಗಳನ್ನು ಸರಿಯಾದ ಪ್ರಮಾಣದಲ್ಲಿ ತೆಗೆದುಕೊಳ್ಳದಿದ್ದರೆ ದೇಹದ ಕೆಲವು ಸಾಮಗ್ರಿಗಳು ಬೆಳೆಯುದೆ ಹೋಗುವುದಲ್ಲದೆ ರೋಗಗಳಿಗೆ ಅವಕಾಶವಾಗುತ್ತದೆ.

೫. ಪಾನೀಯಗಳು

ನೀರಿಗಿಂತಲೂ ಶ್ರೇಷ್ಠವಾದ ಬೇರೆ ಪಾನೀಯವಿಲ್ಲ. ಕುಡಿಯುವ ನೀರು ಬಣ್ಣ, ವಾಸನೆ ಇಲ್ಲದೆ ಪರಿಶುದ್ಧವಾಗಿರಬೇಕು. ಧೂಳು, ಕೊಳಕು,ಬೀಳದ ಆಳವಾದ ಬಾವಿಯ ನೀರನ್ನೂ, ಕೊಳಾಯಿ ನೀರನ್ನೂ ಕುಡಿಯಬೇಕು. ನೀರನ್ನು ಕಾಯಿಸಿ, ಕುದಿಸಿ, ಆರಿಸಿ, ಸೋಸಿ ಕುಡಿಯಬೇಕು. ಎಳನೀರು, ನಿಂಬೆಹಣ್ಣಿನ ಪಾನಕ ನೀರು, ಮಜ್ಜಿಗೆ ಮೊದಲಾದುವನ್ನು ಮಿತವಾಗಿ ತೆಗೆದುಕೊಳ್ಳಬಹುದು. ಪ್ರತಿನಿತ್ಯವೂ ಆಳತೆ ಸೇರಿಗಿಂತಲೂ ಹೆಚ್ಚಾಗಿ ನೀರು ನಮ್ಮ ಶರೀರದಿಂದ ಹೊರಗೆ ಹೋಗುತ್ತದೆ. ನಾವು ಇಷ್ಟು ನೀರನ್ನೂ ಕುಡಿಯಬೇಕು. ಇದಕ್ಕಾಗಿ ಊಟ ಮಾಡುವಾಗ ತುತ್ತು ತುತ್ತಿಗೂ ಒಂದಾವರ್ತಿ ನೀರು ಕುಡಿಯುತ್ತಾ ಇದ್ದರೆ ಆಹಾರವು ಜೀರ್ಣಿಸುವುದಿಲ್ಲ. ಊಟಕ್ಕೆ ಅರ್ಧ ಗಂಟೆ ಮೊದಲು ಅಥವಾ ಊಟವಾದ ಅರ್ಧ ಗಂಟೆ ಮೇಲೆ ನೀರನ್ನು ಕುಡಿಯಬಹುದು. ಕುಡಿಯುವ ನೀರು ದೇಹದ ಎಲ್ಲಾ ಅವಯವಗಳಲ್ಲಿರುವ ಕಣಗಳು ವೃದ್ಧಿಯಾಗುವುದಕ್ಕೂ ಅವುಗಳಲ್ಲುಂಟಾಗುವ ಕಶ್ಮಲಗಳನ್ನು ತೊಳೆದು ಚರ್ಮ, ಮೂತ್ರ ಕೋಶ, ಮಲದ್ವಾರದಿಂದ ಹೊರಗೆ ತಳ್ಳುವುದಕ್ಕೂ ದೇಹದೆಲ್ಲಿರುವ ರಕ್ತವು ಗಟ್ಟಿಯಾಗದೆ ಯಾವಾಗಲೂ ದ್ರವರೂಪವಾಗಿರುವುದಕ್ಕೂ ಸಹಾಯಮಾಡುತ್ತದೆ. ಕುಡಿಯುವ ನೀರಿನ ಪ್ರಮಾಣವು ಕಡಮೆಯಾದರೆ ಮಲಬದ್ಧವನ್ನುಂಟುಮಾಡುತ್ತದೆ. ಆದಕಾರಣ ಕಾಸಿದ ನೀರನ್ನೂ ಹೆಚ್ಚಾಗಿ ಕುಡಿಯಬಹುದು. ಕಾಫಿ, ಟೀ, ಕೋಕೋ, ಸೋಡಾನೀರು, ಲೆಮನೆಡ್ ಮುಂತಾದ ಪಾನೀಯಗಳು ದೇಹಕ್ಕೆ ಆರೋಗ್ಯವಲ್ಲ. ಹೋಟೆಲುಗಳಲ್ಲಿ ದುಡ್ಡು ಕೊಟ್ಟು ಕಾಫಿ ಕುಡಿದು ಅನೇಕರ ಎಂಜಲನ್ನೂ ಮತ್ತು ರೋಗಿಗಳ ಸೋಂಕನ್ನೂ ಸಂಪಾದಿಸಿಕೊಳ್ಳುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಕಾಫಿಯನ್ನು ಕುಡಿಯುವುದಕ್ಕೆ ಕೊಡುವ ಬಟ್ಟಲು ತೊಳೆವ ರೀತಿಯನ್ನು ನೋಡಿದರೆ ವ್ಯಕ್ತವಾಗುತ್ತದೆ. ಮಾದಕ ದ್ರವ್ಯಗಳಾದ ಹೆಂಡ ಸಾರಾಯಿ ಮುಂತಾದುವು ವಾಸ್ತವವಾಗಿ ಪಾನೀಯಗಳೇ ಅಲ್ಲ—ಒಂದು ವಿಧವಾದ ವಿಷದ್ರವ್ಯಗಳು—ಆರೋಗ್ಯವನ್ನೂ ಬುದ್ಧಿಚಾತುರ್ಯವನ್ನೂ ಹಾಳುಮಾಡುತ್ತವೆ.

೬. ವಾಯು

ಮನುಷ್ಯನು ವಾಯು ಸೇವನೆ ಮಾಡದೆ ಕೆಲವು ನಿಮಿಷಗಳೂ ಬದುಕಿರಲಾರನು. ಧೂಳಿಲ್ಲದ ಪರಿಶುದ್ಧವಾದ ಹೊಸದಾದ ವಾಯುವನ್ನು ಸರ್ವ ಕಾಲದಲ್ಲಿಯೂ ಧಾರಾಳವಾಗಿ ಸೇವನೆ ಮಾಡುತ್ತಿರಬೇಕು. ಬೈಲಿನಲ್ಲಿ ಮಲಗುವುದನ್ನು ಅಭ್ಯಾಸ ಮಾಡಬೇಕು. ಮಲಗುವಾಗ ಮುಖಕ್ಕೆ ಮುಸುಕು ಹಾಕಕೂಡದು. ಛಳಿಗಾಲದಲ್ಲಿ ಮೂಗನ್ನಾದರೂ ಮುಚ್ಚಿಕೊಳ್ಳದೆ ಮಲಗಬೇಕು. ಬಾಯಲ್ಲಿ ಉಸಿರನ್ನು ಯಾವಾಗಲೂ ಆಡಿಸಬಾರದು. ವಾಯುವಿನಲ್ಲಿರುವ ಜೀವಾಮೃತವಾದ ಆಮ್ಲಜನಕ ವಾಯುವು ಶ್ವಾಸಕೋಶಗಳಿಂದ ರಕ್ತಕ್ಕೆ ಪ್ರವೇಶಿಸಿ ರಕ್ತ ಪರಿಚಲನೆಯ ಮೂಲಕ ದೇಹದ ಎಲ್ಲಾ ಭಾಗಗಳಲ್ಲಿಯೂ ಇರುವ ಕಣಗಳಿಗೆ ಬಂದು ಸೇರುತ್ತದೆ. ಇದರಿಂದ ಪ್ರತಿಯೊಂದು ಅವಯವದಲ್ಲಿರುವ ಕಣಗಳು ಆಮ್ಲಜನಕದ ಸಂಗಡ ಸೇರಿ ಪ್ರತಿಯೊಂದು ಅವಯವದ ಕರ್ತವ್ಯವನ್ನು ಮಾಡಿಸುತ್ತದೆ. ಎಷ್ಟು ಹೆಚ್ಚಾಗಿ ಆಮ್ಲಜನಕವು ದೇಹದೊಳಕ್ಕೆ ಸೇರಿದರೆ ಅಷ್ಟು ಚಟುವಟಿಕೆಯೂ ಆರೋಗ್ಯವೂ ಉಂಟಾಗುತ್ತದೆ. ಆದಕಾರಣ ನಿಟ್ಟುಸಿರು ತೆಗೆದು ಪ್ರತಿನಿತ್ಯವೂ ಅಲ್ಪ ಕಾಲ ಹೆಚ್ಚಾಗಿ ವಾಯುವನ್ನು ಸ್ವೀಕರಿಸಬೇಕು. ಪ್ರತಿನಿತ್ಯವೂ ಕೆಲವು ಪ್ರಾಣಾಯಾಮವನ್ನು ಮಾಡುವುದು ಆರೋಗ್ಯಕರ. ಪ್ರಾಣಾಯಾಮ ವಾಯುವನ್ನು ಮೂಗಿನ [redacted] ಮುಚ್ಚಿ ಎಡ ಹೊಳ್ಳೆಯಿಂದ [redacted] ಹೊರಗೆ ನಿಧಾನವಾಗಿ ಬಿಟ್ಟು ಆ ಮೆಲ್ಲೆ ಹೊಳ್ಳೆಯನ್ನು ಮುಚ್ಚಿ ಬಲ ಹೊಳ್ಳೆಯ ವಾಯುವನ್ನು ನಿಧಾನವಾಗಿ ಒಳಗೆ ತೆಗೆದು ಕೊಂಡು ತರುವಾಯ ಎರಡು ಹೊಳ್ಳೆಗಳನ್ನೂ ಸಾಧ್ಯವಾದಷ್ಟು ಕಾಲ ಮುಚ್ಚಿಕೊಂಡಿದ್ದು ಕೊನೆಗೆ ಎರಡು ಹೊಳ್ಳೆಗಳಿಂದಲೂ ವಾಯುವನ್ನು ಹೊರಗೆ ಬಿಡುವುದು. ಸಂಧ್ಯಾವಂದನೆ ಮಾಡುವವರು ಪ್ರತಿ ದಿನವೂ ಮೂರು ವೇಳೆಯಲ್ಲಿಯೂ ಒಂಭತ್ತು ಒಂಭತ್ತು ಪ್ರಾಣಾಯಾಮವನ್ನು ಮಾಡುವುದು ತಿಳಿದ ವಿಷಯವೇ ಆಗಿದೆ. ಧೂಳು, ಕೆಟ್ಟವಾಯು, ಹೊಗೆ, ಕಟುವಾದ ಸುವಾಸನೆ ಅಥವಾ ದುರ್ವಾಸನೆ, ಚುಟ್ಟ, ನಶ್ಯ ಇವನ್ನು ಸೇವಿಸಬಾರದು. ಧೂಳಿನಲ್ಲಿ ಅತ್ಯಂತ ಸೂಕ್ಷ್ಮವಾದ ಸಾಂಕ್ರಾಮಿಕ ರೋಗಗಳ ಕ್ರಿಮಿಗಳು ವಿಶೇಷವಾಗಿವೆಯೆಂದಾದರಿಂದ ಯಾವಾಗಲೂ ಕುಡಿಯಬಾರದು. ನಗರಗಳಲ್ಲಿ ಮೋಟರ್ ಬಂಡಿಗಳು ಸಂಚರಿಸುವಾಗ ಧೂಳಿನ ಹೊಡೆತವು ಯಾರಿಗೆ ತಾನೆ ಅನುಭವವಿಲ್ಲ!

೭. ಅಂಗೀಕರಣ ಮತ್ತು ಶುದ್ಧೀಕರಣ ಅಂಗಗಳು

ಹೊರಗಣ ಪದಾರ್ಥಗಳನ್ನು ದೇಹದೊಳಕ್ಕೆ ತೆಗೆದುಕೊಳ್ಳುವ ಮತ್ತು ಒಳಗಣ ಕಶ್ಮಲಗಳನ್ನು ಹೊರಕ್ಕೆ ತೆಗೆದು ಹಾಕುವ ಅಂಗಗಳು. ನಾವು ಹೊರಗಣ ಘನ, ದ್ರವ, ವಾಯುರೂಪವಾದ ಪದಾರ್ಥಗಳನ್ನು ದೇಹದೊಳಕ್ಕೆ ಅಂಗೀಕರಣಾಂಗಗಳಾದ ಬಾಯಿ ಮೂಗು ಎಂಬ ಎರಡು ಅಂಗಗಳಿಂದ ಎಂದರೆ ಆಹಾರ ಪಾನೀಯಗಳನ್ನು ಬಾಯಿ ಮೂಲಕ ಅನ್ನಕೋಶಕ್ಕೂ, ವಾಯುವನ್ನು ಮೂಗಿನ ಮೂಲಕ ಶ್ವಾಸಕೋಶಗಳಿಗೂ ತೆಗೆದುಕೊಳ್ಳುತ್ತೇವೆ. ತೆಗೆದುಕೊಂಡ ಆಹಾರ ಪಾನೀಯಗಳಲ್ಲಿ ಅನೇಕ ಭಾಗವು ಜೀರ್ಣಿಸಿ ರಕ್ತಗತವಾಗಿ ದೇಹವನ್ನು ಪೋಷಿಸುತ್ತದೆ. ಉಳಿದ ಕಶ್ಮಲ ಭಾಗವನ್ನೂ ದೇಹದ ಪ್ರತಿಯೊಂದು ಅವಯವದಲ್ಲಿರುವ ಅನೇಕ ಕಣಗಳು ತಮ್ಮ ಕರ್ತವ್ಯವನ್ನು ಮಾಡಿ ಉಂಟುಮಾಡುವ ಕಶ್ಮಲಗಳನ್ನೂ ದೇಹದಿಂದ ಹೊರಕ್ಕೆ ಮಲದ್ವಾರ, ಮೂತ್ರದ್ವಾರ, ಚರ್ಮ, ಮೂಗು ಎಂಬ ನಾಲ್ಕು ಅಂಗಗಳಿಂದ ತೆಗೆದು ಹಾಕುತ್ತೇವೆ. ಈ ಕಶ್ಮಲವನ್ನು ಸಕಾಲದಲ್ಲಿ ಹೊರಕ್ಕೆ ತಳ್ಳದಿದ್ದರೆ ಅದು ಒಳಗೆ ನಿಂತು ಕೊಳೆತು ಹುಳುತು ಉತ್ಪನ್ನವಾಗುವ ವಿಷವು ರಕ್ತಕ್ಕೆ ಸೇರಿ ಆರೋಗ್ಯವನ್ನು ಕೆಡಿಸಿ ರೋಗವನ್ನುಂಟುಮಾಡುತ್ತದೆ. ಆದಕಾರಣ ಸಕಾಲದಲ್ಲಿ ರೋಗಗಳಿಗೆಲ್ಲಾ ಮೂಲ ಕಾರಣವಾದ ಈ ಕಶ್ಮಲವನ್ನು ಹೊರಗೆ ಸಾಗಿಸಬೇಕು. ಪ್ರತಿ ನಿತ್ಯವೂ ಆರು ಆವರ್ತಿ ಮೂತ್ರ ವಿಸರ್ಜನೆ, ಎರಡು ಆವರ್ತಿ ಮಲ ವಿಸರ್ಜನೆಯಾಗುವಂತೆ ಅಭ್ಯಾಸ ಮಾಡಬೇಕು. ಹೊತಾರೆ ಸಂಜೆ ಮಲವಿಸರ್ಜನೆಗೆ ಅವಕಾಶವನ್ನು ಕಲ್ಪಿಸಬೇಕು. [ಸಶೇಷ]

ಜಂತನಾಶಕ ಪುಡಿ

ಜಂತುಗಳು ಹೊಟ್ಟೆಯೊಳಗೆ ಬೆಳೆದರೆ ಯಾವ ತರದ ಪೋಷಕ ತಿಂಡಿಗಳು ತಿಂದರೂ ಶರೀರಕ್ಕೆ ಉಪಯೋಗವಿರದು. ಅಲ್ಲದೆ ಸಣ್ಣ ಹುಡುಗರಿಗೆ ಈ ಹುಳುವಿನಿಂದ ತುಂಬಾ ಕೆಡಕಾಗಿರುವದು. ನಮ್ಮ ಜಂತಿನ ಪುಡಿಯಿಂದ ಹೊಟ್ಟೆಯೊಳಗಿನ ಚಿಕ್ಕ ದೊಡ್ಡ ಹುಳಗಳು ಸಲಿಸಾಗಿ ಮಲದೊಡನೆ ಬಿದ್ದು ಹೋಗುವದು. ಇದಕ್ಕೆ ಹರಳೆಣ್ಣೆ ತೆಕ್ಕೊಳ್ಳುವದು ಬೇಡ. ಪೆಕೆಟು 1ಕ್ಕೆ 0-1-0.

ಮೆಜಿಕ್ ಕ್ಯೂರ್

ಈ ಪ್ರಸಿದ್ಧವಾದ ಔಷಧಿಯು, ಅರ್ಧ ತಲೆನೋವು, ವಾಯು ಹೊಟ್ಟೆನೋವು, ಚಳಿಜ್ವರ, ಹಲ್ಲುನೋವು, ನೆಗಡಿ, ಕೆಮ್ಮು, ಇನ್‌ಫ್ಲೂಯೆಂಜ ಮುಂತಾದವುಗಳ ಮೇಲೆ ಗುಣಕಾರಿಯಾಗಿದೆ. ಪೆಕೆಟು 1ಕ್ಕೆ 0-1-6.

ತಯಾರಿಸುವವರು:

SHIVAJI CHEMICAL WORKS,
BELGAUM.

ವಿಕ್ರೀತ ಮಾಡುವವರು:

ಶ್ರೀ. ಹರಿದಾಸ್ ಭಂಡಾರಿಗಳು ಮತ್ತು ಷಾ ಕಂಪೆನಿ, ಮಂಗಳೂರು.

ಎಳೆ ವಯಸ್ಸಿನಲ್ಲೇ ಮಿತವ್ಯಯದ ಅಭ್ಯಾಸವನ್ನು ಪ್ರೋತ್ಸಾಹಿಸಿ ಮತ್ತು ನಿಮ್ಮ ಬಾಲಕನಿಗೆ ಯೋಗ್ಯ ಸಂಗ್ರಹವನ್ನು ಮಾಡಿಡಿ.

"ಚಿಲ್ಡ್ರನ್ಸ್ ಡೆಫರ್ಡ್ ಅಶ್ಯೂರೆನ್ಸ್"

ಪಾಲಿಸಿಯೊಂದನ್ನು ಸುಭದ್ರವೂ ಅತ್ಯಂತ ಜನಪ್ರಿಯವೂ ಆದ ಭಾರತೀಯ ಜೀವವಿಮಾ ಸಂಸ್ಥೆ

"ಓರಿಯಂಟಲ್"

ನಲ್ಲಿ ಪಡೆಯಿರಿ.

ಚಿಲ್ಡ್ರನ್ಸ್ ಡೆಫರ್ಡ್ ಅಶ್ಯೂರೆನ್ಸ್

ಎಂಬುದು ಹೆತ್ತವರು ತಮ್ಮ ಮಕ್ಕಳಿಗೆ ಅತ್ಯಲ್ಪ ಕಂತಿನ ಹಣಗಳ ಪಾವತಿಯಿಂದ ಇಡೀ ಜೀವಮಾನದ ಯಾ ಉಂಬಳಿವಿಮೆಯ ಪಾಲಿಸಿಯನ್ನು ಸಂಗ್ರಹಿಸಲು ಅನುಕೂಲವಾಗುವಂತೆ ತಯಾರಿಸಿದ ಹೊಸ ಯೋಜನೆಯಾಗಿದ್ದು ಇದರಲ್ಲಿನ ವಿಮಾ ಬಾಧ್ಯತೆಯು (ರಿಸ್ಕ್) 22 ವರ್ಷ ಪ್ರಾಯಕ್ಕಿಂತಲೂ ಮುಂಚಿತವಾಗದ ಒಂದು ನಿರ್ದಿಷ್ಟ ಪ್ರಾಯದಲ್ಲಿ ಆರಂಭವಾಗುವದು.

ವಿವರಗಳಿಗೆ ಇವರಿಗೆ ಬರೆಯಿರಿ:—

ಓರಿಯಂಟಲ್

ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕೊ., ಲಿಮಿಟೆಡ್.

ಸ್ಥಾಪಿತವಾದುದು: 1874. ಹೆಡ್ ಆಫೀಸು: **ಮುಂಬಾಯಿ.**

ಅಥವಾ ಬ್ರಾಂಚ್ ಸೆಕ್ರಿಟರಿ:

ಓರಿಯಂಟಲ್ ಲೈಫ್ ಆಫೀಸು, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.

ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟನೆಗಳು

I. ಇಂಗ್ಲೀಷ್

1. ದಿ ಮೈಸೂರ್ ಟ್ರೈಬ್ಸ್ ಎಂಡ್ ಕಾಸ್ಟ್ಸ್—ಕೀರ್ತಿಶೇಷ ಶ್ರೀ. ಎಚ್. ವಿ. ನಂಜುಂಡಯ್ಯ, ಎಂ.ಎ., ಎಂ.ಎಲ್., ಸಿ.ಐ.ಇ.ರವರು ಮತ್ತು ರಾವ್ ಬಹದ್ದೂರ್ ಎಲ್. ಕೆ. ಅನಂತಕೃಷ್ಣ ಅಯ್ಯರ್, ಇವರ ಇಂಡೆಕ್ಸ್ ಸಹಿತ. ನಾಲ್ಕು ಭಾಗಗಳಲ್ಲಿ. ಭಾಗ 1 . 15--0--0
   ಇತರ ಭಾಗಗಳು (ಇಂಡೆಕ್ಸ್ ಉಚಿತ) ಪ್ರತಿಯೊಂದಕ್ಕೆ . . . 12--8--0
2. ಪ್ರಮಾಣ ಸಮುಚ್ಚಯ—ಆಚಾರ್ಯ ದಿನ್ನಗ. ಭಾಗ 1. ಶ್ರೀ. ಎಚ್. ಆರ್. ರಂಗಸ್ವಾಮಿ ಅಯ್ಯಂಗಾರ್, ಎಂ. ಎ., ಇವರಿಂದ 3--0--0
3. ದಿ ಮನ್ರೋ ಸಿಸ್ಟೆಮ್ ಆಫ್ ಬ್ರಿಟಿಷ್ ಸ್ಟೇಟ್ಸ್‌ಮೇನ್‌ಶಿಪ್ ಇನ್ ಇಂಡಿಯಾ—ಡಾ. ಕೆ. ಎನ್. ವೆಂಕಟಸುಬ್ಬಾ ಶಾಸ್ತ್ರಿ, ಎಂ.ಎ., ಪಿಎಚ್.ಡಿ., ಅವರಿಂದ . . . 3--0--0

II. ಕನ್ನಡ

1. ಕನ್ನಡ ಭಾಷೆಯ ಇತಿಹಾಸ—ಶ್ರೀ. ಆರ್. ನರಸಿಂಹಾಚಾರ್, ಎಂ ಎ.,ಬಿ.ಎಲ್.ರವರಿಂದ 1--0--0

(ಬಿ) **ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಮಾಲೆ**

1. ಹರಿಶ್ಚಂದ್ರ ಕಾವ್ಯ ಸಂಗ್ರಹ 0-12--0
2. ಕಾದಂಬರಿ ಸಂಗ್ರಹ 0-12--0
3. ಪ್ರಭುಲಿಂಗಲೀಲೆಯ ಸಂಗ್ರಹ 0-12--0
4. ಸೊಕ್ರೆಟೀಸನ ಕೊನೆಯ ದಿನಗಳು—ಲೇಖಕರು: ಶ್ರೀ. ಎ. ಎನ್. ಮೂರ್ತಿರಾವ್, ಎಂ.ಎ. ಸಾದಾ ಪ್ರತಿ 0-12--0. ಕೆಲಿಕೊ 1--0--0
5. ಶ್ರೀ. ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆ—ಶ್ರೀ. ಕೆ. ವಿ. ಪುಟ್ಟಪ್ಪ — ಸಾದಾ 0-12--0 ಕೆಲಿಕೊ 1--4--0
6. ರವೀಂದ್ರನಾಥ ಠಾಕೂರರ ಜೀವನ ಮತ್ತು ಕಾರ್ಯಗಳು—ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ. — — ಸಾದಾ 0--12--0. ಕೆಲಿಕೊ 1--4--0
7. ಆರೋಗ್ಯ ಮತ್ತು ಅದರ ಜ್ಞಾನ ಮತ್ತು ಸಾಧನ—ಡಾ. ಜೆ. ಎ. ಈಶ್ವರ ಮೂರ್ತಿ, ಬಿ.ಎ., ಎಲ್.ಎಂ.ಎಸ್., ಬಿ.ಎಸ್.ಎಸ್.ಸಿ.—ಅವರಿಂದ. ರಟ್ಟು 0--12--0. ಕೆಲಿಕೊ 1--4--0
8. ಪಂಪರಾಮಾಯಣ ಸಂಗ್ರಹ—ಪಂಡಿತ ಟಿ. ಶ್ರೀನಿವಾಸ ರಾಘವಾಚಾರ್ ಮತ್ತು ಶ್ರೀ. ಡಿ. ಎಲ್. ನರಸಿಂಹಾಚಾರ್ಯರಿಂದ. — — ರಟ್ಟು 0--12--0. ಕೆಲಿಕೊ 1--0--0
9. ಹಣ ಪ್ರಪಂಚ—ಶ್ರೀ. ವಿ. ಸೀತಾರಾಮಯ್ಯನವರಿಂದ. ರಟ್ಟು 0--12--0. ಕೆಲಿಕೊ 1--4--0
10. ಸಂಸ್ಕೃತ ನಾಟಕ—ಶ್ರೀ. ಎ ಆರ್. ಕೃಷ್ಣಶಾಸ್ತ್ರಿ, ಎಂ.ಎ, ಅವರಿಂದ. — ರಟ್ಟು 0-12--0 ಕೆಲಿಕೊ 1--4--0
11. [redacted] ಜ್ಞಾನ—ಶ್ರೀ. ಬಿ. ವೆಂಕಟನಾರಣಪ್ಪ, ಎಂ.ಎ., ಅವರಿಂದ. — ರಟ್ಟು 0-12--0 ಕೆಲಿಕೊ 1--4--0
12. ಹಿಂದೂ ದರ್ಶನಸಾರ—ಶ್ರೀ. ಲಕ್ಷ್ಮೀಪುರಂ ಶ್ರೀನಿವಾಸಾಚಾರ್‌ರಿಂದ. — ರಟ್ಟು 0-12--0 ಕೆಲಿಕೊ 1--4--0



ಈ ತಿಂಗಳುವರಿಗೂ ಅರ್ಧ ಕ್ರಯ

Original Price Rs. 7. Sale Price Rs. 3—8—0.

GRAND CLEARANCE SALE

Pretty Shape and design.

ಮುಂಚಿನ ಕ್ರಯ ರೂ. 7. ಈಗಿನ ಕ್ರಯ ರೂ. 3-8-0.

ಭಂಗಾರದ ಲೀವರ್ ರಿಸ್ಟ್ ವಾಚ್

ಎಂಬ ಇಂಗ್ಲೀಷ್ ನಮೂನೆ ಕೈ ಗಡಿಯಾರ.

ಸ್ವಿಸ್ ಮೇಕರ್. ಲೀವರ್ ಮೂವ್‌ಮೆಂಟ್ಸ್. ಇಂಡಿಯಾ ದೇಶದಲ್ಲಿ ಎಷ್ಟೋ ಗಡಿಯಾರಗಳು ಖರ್ಚಾಗಿ ಅನೇಕ ಯೋಗ್ಯತಾಪತ್ರಗಳು ಬಂದಿರುವವು. ಇವು ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವವು. ನೋಡುವುದಕ್ಕೆ ಅಂದವಾಗಿಯೂ ಇರುತ್ತೆ. ಇದನ್ನು ಸ್ತ್ರೀಪುರುಷರು ಕೈಯಲ್ಲಿ ಕಟ್ಟಿಕೊಳ್ಳಲು ಬಹಳ ಚೆನ್ನಾಗಿದೆ. ಭಂಗಾರದ ಗಡಿಯಾರಗಳನ್ನು ನಾವು ಬಹಳ ತರಿಸಿರುವುದರಿಂದ ಸುಲಭ ಕ್ರಯಕ್ಕೆ ಕೊಡುತ್ತೇವೆ. ಒಂದನ್ನು ತರಿಸಿ ನೋಡಿದರೆ ಸಂತೋಷಪಡುವಿರಿ. ೩ ವರ್ಷ ಗ್ಯಾರಂಟಿ. ನಂ. ೪೨ ಕಡಿಮೆ ಕ್ರಯ ವಾಚ್ 1ಕ್ಕೆ ರೂ. 3-8-0. ಜಾಗ್ರತೆ ತರಿಸಿದವರಿಗೆ ಮಾತ್ರ ದೊರೆಯುತ್ತೆ. **ವೆಸ್ಟರ್ನ್ ಸ್ವೀಸ್ ವಾಚ್ ಕಂಪೆನಿ, ಪೋಸ್ಟ್ ಬಾಕ್ಸ್ ನಂ. 68, ಮದ್ರಾಸ್.**

Western Swiss Watch Co., Direct Importers, Post Box No. 68, Madras.

ಯುರೋಪಿನಿಂದ ಬ್ರಿಟನನ್ನು ದೂರವಿರಿಸಿರಿ!

ಉಂಡ ಮನೆಗೆರಡು ಬಗೆದ ಜರ್ಮನಿಯ ಪ್ರಚಾರ ಕಾರ್ಯ

ಹಿಟ್ಲರನ ಕ್ರಾಂತಿಯು ಅಳಿವುದೆಂದು? ಶಾಂತಿ ಹೇಗೆ ಸಾಧ್ಯ?

"ಯುರೋಪಿನ ಪುನರ್ರಚನೆ", "ಯುರೋಪಿನಲ್ಲಿ ಹೊಸ ಹಾದಿ", "ಯುರೋಪ್–ಯುರೋಪಿಯಾನರಿಂಗೆ", "ಬ್ರಿಟನನ್ನು ಕೈಯಿಳುಹದಂತೆ ದೂರವಿರಿಸಿ", "ಬ್ರಿಟನನ್ನು ಒದ್ದೋಡಿಸಿ".

—ಇದೀಗ ಇಂದಿನ ಯುರೋಪಿನಲ್ಲಿ, ಜರ್ಮನಿ ತಾನು ಗೆದ್ದ ಹಾಗೂ ತಾಟಸ್ಥ್ಯ ರಾಷ್ಟ್ರಗಳಲ್ಲಿ ಜರ್ಮನಿಯು ನಡೆಸುತ್ತಿರುವ ಪ್ರಚಾರ! ವಿವಿಧ ಪ್ರದೇಶದವರಿಗೆ ಅನುಗುಣವಾಗಿ, ವಿವಿಧ ರೀತಿಯಿಂದ ಈ ಭಾಷಣ, ಪ್ರಚಾರಗಳು ಸಾಗುತ್ತಿವೆ. ಆದರೆ, ಗೂಢ ಒಂದೇ! ಅಂತೂ ಈ ರೀತಿಯ ಪ್ರಚಾರಗಳಿಂದ, ಹಿಟ್ಲರನು ತಾನು ಯುರೋಪನ್ನು ಯುದ್ಧಗಳ ಕಾಟದಿಂದ ರಕ್ಷಿಸಿದವನೆಂದು ಸಾರುವುದನ್ನು ಬಿಟ್ಟಿಲ್ಲ.

ಹಿಟ್ಲರನು ತನ್ನ ಜನತೆಗೆ ಕೊಟ್ಟ ಉಪದೇಶವೂ ಇದೇ ಜಾತಿಯದು. "ಪರರಾಷ್ಟ್ರೀಯರ ಆಟಗಳಿಗೆ ಎಡೆಗೊಡಬೇಡಿರಿ. ಗಡಿಗಳ ಕಾದಾಟ, ಪಂಗಡಗಳ ಜಗಳ, ಪಾರ್ಟಿ ಕಾಳಗ ಮುಂತಾದವುಗಳಿಲ್ಲದಂತೆ ಮಾಡಬಲ್ಲವನ ಅಧಿಕಾರವನ್ನೊಪ್ಪಿಸಿಕೊಳ್ಳಿರಿ. ಆಗ ನಿಮಗೆ ಒಳ್ಳೆಯದಾಗುವುದು."

ಹೀಗೆ ಹಿಟ್ಲರನ ಈ ಆಟಗಳಿಂದ ಫೆಸಿಸ್ಟ್ ಧೋರಣೆಯು ಸಾಮ್ರಾಜ್ಯಶಾಹಿ ರಾಷ್ಟ್ರಗಳಿಗಿಂತಲೂ ಮೇಲಿನ ಮಟ್ಟಕ್ಕೇರಿ ಅಕೃತ್ಯ, ಚಿತ್ರ ಹಿಂಸೆಗಳನ್ನು ನಡೆಸಲೆಳಸುತ್ತಿದೆ. ಪ್ರತಿಯೊಂದು ರಾಷ್ಟ್ರವೂ, ಸರ್ವಾಧಿಕಾರಿ ಸರಕಾರ ಸ್ಥಾಪಿಸಿ, ಬಡ ಜನತೆಯ ಬೆನ್ನ ಮೇಲೆ ಸವಾರಿಮಾಡಿ, ಹಿಟ್ಲರನಿಗೆ ಮಣಿಯಬೇಕೆಂಬುದೇ ಹೊಸ ನೀತಿಯು ಗೂಢವಿರಬಹುದು. ಈ ಕಾರ್ಯವು ಇದುವರೆಗೆ ಬ್ರಿಟನ್, ಫ್ರಾನ್ಸ್, ಜರ್ಮನಿ ಹಾಗೂ ಜಪಾನ್‌ಗಳದಾಗಿತ್ತು. ಜರ್ಮನಿ ಈಗ ಫೆಸಿಸ್ಟ್ ಧೋರಣೆಯ ಹೆಸರಲ್ಲಿ, ಸಕಲರ ಅಧಿಕಾರವನ್ನೂ, ಅಕೃತ್ಯಗಳನ್ನೂ ತಾನೊಂದೇ ನಡಸಲು ಮುಂದಾಗುವಂತಿದೆ! ಅಲ್ಲದೆ "ಯುರೋಪನ್ನು ಅದರಷ್ಟಕ್ಕೆ ಬ್ರಿಟನ್ ಬಿಟ್ಟರೆ, ಬಲಿ ಇಲ್ಲದೆ, ಶಾಂತಿಯನ್ನು ಪಡೆಯಬಹುದು"ಂತೆ, ಎಂದೂ ಜರ್ಮನಿಯ ಡಂಗುರ!

ಹಿಟ್ಲರನ ಈ ತೆರನ ಕೇಳಿಕೆ ಇಂದು ನಿನ್ನೆಯದಲ್ಲ. "ಇದೊಂದಿಷ್ಟನ್ನು ಕೊಟ್ಟು ಬಿಡಿ. ನನಗೆ ತೃಪ್ತಿಯಾಯಿತು. ಮುಂದೆ ನಾವೆಲ್ಲರೂ ಮಿತ್ರರಾಗಿ ಕೊನೆಯಿಲ್ಲದ ಶಾಂತಿಯನ್ನಾನಂತು ಬಾಳಿಕೊಂಡಿರೋಣ" ಎಂದು ಈತನು ಅದೆಷ್ಟು ಬಾರಿ ಮಾಡಿದಿಲ್ಲ?

ಆತನ ಆಶೆ ಆಕಾಂಕ್ಷೆಗಳು ಮೇರೆಮೀರಿವೆ. ಒಂದು ಕಾಲದಲ್ಲಿ ರೈನ್‌ಲ್ಯಾಂಡ್ ಸಾಕೆಂದು,—ಲೊಕಾರ್ನೊ ಒಪ್ಪಂದದ ಹೊಸ ಪ್ರತಿ ಬೇಕೆಂದೂ ಸಾರಿದವನು,—ಇಂದು ಇಡೀ ಯುರೋಪ್ ಹಾಗೂ ಮನ್ರೋ ನೀತಿ ಬೇಕೆಂದು ಸಾರುತ್ತಿದ್ದಾನೆ. ಅಂದಲ್ಲಿ ಮುಂದೆ ಇನ್ನೇನಿರಲಾರದು? ಅಂತೂ ಈತನಿಗೆ ಬೇಕಾದುದು ಶಾಂತಿಯಲ್ಲ; ಕ್ರಾಂತಿ.

ನಿಜಕ್ಕೂ ಇದು ಕ್ರಾಂತಿ! ನಿರ್ಬಲವಾಗಿದ್ದ ಜರ್ಮನಿಯನ್ನು ಅಳಿಸೋಣ; ರಷ್ಯವನ್ನು ತಿರುಗಿಸಿ ರಷ್ಯದ ಸೊಗಸನ್ನು ನೋಡೋಣ ಎಂದಿದ್ದ ಬ್ರಿಟನ್–ಫ್ರಾನ್ಸುಗಳ ಯೋಜನೆಯನ್ನು ಹಿಟ್ಲರ್ ಹುಡಿಗೂಡಿಸಿದ! ರೈನ್‌ಲ್ಯಾಂಡ್—ಆಸ್ಟ್ರಿಯಾ–ಜೆಕೊಸ್ಲೊವಾಕಿಯಾಗಳನ್ನು ಒಂದೊಂದಾಗಿ ತಿಂದು ತೇಗಿದ. ಆದರೆ, ಆಡಿದ ಮಾತಿಲ್ಲದ ಹಿಟ್ಲರ್, ತನ್ನನ್ನು ಬೆಳೆಸಿದವರ ಮೇಲೆಯೇ ಬಿದ್ದ. "ಸವಿ ಕಂಡವರು ಕವಿ ಕೈದರೂ ಬಿಡ್ದರು" ಎಂಬಂತೆಸಗಿದ! ಪೋಲೇಂಡ್, ನಾರ್ವೆ, ಡೆನ್ಮಾರ್ಕ್, ಬೆಲ್ಜಿಯಂ, ಹೋಲೇಂಡ್, ಲಕ್ಸೆಂಬರ್ಗ್–ಫ್ರಾನ್ಸುಗಳನ್ನೂ ಮುಂದೆ ಹಿಟ್ಲರ್ ನುಂಗಿದ. ಇನ್ನು ಬ್ರಿಟನ್ ಬೇಕಂತೆ! ಈ ನುಂಗಾಟದ ಮೇಲೆ, ಹಿಟ್ಲರನ ಹಾಗೂ ಆತನ ಕೊಳ್ಳೆಯ ಭವಿಷ್ಯ ಅಡಗಿದೆ! ಆದರೆ ಗಂಟಲಲ್ಲಿ ಸುಲಭವಾಗಿ ಇಳಿಯಬಲ್ಲ ಕೊಳ್ಳೆಯ ತುತ್ತು ಬ್ರಿಟನ್ನಲ್ಲ!

ಹಿಟ್ಲರನು ತನ್ನ ಗ್ರಂಥದಲ್ಲಿ ಹೀನೆಯಿಸಿದ ರಷ್ಯ ಇಂದವನಿಗೆ ಬೇಕಾಯಿತು. ತಾನು ಅಧಿಕಾರಕ್ಕೆ ಬಂದ ಮೊದಲ್ಗೊಂಡು ಹಳಿಯುತ್ತಾ, ಈ ಟೀಕೆಗಳನ್ನು ಕಂಡೂ, ಫ್ರಾನ್ಸ್, ಬ್ರಿಟನ್, ಅಮೇರಿಕೆಗಳು ತನಗೆ ಕೊಡಮಾಡಿರುವ, ಸಹಕಾರಗಳಿಂದ ಮತ್ತನಾಗಿ, ಇನ್ನೂ ಕಠಿನವಾಗಿ ಟೀಕಿಸುತ್ತಾ ನಡೆದ ಹಿಟ್ಲರ್; ಇಂದಿನ ಕಾಳಗ ನಡೆದ ಬಳಿಕ, ಮುಂದೆ ಈತ ರಷ್ಯದೆಡೆ ತಿರುಗದೆ ಇರಲಾರ. ಅದೇ ಜಗತ್ತಿನ ಹೊಸ ನೀತಿಯು ಒಂದು ಕಾಲವಾಗದಿರದು! ರಷ್ಯವನ್ನಿದಿರಿಸಿ ಜರ್ಮನಿ ನಾಶವಾಗದಿರದು! ಹಲವು ರಾಷ್ಟ್ರಗಳನ್ನು ರಕ್ಷಿಸಿದ ಭಾಗ್ಯ ರಷ್ಯಕ್ಕೆ ಬರುವದರೊಡನೆ, ಇಂದಿನ ಬಂಡವಲಶಾಹಿ, ಸಾಮ್ರಾಜ್ಯಶಾಹಿ ಆಕಾಂಕ್ಷೆಗಳು ಅಳಿದು ತೃಪ್ತಿ, ಸಮಾನತೆ, ಶಾಂತಿಗಳು ತಲೆದೋರದಿರವು ಎಂದು ಹಲವರ ಮತ.

ಹಂಗೇರಿಗೆ ಟ್ರಾನ್ಸಿಲ್‌ವೇನಿಯ ಬೇಕಂತೆ

ಹಿಟ್ಲರನು ರುಮೇನಿಯಕ್ಕೆ ಸಹಾಯ ಕೊಡಬಲ್ಲನೇ?

ತುರ್ಕಿಯರು ಬಾಗುವಂತಿಲ್ಲ

ಹಂಗೇರಿಯ ಮಂತ್ರಿಮಂಡಲವು, ತನಗೆ ಸಕಲ ಸಹಾಯವನ್ನೂ ಕೊಡಬೇಕೆಂದು, ಹಿಟ್ಲರ್ ಮುಸಲಿನಿಯರನ್ನು ಯಾಚಿಸುವರೆಂದು ತಿಳಿದುಬಂದಿದೆ. ರುಮೇನಿಯದಿಂದ ಟ್ರಾನ್ಸಿಲ್‌ವೇನಿಯ ಪ್ರಾಂತ್ಯವನ್ನು ಸೆಳೆದುಕೊಳ್ಳಲು ತನಗೆ ಅನುಮತಿ ಕೊಡಬೇಕೆಂದು ಹಂಗೇರಿ ಸರ್ವಾಧಿಕಾರಿಗಳನ್ನು ಪ್ರಾರ್ಥಿಸಿಕೊಂಡಿದೆ. ಆದರೆ, ಈ ಅನುಮತಿಯಿಂದ, ಬಾಲ್ಕನಿನಲ್ಲಿ ಯುದ್ಧವು ಆರಂಭವಾಗಿ, ಅದೇ ಮುಂದೆ ತನ್ನನ್ನು ರಷ್ಯದ ಚಮ್ಮಟಿಕೆಗೆ ಆಹುತಿಕೊಡಿಸಬಹುದೆಂಬ ಭಯ ಹಿಟ್ಲರನಿಗೂ ಉಂಟಾಗಿದೆ. ಅಲ್ಲದೆ ರಷ್ಯವೂ ತನ್ನ ಬುಕೋವಿದಲ್ಲಿದ್ದ ಸೇನೆಯನ್ನು ರುಥೇನಿಯದ ಗಡಿಯಲ್ಲಿ ತಂದು ನಿಲ್ಲಿಸಿದೆ.

ಕಳೆದ ಹಲವು ಕಾಲದಿಂದ ರಷ್ಯವು, ರುಥೇನಿಯವು ರಷ್ಯದ ಉಕ್ರೈನ್ ಪ್ರಾಂತ್ಯಕ್ಕೆ ನ್ಯಾಯವಾಗಿ ಸೇರತಕ್ಕದ್ದೆಂದು ವಾದಿಸುತ್ತಲೇ ಬಂದಿದೆ. ಈ ನಡುವೆ ರುಮೇನಿಯವು ಅಂತರ್ಜಾಗ ಹೂಡಿದೆ. ಜರ್ಮನಿಯ ಕಡೆಗೆ ಸಂಪೂರ್ಣವಾಗಿ ತಿರುಗಿ, ಹಂಗೇರಿಯ ಆಟ ಸಾಗದಂತೆ ಯತ್ನಿಸಲು ಮುಂದಾಗಿದೆ. ಅಲ್ಲದೆ, ಯುದ್ಧವಿಲ್ಲದೆ ರುಮೇನಿಯವು, ಟ್ರಾನ್ಸಿಲ್‌ವೇನಿಯವನ್ನು ಬಿಟ್ಟುಕೊಡುವಂತಿಲ್ಲವೆಂದೂ ತಿಳಿದು



ಯಂತೂ ರುಮೇನಿಯದ
ವಿಚಾರವಾಗಿದೆ.
ನಿಯವನ್ನು ಸೆಳೆದುಕೊಳ್ಳಲು ಹಂ
ಮುಂದಾದಲ್ಲಿ, ತನ್ನದೇ ಆದ ದೊಬ್ರು
ಪ್ರಾಂತ್ಯವನ್ನು ನುಂಗಲು ಬಲ್ಗೇರಿಯವು
ಮುಂದೆ ಬರುವುದು. ಇವೆರಡು ಪ್ರದೇಶಗಳನ್ನುಳಿದರೆ, ರುಮೇನಿಯವು ಮುಂದೆ ದೇಶವೇ ಅಲ್ಲ. ಆದರಿಂದಾಗಿ, ರುಮೇನಿಯವು ಕಾದಾಡದೆ ನಿರ್ವಾಹವಿಲ್ಲ. ಕಾದಿ ಗೆಲುವಂತೆಯೂ ಇಲ್ಲ.

ರುಮೇನಿಯವು ಕಾದಾಡಲಂತೂ ಮನಸ್ಸು ಮಾಡಿದೆ. ಅಲ್ಲದೆ ಹಂಗೇರಿಯು ಯುದ್ಧಕ್ಕೆ ಮುಂದಾದರೆ, ತನ್ನ ಅಂಕೆಯ ಸಕಲ ಎಣ್ಣೆ ಗನಿಗಳನ್ನೂ ನಾಶಪಡಿಸಲೂ ನಿಶ್ಚಯಿಸಿದೆ. ಅಂತೂ ಇವು ಜರ್ಮನರ ವಶವಾಗಬಾರದೆಂದು ರುಮೇನಿಯದ ಆಶೆ. ಒಟ್ಟಿನಲ್ಲಿ ಈ ವಿಚಾರದಲ್ಲಿ ರುಮೇನಿಯಕ್ಕೆ ರಷ್ಯದ ಅಪ್ಪಣೆಯೂ ಇದೆಯಂತೆ.

ಇತ್ತ ಜರ್ಮನಿಯು, ಟರ್ಕಿ ಹಾಗೂ ರಷ್ಯಗಳ ಮೈತ್ರಿಯ ನಿರ್ಮೂಲಕ್ಕೆಳಸುತ್ತಿದೆ. ಟರ್ಕಿಯ ಮಂತ್ರಿಮಂಡಲವು ಜರ್ಮನರ ಆದಾವ ಕುತಂತ್ರಕ್ಕೂ ಬಾಗದೆ, ರಷ್ಯದೊಡನೆ ತನ್ನ ಸ್ನೇಹ ಬೆಳೆಸಿಕೊಳ್ಳಲು ನಿಶ್ಚಯಿಸಿದೆ. ಅಲ್ಲದೆ ಟರ್ಕಿಯಲ್ಲಿನ ಹೆಚ್ಚಿನ ಮಂದಿ ರಷ್ಯದ ಮೇಲೆ ಸಹಾನುಭೂತಿಯುಳ್ಳವರಾದುದರಿಂದ, ಟರ್ಕಿಯ ಪ್ರಧಾನರು ರಷ್ಯಾದೊಡನೆ, ಮೈತ್ರಿ ಗಳಿಸದಿದ್ದರೂ — ರಷ್ಯಕ್ಕೆ ಅದರಿಂದ ಬಾಧಕವಿಲ್ಲ. ಜರ್ಮನಿಯ ಕುತಂತ್ರಗಳನ್ನೆಲ್ಲ ಇದಿರಿಸಿ, ಟರ್ಕಿ ತಾಟಸ್ಥ್ಯವಾಗಿರಲು ಹೋರಾಡುತ್ತಿದೆ. ಒಟ್ಟಿನಲ್ಲಿ ಬಾಲ್ಕನಿನಲ್ಲಿ ಬಿರುಗಾಳಿಯ ಸೂಚನೆ ಕಾಣುತ್ತಿದೆ.

ಮದನ ಕಳಾ ಶಾಸ್ತ್ರ

ಎಂಬ ಪ್ರೇಮ ರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀಪುರುಷರ ಪ್ರೀತಿಯ ಫೊಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲ ದೇಶದ ವೇಶ್ಯೆಕನ್ಯೆಗಳು ಮೋಹಿಸುವ ರಹಸ್ಯಗಳು ಹಾಸಿಗೆಯ ಸುಖವಿಲಾಸಗಳು ಸ್ತ್ರೀಪುರುಷರು ದಿಗಂಬರರಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು, ಮುತ್ತಿಡುವ ವಿವಿಧಗಳು, ಕನ್ಯೆಗಳ ಪ್ರೇಮ ಮತ್ತು ಸುಯೋಗಕಾಲದ ಮರ್ಮಗಳು, ಇನ್ನೂ ಅನೇಕ ಪ್ರೀತಿಯ, ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೊಟೋಗಳು ಅಡಗಿವೆ. 300 ಪುಟಗಳುಳ್ಳ ದೊಡ್ಡ ಪುಸ್ತಕ.



ಪುಸ್ತಕ ಒಂದಕ್ಕೆ ಕ್ರಯ ರೂ. 1-4-0.

T. R. ರಾಯಲ್ ಕಂಪೆನಿ,

ನಂ. 3, ಕೃಷ್ಣಪ್ಪ ನಾಯ್ಡನ್ ಟ್ಯಾಂಕ್ ಬೀದಿ, ಸಾಹುಕಾರ್‌ಪೇಟೆ, ಜಿ. ಟಿ., ಮದರಾಸು.

ಹೊಟ್ಟೆನೋವು, ವಾಂತಿ, ಅಜೀರ್ಣ, ಕಾಲರಾ, ಸೆಟೆಬೇನೆ, ಬವಳಿ ಮುಂತಾದ ಅನೇಕ ಬೇನೆಗಳಿಗಾಗಿ

ಜವೇರಿಯನ್ನರ ಜೀವನ ಮಿಕ್ಶ್ಚರವು

ರಾಮಬಾಣದಂಥ ಉಪಾಯವಾಗಿದೆ. ಇದನ್ನು ಹೊಟ್ಟೆಯಲ್ಲಿ ತೆಗೆದುಕೊಳ್ಳಬಹುದು. ಇಲ್ಲವೆ ಮೈಮೇಲೆ ಲೇಪಿಸಬಹುದು. ಡಾಕ್ಟರ ಮತ್ತು ವೈದ್ಯರು ಇಲ್ಲದ ವೇಳೆಯಲ್ಲಿ ಜವೇರಿಯನ್ನರ ಜೀವನ ಮಿಕ್ಶ್ಚರದಂಥ ನೆರವಾಗುವಂಥ ಔಷಧವು ಮತ್ತೊಂದಿಲ್ಲ.

ಪಟ್ಟಣಗಳಲ್ಲಿ ಕೆಮಿಸ್ಟರ ಅಂಗಡಿಗಳಲ್ಲಿಯೂ ಹಳ್ಳಿಪಳ್ಳಿಗಳಲ್ಲಿ ಕಿರಾಣೀ ಅಂಗಡಿಗಳಲ್ಲಿಯೂ ಈ ಔಷಧವು ಮಾರಲಿಕ್ಕೆ ಸಿಗುತ್ತದೆ.

ಎಮ್. ಎಚ್. ಜವೇರಿಯನ ಮತ್ತು ಕಂಪೆನಿ,

ದೇವಕರಣ ಮ್ಯಾನ್ಶನ್,

ಫ್ರಿನ್ಸೆಸ್ ಸ್ಟ್ರೀಟ್, ಮುಂಬಯಿ, ೨.

ಆಯುರ್ವೇದ ಸಾರ

ಅಮೂಲ್ಯ ಕನ್ನಡ ವೈದ್ಯ ಗ್ರಂಥ

ಪಂಡಿತರು ಅಗತ್ಯವಾಗಿ ತಿಳಿದಿರಬೇಕಾದ ತತ್ವಗಳನ್ನೆಲ್ಲಾ ಬಹು ಗ್ರಂಥಗಳಿಂದ ಸಂಗ್ರಹಿಸಿ, ಬೇಕಾದಲ್ಲಿ ಪಾಶ್ಚಾತ್ಯ ಡಾಕ್ಟರರ ಮತ ಸಹ, ವಿರಳವಾಗಿ ವರ್ಣಿಸಿರುವ ಕನ್ನಡ ಗ್ರಂಥ ಇದು ಒಂದೇ. ಬಹು ಪ್ರಯೋಜನಕಾರಿಯಾಗಿ ಕಂಡ ಅನೇಕ ಹೊಸ ಔಷಧ ಯೋಗಗಳು ಮತ್ತು ಸ್ವತಂತ್ರವಾಗಿ ಚಿಕಿತ್ಸೆ ಮಾಡುವದಕ್ಕೆ ಬೇಕಾದ ಬಹಳ ಅನುಭವಗಳು ಇದರಲ್ಲಿ ಇವೆ. 'ಸ್ನಾಯುಮಂಡಲದ ರಚನೆ ಮತ್ತು ಅಧಿಕಾರ, 'ಪ್ರತಿ ಅಧ್ಯಾಯದಲ್ಲಿ 'ದುಷ್ಟಫಲ ಚಿಕಿತ್ಸೆ', 'ಪೃಥಕ್ಕೋ ಗೋಕ್ತೌಷಧಗಳು', 'ಪ್ರಕರಣಾನ್ತ ಟಿಪ್ಪಣಿ', ಇವೇ ಮೊದಲಾದವು ದ್ವಿತೀಯ ಭಾಗದ ವಿಶೇಷಗಳು. ೬೦೦ ಪ್ರತಿಗಳಷ್ಟೇ ಮುದ್ರಿತವಾಗಿರುವುದರಿಂದ ವಿಳಂಬದಿಂದ ಪ್ರತಿ ದೊರೆಯದೆ ಹೋಗುವ ಸಂಭವ ಇದೆ. ಪ್ರತಿ ಬೇಕಾದವರು ತ್ವರೆಯಾಗಿ ಕೆಳಗಣ ವಿಳಾಸಕ್ಕೆ ಬರಕೊಳ್ಳಬೇಕು. ಎರಡು ಆಥವಾ ಹೆಚ್ಚು ಪ್ರತಿಗಳನ್ನು ಒಮ್ಮೆಯೇ ಕೊಂಡುಕೊಳ್ಳುವವರಿಗೆ ರೂಪಾಯಿಗೆ ಒಂದಾಣೆಯಿಂದ ಎರಡಾಣೆ ವರೆಗೆ ಯುಕ್ತಕಂಡ ಡಿಸ್ಕೌಂಟು ಕೊಡಲಾಗುವುದು.

ಪ್ರಥಮ ಭಾಗ (೬೦೪ ಪುಟ) ರೂ. 6-8-0.
ದ್ವಿತೀಯ ಭಾಗ (೭೩೦ ಪುಟ) ರೂ. 6-8-0.
(ಟಪ್ಪಾಲು ಹಾಸಲು ಬೇರೆ)

ವಿಳಾಸ:— **ಪಿ. ರಾಮಕೃಷ್ಣಯ್ಯ,** ಬಿ.ಎ.,
(ನಿವೃತ್ತ) ಜಿಲ್ಲಾ ರಿಜಿಸ್ಟ್ರಾರ್,
ಕಂಬಳ, ಪೋಸ್ಟ್ **ಮಂಗಳೂರು.**

Ford

V-8

30 H. P. De-Luxe Sedan

The fashionable car of the day



U. Subraya Nayak,

FORD DEALER,

MANGALORE.

NOTICE

In the Court of the District Munsiff of Mangalore

S. C. NO. 26/1940

BETWEEN:—

The Pie—Money Bank Ltd., Mangalore by its Managing Director K. R. Guru —**Plaintiff**

VS.

1. Albin Cyprian Nicholas D'Souza, s/o Peter John P.D'Souza, Clerk, C/o Peter C. D. Baptist, The Reserve Bank of India, Issue Department, Fort Bombay. 2. Casmir Leo Colaco, son of Simon Victor Colaco, Clerk, residing in Kadri Manzil, Lohar Street, Mahim, Bombay —**Defendants**

To

The above defendants.

Take notice that the above-named plaintiff has filed the above suit against you for recovery of the sum of Rs. 34-7-3 and interest and costs of suit with interest in the above court and substituted service of notices to you has been ordered and the said suit will come on for hearing before this court at 10-30 A. M. on 5-8-1940. You may appear either in person or by a pleader on the said date and oppose the suit; otherwise the suit will be disposed off ex parte against you.

Mangalore 20-7-'40 } **G. Narayana Rao,** Vakil for plaintiff.

ಮೈಸೂರು

ಸಾಬೂನು

ಇಪ್ಪತ್ತು ವರ್ಷದ ತಯಾರಿಕೆ ಅನುಭವ

ನೈಮರ್ಲ್ಯವು

ಒಳ್ಳೆ

ಅಭ್ಯಾಸದ ಪರಿಣಾಮ

ನಿಮ್ಮ ಮೈ ಮತ್ತು ಬಟ್ಟೆಗಳನ್ನು ಶುಚಿ ಮಾಡಲು

ಮೈಸೂರು

ಸಾಬೂನುಗಳು ಕಾದಿವೆ.

ಮೈಸೂರು ಸಾಬೂನುಗಳು ಸರಕಾರದ ಆಡಳಿತದಲ್ಲಿ ಇಪ್ಪತ್ತು ವರ್ಷಗಳಿಂದಲೂ ಬೆಂಗಳೂರಿನಲ್ಲೇ ತಯಾರಾಗುತ್ತಿವೆ.



ಮೈಸೂರು

ಸ್ಯಾಂಡಲ್ ಸೋಪ್

ವೆಂಕಟಗಿರಿ ಮಹಾತ್ಮೆ

೫೯೯ ಪದ್ಯಗಳಿರುವ ೧೫ ಅಧ್ಯಾಯಗಳು. ದಪ್ಪವಾದ ಕಾಗದ.

ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ಕಾರ್ಯಗಳು ವಾಚಕರಿಗೆ ಮನಃಖುಚಿತವಾಗುವಂತೆ ಗ್ಲೇಜ್ ಕಾಗದದಲ್ಲಿ ೧೪ ಹಾಫ್‌ಟೋನ್ ಬ್ಲಾಕುಗಳಿಂದ ಕೂಡಿದೆ.

ಮುದ್ದಾದ ಮುದ್ರಣ.

ರೂಪಾಯಿ ೧—೮—೦.

ಟಪ್ಪಾಲು ಹಾಸಲು ಬೇರೆ.

ಸಂಸ್ಕೃತ ಭವಿಷ್ಯತ್ಪುರಾಣದಿಂದ ಸ್ವರ್ಗಸ್ಥರಾದ ಮೂಲ್ಗಿ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿತು. ಸುಲಭ ಶೈಲಿ, ಸರ್ವರಿಗೂ ಅನುನಿತ್ಯದ ಪಠನ ಪುಸ್ತಕವಾಗಿರಲು ಉಚಿತವಾಗಿರುವುದು. ಸೈಜು ಡೆಮ್ಮಿ ಆಕ್ಟಪತ್ರದ 168 ಪುಟಗಳು. ಕಿತ್ತಾನಾರಿನ ಬೈಂಡು. ಪ್ರತಿಯೊಂದಕ್ಕೆ ರೂ. 1-8-0. ಟಪ್ಪಾಲು ಹಾಸಲು ಬೇರೆ.

ಕವಿ ಎಂಡ್ ಸನ್ಸ್, ಮಂಗಳೂರು, ದ. ಕ.

ಸಾವಕಾರ

ಶ್ರೀನಿವಾಸ ರಂಗ ಪೈ

ವಜ್ರಗಳು

ಸಾವಕಾರ ಮಹಾಲ್,

ಮಂಗಳೂರು.

ಚೀನೀ ಸಮರ ಜಪಾನೀ ಸ್ತ್ರೀಯರಿಗೆ ಸ್ವಾತಂತ್ರ್ಯವಿತ್ತಿದೆ!

ಸಮಾನತೆಗಾಗಿ [redacted]; ಪಾಶ್ಚಾತ್ಯ ರೀತಿಗೆ ತಿರುಗುತಿದ್ದಾರೆ. ಹೆರುವ ಯಂತ್ರ [redacted] ಆಧಾರಗಳಾಗಿವೆ.

ಪ್ರಪಂಚವು ಮಹತ್ವಾದೊಂದು [redacted] ಸಿಲುಕಿದೆ. ಎಂದೂ ಇಲ್ಲದ ಬದಲಾವಣೆ [redacted] ದೋರಿದೆ. ಸಾಮ್ರಾಜ್ಯಶಾಹಿ ರಾಷ್ಟ್ರ ಕೆಲವು ತಮ್ಮ ಮೇರೆ ಮೀರಿದ ಮಹತ್ವಾಕಾಂಕ್ಷೆಗಳಿಗೆ ಬಲಿ ಬಿದ್ದು, ತಗ್ಗಿದ ದಾರಿಯನ್ನು ಹಿಡಿದಿವೆ. ಪ್ರಪಂಚದ ಏರುತಗ್ಗುಗಳ ಆ ದಿನ ಸನ್ನಿಹಿತವಾಗುತ್ತಿದೆ. ಸಕಲರನ್ನೂ ಒಂದೇ ಮಟ್ಟಕ್ಕೆ ತರುವ, ಪ್ರಳಯದ ಕಾರ್ಯವನ್ನು ಕೈಕೊಳ್ಳುವ, ಭೀಕರ ಬಿರುಗಾಳಿಯೊಂದರ ಅರುಣೋದಯವಾಗುತ್ತಿದೆ ಎಂಬಂತೆ ಭಾಸವಾಗುತ್ತಿದೆ.

ಮಹತ್ವಾಕಾಂಕ್ಷೆಗೆ ಸಿಲುಕಿ, ಚೀನವನ್ನು ನುಂಗಲೆಳಸಿದ ಜಪಾನೀ ಸಾಮ್ರಾಜ್ಯಶಾಹಿ ರಾಷ್ಟ್ರದ ಪರಿಸ್ಥಿತಿಯೇ ಇಂದು ಬದಲಾಗಿದೆ ೧॥ ಮಿಲಿಯ ಮಂದಿಯನ್ನು, ಚೀನದಲ್ಲಿ ಬಲಿ ಕೊಟ್ಟು, ಲಕ್ಷಾಂತರ ಮಂದಿಯನ್ನು ಹಾಸಿಗೆ ಹಿಡಿಸಿದ ಜಪಾನು, ನಿರ್ಬಲವಾಗಿ, ಹಿಡಿದ ಕಾರ್ಯವನ್ನು ಕೊನೆಗೊಳಿಸದಿರಲಾರದಾಗಿ ಕಾತರಿಸುತ್ತಿದೆ. ದೇಶದಲ್ಲಿ ಇದರಿಂದಾಗಿ ಪುರುಷರ ಸ್ಥಾನ ಸ್ತ್ರೀಯರ ವಶವಾಗಿದೆ. ಅನ್ನುವಾಗ ಈ ಸ್ತ್ರೀಯರ ವಿಚಾರವೇನು?

ಮನೆಯಲ್ಲಿ ಅಡಗಿದ್ದು, ಹತ್ತು ಮಂದಿಗೆ ಸಾಕಾಗಬಹುದಾದಷ್ಟು ಉಡಿಗೆಯನ್ನು ಹೊತ್ತು ಬಣ್ಣದ ಗೊಂಬೆಯಾಗಿ ಕಾಲಯಾಪನೆ ಮಾಡುತ್ತಿದ್ದ ಜಪಾನೀ ನಾರಿಯರಿಂದು ಬೆಳಕನ್ನು ಕಂಡಿದ್ದಾರೆ, ಎಚ್ಚರಗೊಂಡಿದ್ದಾರೆ, ಹಳೆಯ ಕಂತೆಗಳನ್ನೊಗೆದು ಹೊಸ ಹಾದಿ ಹಿಡಿದಿದ್ದಾರೆ.

ಇಂದು ಇಂತಹ ಮೂಲೆಯಲ್ಲಡಗಿದ್ದ ನಾರಿಯರು, ವಿಮಾನ ನಡೆಸುತ್ತಿರುವುದನ್ನು, ವಕೀಲಿ ನಡೆಸುತ್ತಿರುವುದನ್ನು, ಅಭಿನಯಿಸಿ ನರ್ತಿಸುತ್ತಿರುವುದನ್ನು ಕಾಣಬಹುದು. ಪಾಶ್ಚಾತ್ಯ ಉಡಿಗೆ ಧರಿಸಿ ಈಜಾಡುವುದನ್ನು, ಆಟವಾಡುವುದನ್ನು ನೋಡಬಹುದು.

ಇಷ್ಟೇ ಅಲ್ಲದೆ ಇಂದು ಸಾವಿರಾರು ರೀತಿಗಳಿಂದ, ಮೂಲೆಯಲ್ಲಡಗಿದ್ದ ಇವರು ಪಾಶ್ಚಾತ್ಯ ಸ್ತ್ರೀಯರ ಮಟ್ಟವನ್ನೇರಲು ಹವಣಿಸುತ್ತಿರುವುದನ್ನು ಕಾಣಬಹುದು. ಸಮಾಜದ ಮೂಢಭಾವನೆಗಳಿಗೆ ತಿಲಾಂಜಲಿಯಿತ್ತು, ಕಟ್ಟು ಕಟ್ಟಳೆಗಳನ್ನೊದೆದು, ಜಪಾನಿನ ಗಂಡಸರಿಗಿಂತಲೂ ಹೆಚ್ಚಿನ ಸ್ವಾತಂತ್ರ್ಯ ವಹಿಸಿ ಮುನ್ನಡೆದಿದ್ದಾರೆ. ಜೀವನದ ಸಂಕಲೆ ಸಡಿಲಾಗಿದೆ, ವೇಗ ವಿಗಿಲಾಗಿದೆ. ಜೊತೆಗೆ ಗಂಡಸರ ಉದ್ಯೋಗ ಹೆಂಗಸರ ಕೈಗೆ ದೊರೆಯುತ್ತಲಿದೆ.

ಇದಕ್ಕಿಂತಲೂ ಹೆಚ್ಚಿನದೆಂದರೆ, ಇಂದಿನ ಈ ಮುಂದೊತ್ತುವಿಕೆಯ ಪರಿಣಾಮವಾಗಿ ಜಪಾನೀ ಸ್ತ್ರೀಯರು ಸದ್ಯದಲ್ಲೆ ತಮಗೆ ಗಂಡಸರಿಗಿರುವ ಸಕಲ ಸ್ವಾತಂತ್ರ್ಯವೂ ದೊರೆಯಬೇಕೆಂದು ವಾದಿಸಬಹುದು. ಸಮಾನತೆಯನ್ನು ಕಸಿದು ಕೊಳ್ಳಬಹುದು. ಶತಮಾನಗಳಿಂದ ನಡೆದು ಬಂದ ಪದ್ಧತಿಗಳನ್ನು ಉರುಳಿಸಬಹುದು.

ಇಂತಹ ಬದಲಾವಣೆಗಳು ನಡೆದಿದ್ದರೂ, ಜಪಾನೀ ಗಂಡಸು ಇಂದಿಗೂ ಹೆಂಗಸೆಂಬವಳು ಹೆರುವ, ತನಗಾಗಿ ದುಡಿವ ಯಂತ್ರವೆಂದು ತಿಳಿಯುವುದನ್ನು ಬಿಟ್ಟಿಲ್ಲ. ಹೆಂಗಸರನ್ನು "ಬಳಲಿದ ಮನಸ್ಸಿಗೆ ನೆಮ್ಮದಿಯನ್ನೀವುದಕ್ಕಾಗಿಯೇ, ಇರುವ ಗೈಶಾ ಹುಡುಗಿಯರು; ತಮ್ಮ ನುಡಿಯಂತೆ ನಡೆವ ಕಾಮಿನಿಯರು" ಎಂಬೆರಡು ವಿಭಾಗಗಳಾಗಿ ಮಾಡಬಹುದೆಂದೂ, ಹಾಗೆ ಮಾಡಬೇಕೆಂದೂ ಗಂಡಸು ತಿಳಿದಿದ್ದಾನೆ.

ಇಂದಿನ ಟೋಕಿಯೋ ನಗರದಲ್ಲಿ, ೧೨೫ಳಂ ಗೈಶಾ ತರುಣಿಯರಿದ್ದಾರೆ. ಮನಸ್ಸನ್ನು ಹರ್ಷಗೊಳಿಸಿ ಕಳುಹಿಸುವ ಮನೆಗಳಲ್ಲಿನ ಈ ತರುಣಿಯರ ಜೀವನ ಕ್ರಮವು ವಿಚಿತ್ರವಾಗಿದೆ. ಈ ಗೈಶಾ ಮನೆಗಳ ಜೀವನ, ಚೆನ್ನಾಗಿ ಸಂಪಾದನೆ ಇರುವ ವಿವಾಹಿತ ಜಪಾನೀಯರ ಮೇಲೆಯೇ ಹೊಂದಿಕೊಂಡಿದೆ. ದುರಾಚಾರಕ್ಕೆ ಎಡೆ ಇರದ ಈ ಮನೆಗಳಲ್ಲಿ, ಬರೇ ತಮ್ಮ ಜಾಣ್ಮೆ, ವಿಧೇಯತೆ, ನೃತ್ಯ ಇತ್ಯಾದಿಗಳಿಂದ ತರುಣಿಯರು ಗಿರಾಕಿಗಳನ್ನು ಹರ್ಷಗೊಳಿಸಬೇಕಾಗಿದೆ.

ತನ್ನಷ್ಟಕ್ಕೆ ತಾನು ಜೀವನ ಸಾಗಿಸಿಕೊಂಡಿದ್ದರೂ, ಗಂಡಸಿಗೆ ವಿಧೇಯರಾಗಿರಬೇಕಾದುದು ನ್ಯಾಯವಲ್ಲವೆಂಬುದನ್ನಿಂದು ಜಪಾನೀ ಸ್ತ್ರೀಯರು ತಿಳಿಯತೊಡಗಿದ್ದಾರೆ. ಮನೆಯಲ್ಲಿ ಹಾಗೂ ಹೊರಗಣ ವಾತಾವರಣದಲ್ಲಿ ಸಮಾನತೆ ಬೇಕೆಂದಿವರು ಇಚ್ಛಿಸುತ್ತಿದ್ದಾರೆ.

ಜಪಾನಿನಲ್ಲಿ ಪ್ರೇಮಕ್ಕೆ ಬೆಲೆ ಇಲ್ಲವಾಗಿದೆ. ವಿಷಯಲಾಲಸೆಯು ಮದುವೆಗೆ ಹೇಗೆ ಜರ್ಮನಿಯಲ್ಲಿ ಕಾರಣವಾಗಿದೆಯೋ, ಅದೇ ರೀತಿ ಜಪಾನಿನಲ್ಲಿಯೂ ಕಾರಣವಾಗಿವೆ. ಆದರೆ ಇಂದು ಈ ತರುಣಿ-ತರುಣರಲ್ಲಿ, ಚಲನಚಿತ್ರ, ಕಾದಂಬರಿಗಳೇ ಮುಂತಾದವುಗಳಿಂದ ಪ್ರೇಮದ ಅಂಕುರ ಅಂಕುರಿಸಿದೆ.

ಹಿಂದೆ ಜಪಾನೀ ಸ್ತ್ರೀಯು ತನಗೆ ದೊರೆತುದನ್ನು ಪಡೆದು, ಅದನ್ನು ಒಪ್ಪಿ ಬಾಳಬೇಕಾಗಿತ್ತು. ಧನಿಕನ ಮನೆ ಸೇರಿದರೆ ಸುಖಿಯಾಗಿ ಇರುತ್ತಿದ್ದಳು; ಬಡವನನ್ನು ಕೂಡಿದರೆ ಸಿಕ್ಕಿದುದರಲ್ಲಿ ತೃಪ್ತಳಾಗಿ ಹೆರುವ ಕಾರ್ಯ ಸಾಗಿಸುತ್ತಿದ್ದಳು.

ಗಂಡನು ಹೆಂಡತಿಯನ್ನು ಜೊತೆಗೆ ಕರೆದೊಯ್ಯುವುದೂ, ಇತ್ತೀಚಿಗೆ ಬಂದ ರೂಢಿ. ಇಂದು ಗಂಡನು ಹೆಂಡತಿಯನ್ನು ತಿರುಗಾಡಲು, ಸಿನೆಮಾ ನಾಟಕಗಳಿಗೆ ಒಯ್ಯುವುದನ್ನು ಕಾಣಬಹುದು. ಗಂಡಸರೊಡನೆ ಸಮಾನತೆಯಿಂದ ಬೆರೆತಿರುವ ಹುಚ್ಚು ಹೆಚ್ಚಿ, ಇಂದು ರಾಷ್ಟ್ರದ ಪ್ರತಿಯೊಂದು ಉದ್ಯೋಗದಲ್ಲೂ ಹೆಂಗಸರು ಸೇರಿಕೊಂಡಿದ್ದಾರೆ.

ಇವೆಲ್ಲಾ ವ್ಯವಹಾರಗಳು, ಇದುವರೆಗಿನ ವಿವಾಹಗಳ ರೂಢಿಯನ್ನೊಗೆದು, ಪ್ರೇಮದ ಗೂಢವನ್ನು ಅರುಹಿವೆ. ಪರಿಣಾಮವಾಗಿ ತರುಣರಿಗೆ ಗೈಶಾ ಸ್ತ್ರೀ ಕೊಡುವ ವಿನೋದ-ವಿಹಾರಗಳ ಭಾಗ ಮಡದಿಯಾದವಳಿಂದಲೇ ದೊರೆಯತೊಡಗಿದೆ. ಇದರಿಂದಾಗಿ ಗೈಶಾ ಪದ್ಧತಿ ಹೆಚ್ಚು ಕಾಲ ಬಾಳುವಂತಿಲ್ಲ!

ಆಂತೂ ದಿನೇ ದಿನೇ ಸ್ತ್ರೀಯರಲ್ಲಿ ಹೆಚ್ಚುತ್ತಿರುವ ಈ ಸ್ವಾತಂತ್ರ್ಯದ ಆಶೆ, ಗಂಡಸರ ಆಕೃತ್ಯವನ್ನಳಿಸದಿರವು. ಮಾನವನ ಜೀವನವನ್ನು ಸರಿದಾರಿಗೆ ತರಬಲ್ಲ ಪತ್ನಿಯರು ದೊರೆಯುವದರಿಂದಾಗಿ, ಜಪಾನೀಯರಲ್ಲಿ ಅದ್ಭುತ ಬದಲಾವಣೆ ಕಂಡುಬರದಿರದು. ಸ್ತ್ರೀಯರ ಸ್ವಾತಂತ್ರ್ಯವನ್ನು ಕಂಡು ಪುರುಷರೂ ಸಾಮ್ರಾಜ್ಯ ಶಾಹಿ-ಬಂಡವಲ ಶಾಹಿಗಳಿಗಾಗಿ ಸಾಯುವದನ್ನುಳಿಸಿ, ಸ್ವಾತಂತ್ರ್ಯವನ್ನು ಬಯಸುವ ಕಾಲ ದೂರವಾಗಿಲ್ಲ!

Please write to us for your needs in

RUBBER STAMPS

Monogram Seals, Peon Badges, Sign Boards, Marble Boards, Fac-simile Stamps, Embossing, Etc.

CROWN RUBBER STAMP CO.,

A17, BALMATTA ROAD, (Estd. 1926) MANGALORE.

(Among the list of Mysore Govt.'s approved Firms.)

Certified by the Agent of India, Ceylon.

Embossing Machines A Speciality.

ನಗುವಿನ ಗೆಲುವು

ಈ ಸೌಂದರ್ಯದ ಸೊಬಗು ನಿಮಗೆಲ್ಲಿ ಲಭಿಸುವುದು? ವೀರ್ಯಶಕ್ತಿಯಿಂದಲ್ಲದೆ ಮತ್ತೆಲ್ಲಿಯದು? ತಿಂದ ಆಹಾರಪದಾರ್ಥಗಳನ್ನು ಜೀರ್ಣಿಸಿಕೊಳ್ಳಬೇಕಾದರೂ ನರಗಳ ಶಕ್ತಿ ಅತ್ಯಾವಶ್ಯಕ. ಅಂಥಾ ಚೇತನವನ್ನು ಕೊಟ್ಟು ಆರೋಗ್ಯವನ್ನು ಪೋಷಿಸುವುದರಲ್ಲಿ 'ಲಸ್ಟರ್' ಟಾನಿಕ್ ಅದ್ವಿತೀಯವಾದದ್ದು. ಇದನ್ನುಪಯೋಗಿಸುವುದರ ಮೂಲಕ ವಾತ, ಪಿತ್ಥ, ಅಜೀರ್ಣ, ಮಲಬದ್ಧತೆ, ಗೂಲ್ಮ, ಉಬ್ಬಸ, ಜ್ವರಗಡ್ಡೆ, ಎಡೆಬಡಿತ, ನಿಶ್ಯಕ್ತಿ, ರಕ್ತದೋಷದಿಂದುಂಟಾದ ಚರ್ಮವ್ಯಾಧಿ, ಅತ್ಯುಷ್ಣತೆ, ಮೆದುಳಿನ ಅಶಕ್ತತೆ, ಇಂದ್ರಿಯ ಶಿಥಿಲತೆ, ನಾಶವಾಗಿ ಶರೀರಕ್ಕೆ ಕಾಂತಿ ಬರುವುದು. ಔಷಧದ ಗುಣವನ್ನು ನಾವು ಹೆಚ್ಚಿಗೆ ಶ್ಲಾಘಿಸಬೇಕಾದ ಆವಶ್ಯಕವಿಲ್ಲ. ಆದರ ಪ್ರತಿಭೆಯನ್ನು ತನ್ನಷ್ಟಕ್ಕೆ ತಾನೆ ತೋರ್ಪಡಿಸುವುದು. ದೊಡ್ಡ ಸೀಸೆ ರೂ. ೩-೮-೦ ವಿೂಡಿಯಂ ರೂ. ೨—೦—೦. ಚಿಕ್ಕ ಸೀಸೆ ರೂ. ೧—೧—೦

ಲಸ್ಟರ್

ಲಸ್ಟರ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿ.

ಡಿಪೋ: ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮೈಸೂರು ಏಜೆಂಟ್ಸ್:—ಶ್ರೀನಿವಾಸ ಸ್ಟೋರ್ಸ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್.

Sole Agents:—Basel Mission Press, Mangalore.

ಸಬ್ ಏಜೆಂಟ್ಸ್:—Messrs. ಉಡುಪಿ ಮಿಷನ್ ಷಾಪ್ಸ್, ಸಂತೆಕಟ್ಟೆ, ಉಡುಪಿ.
Messrs. ಭಕ್ತಾ ಅಂಡ್ ಬ್ರದರ್ಸ್, ಕಾಸರಗೋಡು.
ವಿ. ವಿ. ಶೆಣೈ, ಕಾರ್ಕಳ.
ಬಿ. ಗೋವಿಂದ ಪಾಂಡುರಂಗ ಭಂಡಾರಿ, ಪುತ್ತೂರು.

KAYAKALPA MODAK

ಕಾಯಕಲ್ಪ ಮೋದಕ

ಆಯುರ್ವೇದಿಕ್ ಡ್ರಗ್ ರೀಸರ್ಚ್ ಇನ್ಸ್-ಟಿಟ್ಯೂಟ್ ಇವರ ಶರೀರಕ್ಕೆ ದಾರ್ಢ್ಯ ವ ಪುಷ್ಟತೆ ಉಂಟುಮಾಡಿ, ಆಬಾಲವೃದ್ಧರಿಗೆ ರೋಗರಹಿತರಾಗಿ, ದೀರ್ಘಾಯುವನ್ನು ಕೊಡುವ ಚರಕೋಕ್ತ ದಿವ್ಯ ವನಸ್ಪತಿಗಳಿಂದ ಕೂಡಿರುವ ವಿಶೇಷ ಮೋದಕ. ಬಾಟ್ಲಿ 1ರ ರೂಪಾಯಿ 3-8-0 (ಪೇಕಿಂಗ್ ವ ಟಪ್ಪಾಲು ಹಾಸಲು ಮಾಫಿ).

Sole Distributors: THE

Indian Drug & General Agencies,

23, Stingers Street G. T. MADRAS.

50 ವರ್ಷಗಳಿಂದ ಜಗತ್ಪ್ರಸಿದ್ಧ

ಮದನಮಂಜರಿ

ಮಾತ್ರೆಗಳು.

ಬಲಹೀನತೆ, ಮಲಬದ್ಧತೆ, ವೀರ್ಯಸ್ಖಲನ, ಧಾತು ವಿಕಾರ ಮೊದಲಾದವುಗಳನ್ನು ಶೀಘ್ರದಲ್ಲೇ ಪರಿಹರಿಸಿ ರಕ್ತ ಮತ್ತು ವೀರ್ಯಗಳನ್ನು ಧಾರಾಳ ಹೆಚ್ಚಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುತ್ತದೆ. ಕ್ರಯ: ಡಬ್ಬಿ 1ಕ್ಕೆ 1 ರೂ.

ರಮಣ ವಿಲಾಸಿನೀ

ಕಾಮಶಕ್ತಿ ಹೆಚ್ಚಿಸಿ ವೀರ್ಯಸ್ತಂಭನ ಮಾಡಿ, ರತಿಸುಖದಲ್ಲಿ ಪರಮಾನಂದವನ್ನುಂಟುಮಾಡುವ ನಿರ್ಬಾಧಿರ ಔಷಧ. ಕ್ರಯ: ಡಬ್ಬಿ 1ಕ್ಕೆ 1 ರೂ.

ಮದನಮಂಜರಿ ಫಾರ್ಮಸಿ,

184, ಚೈನಾ ಬಜಾರ್, ಮದ್ರಾಸ್.

ಮೈಸೂರು ಸಂಸ್ಥಾನದ ಸುದ್ದಿಗಳು

(ನಮ್ಮ ವಿಶೇಷ ಪ್ರತಿನಿಧಿಯಿಂದ) ಬೆಂಗಳೂರು ಜು. ೧೩

ಬೆಂಗಳೂರಿನಲ್ಲಿ ವಿಮಾನ ತಯಾರಿಕೆ ದಿವಾನರೊಡನೆ ಶ್ರೀ. ವಾಲ್‌ಚಂದರ ಭೇಟಿ

ಬೆಂಗಳೂರಿನಲ್ಲಿ ವಿಮಾನ ತಯಾರಿಕೆ ಕಾರ್ಖಾನೆಯೊಂದನ್ನು ಸ್ಥಾಪಿಸುವ ಸಂಬಂಧವಾಗಿ ದಿವಾನರಾದ ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರವರೊಡನೆ ಮಾತುಕಥೆ ನಡೆಸಲು ಬೊಂಬಾಯಿಯಿಂದ ಶ್ರೀ. ವಾಲ್‌ಚಂದ್ ಹೀರಾಚಂದ್‌ರವರು ಬೆಂಗಳೂರಿಗೆ ಆಗಮಿಸಿದ್ದರು.

ಶ್ರೀ. ವಾಲ್‌ಚಂದ್‌ರವರು ಮತ್ತು ಅವರ ಪರಿವಾರದವರು ಬೆಂಗಳೂರು ನಗರದ ನಾನಾ ಭಾಗಗಳನ್ನು ಪರಿಶೀಲಿಸಿ ಬೆಂಗಳೂರು ದಂಡಿನಲ್ಲಿ ವಿಮಾನ ತಯಾರಿಕೆಯ ಕಾರ್ಖಾನೆಯನ್ನು ಸ್ಥಾಪಿಸಲು ನಿಶ್ಚಯಿಸಿರುವರು. ಅವರು ಜಕ್ಕೂರು ಏರೋಡ್ರೋಮಿಗೂ ಸಹ ಭೇಟಿ ಕೊಟ್ಟಿದ್ದರು.

ಶ್ರೀ. ಹೀರಾಚಂದ್‌ರವರು ದಿವಾನರನ್ನು ಭೇಟಿ ಮಾಡಿ, ಕಾರ್ಖಾನೆಯನ್ನು ಸ್ಥಾಪಿಸುವ ಬಗ್ಗೆ ಮಾತುಕಥೆ ನಡೆಸಿದರು. ಪ್ರತಿವರ್ಷವೂ ಇಂಡಿಯಾ ಸರಕಾರದವರು ೫೦ ವಿಮಾನಗಳನ್ನು ಕೊಂಡುಕೊಳ್ಳುವರು. ಕಾರ್ಖಾನೆಯನ್ನು ಬೆಂಗಳೂರಲ್ಲಿ ಸ್ಥಾಪಿಸುವ ಬಗ್ಗೆ ಮೈಸೂರು ಸರಕಾರಕ್ಕೂ ಮತ್ತು ಶ್ರೀ. ವಾಲ್‌ಚಂದ್‌ರವರಿಗೂ ಮಾತುಕಥೆಯು ನಡೆಯಿತು ಈ ಯೋಜನೆಯು ಸರಕಾರದವರು ಪರ್ಯಾಲೋಚಿಸಿದರೆಂದು ತಿಳಿದು ಬಂದಿದೆ.

ಚೇಂಬರ್ ಆಫ್ ಕಾಮರ್ಸಿನಲ್ಲಿ ಸತ್ಕಾರ ಶ್ರೀ. ವಾಲ್‌ಚಂದ್ ಹೀರಾಚಂದರ ಭಾಷಣ

ಮೈಸೂರು ಚೇಂಬರ್ ಆಫ್ ಕಾಮರ್ಸ್‌ನವರು, ಶ್ರೀ. ವಾಲ್‌ಚಂದ್ ಹೀರಾಚಂದ್‌ರವರನ್ನು ಸತ್ಕರಿಸಿದರು. ಚೇಂಬರಿನ ಅಧ್ಯಕ್ಷರಾದ ಶ್ರೀ. ನಾರಾಯಣರಾವ್ ನಾಯಕ್‌ರವರು ಭಾಷಣಮಾಡಿ ಮುಖ್ಯ ಅತಿಥಿಗಳನ್ನು ಸ್ವಾಗತಿಸಿದರು. ಸತ್ಕಾರ ಕೂಟಕ್ಕೆ ನಗರದ ಮುಖ್ಯ ವರ್ತಕರುಗಳು ಆಗಮಿಸಿದ್ದರು.

ಶ್ರೀ. ವಾಲ್‌ಚಂದ್‌ರವರು ತಮ್ಮನ್ನು ಚೇಂಬರಿನವರು ಸತ್ಕರಿಸಿದ್ದಕ್ಕಾಗಿ ವಂದನೆಯನ್ನು ಅರ್ಪಿಸಿ, ಭಾರತದಲ್ಲಿ ಹಡಗು ಕಟ್ಟುವ ವಿಧಾನ, ಮೋಟರ್ ತಯಾರಿಕೆ ಮತ್ತು ವಿಮಾನ ತಯಾರಿಕೆಯ ಕಾರ್ಖಾನೆಗಳ ವಿಷಯವನ್ನು ಪ್ರಸ್ತಾಪಿಸಿದರು. ಅವರು ತಮ್ಮ ಭಾಷಣವನ್ನು ಮುಂದುವರಿಸುತ್ತಾ ವಿಶಾಖಪಟ್ಟಣದಲ್ಲಿ ತಾವು ಒಂದು ಹಡಗು ಕಟ್ಟುವ ಕಾರ್ಖಾನೆಯನ್ನು ಸ್ಥಾಪಿಸಿರುವುದಾಗಿಯೂ, ಹಡಗುಗಳು ೮೦೦೦ದಿಂದ ೧೨೦೦೦ ಟನ್ನುಗಳ ತೂಕವಿರುವುದೆಂದು ಅಂದಾಜುಮಾಡಲಾಗಿದೆಯೆಂದೂ, ಒಂದು ವರ್ಷಕ್ಕೆ ೧೬ ಹಡಗುಗಳಂತೆ ಕಟ್ಟಲಾಗುವುದೆಂದೂ, ಇದರಿಂದ ನಾಲ್ಕು ಕೋಟಿ ರೂಪಾಯಿಗಳು ಭಾರತದಿಂದ ಹೊರಗೆ ಹೋಗುವುದನ್ನು ತಪ್ಪಿಸಲಾಗಿದೆಯೆಂದೂ ಎಂದರು.

ವಿಮಾನ ತಯಾರಿಕೆಯ ವಿಚಾರವಾಗಿ ಭಾಷಣಮಾಡುತ್ತಾ, ಶ್ರೀ. ಹೀರಾಚಂದ್‌ರವರು ವಿಮಾನ ತಯಾರಿಕೆಯ ಕಾರ್ಖಾನೆಯೆಲ್ಲಿ ೨೭೦೦ ಮಂದಿ ಕೂಲಿಯವರಿಗೂ, ೨೫೦ ಮಂದಿ ಕ್ವಾಲಿಫೈಡ್ ಇಂಜಿನಿಯರ್‌ಗಳಿಗೂ ಕೆಲಸವು ಸಿಕ್ಕುವುದು ಎಂದರು.

ಹಡಗು – ಮೋಟರ್ — ವಿಮಾನಗಳೆಂಬ ಮೂರು ಮುಖ್ಯ ಕೈಗಾರಿಕೆಗಳನ್ನು ಭಾರತದಲ್ಲಿ ಸ್ಥಾಪಿಸುವುದರಿಂದ, ಭಾರತವು ಸ್ವವೃತ್ತಿಯಿಂದ ಕೂಡಿರಬಹುದು. ಎಲ್ಲವೂ ಭಾರತೀಯ ಸಾಮಗ್ರಿಗಳಾಗಿರುವುವು ಎಂದರು.

ಚರ್ಚಿಲ್ಲರ ವೀರ ವಾಕ್ಯುಗಳು

ಇಂದಿನ ಮಹಾ ಸಮರದ ಸಿಂಹಾವಲೋಕನವನ್ನು ಮಾಡಿ, ಬ್ರಿಟನ್ನಿನ ಪ್ರಧಾನರು ತನ್ನ ಬಲಗೈಯಂತಿದ್ದ ಫ್ರಾನ್ಸು ಮುರಿದು ಬಿದ್ದರೂ, ಎದೆಗುಂದದೆ ವೀರಾವೇಷದಿಂದ ಬ್ರಿಟನ್ನಿನ ನಿತ್ರಿತ ಧೋರಣೆಯನ್ನು ಜಗತ್ತಿಗೆ ಪುನಃ ಒತ್ತಿ ಹೇಳಿದ್ದಾರೆ. "ನಾವು ನಮ್ಮ ಪ್ರತಿಯೊಂದು ಹಳ್ಳಿಯನ್ನೂ, ಪ್ರತಿ ಪಟ್ಟಣವನ್ನೂ, ಪ್ರತಿ ನಗರವನ್ನೂ, ಇಡೀ ಲಂಡನ್ ನಗರವನ್ನೂ, ಬೀದಿಬೀದಿಗಳಲ್ಲಿ ಕಾದಾಟ ನಡೆದರೂ ನಡೆಸಿ, ಇಡೀ ಲಂಡನ್ ನಾಶವಾಗಿ, ಭಸ್ಮವಾದರೂ ಚಿಂತೆ ಇಲ್ಲ — ವೈರಿಗೆ ತಲೆ ಬಾಗಲಾರೆವು. ನಮ್ಮ ಅಭಿಪ್ರಾಯವನ್ನು ಅರುಹಿ, ಮುಂದಿಗೆ ಭರವಸೆ ಈಯುವದಕ್ಕಾಗಿ ಈ ಮಾತು ಹೇಳಿದ್ದೇನೆ" ಎಂದು, ಇಡೀ ಬ್ರಿಟನ್ನು ಧೂಳಿದೂಸರಿತವಾಗುವ ತನಕವೂ, ಪ್ರತಿಯೊಬ್ಬ ಬ್ರಿಟಷ್ ವೀರ ಉಳಿವ ತನಕವೂ ಕಾದಾಡುವೆವೆಂದು ತಿಳಿಸಿದ್ದಾರೆ. ಅಲ್ಲದೆ ಬ್ರಿಟನ್ ಹೇಗೆ ಇಂದು ಭದ್ರಪಡಿಸಲ್ಪಟ್ಟಿದೆ, ಜಗತ್ತಿನ ಅಪಮಾನ ಹಡಗುಪಡೆಯಿಂದ ಕಾಯಲ್ಪಡುತ್ತಿದೆ ಎಂಬುದನ್ನು ವಿವೇಚಿಸಿ, ಇಂದು ನಮ್ಮಲ್ಲಿ ೧೫ ಮಿಲಿಯ ಸೈನಿಕರೂ, ಒಂದು ಮಿಲಿಯ ರಕ್ಷಣಾ ಸ್ವಯಂಸೇವಕರೂ ಇರುವರೆಂದೂ, ನಾವು ಇಂದಲ್ಲ ಮುಂದೆ ೧೯೪೨ ರಲ್ಲಾದರೂ ಕೂಡ – ಕಾದಾಟ ನಡೆಸಲು ಸಿದ್ಧರೇ ಇರುವೆವೆಂದು ಸಾರಿದ್ದಾರೆ. ಮಿ। ಚರ್ಚಿಲ್ಲರ ನುಡಿಗಳು ಬ್ರಿಟಿಷರನ್ನೂ ಸದಾ ಹುರುಪಿನಲ್ಲಿ, ಸ್ವಾತಂತ್ರ್ಯಾಭಿಮಾನದಲ್ಲಿ, ಉತ್ಸಾಹದಲ್ಲಿ ಇರಿಸಬಲ್ಲ ವೀರವಾಕ್ಯುಗಳು; ಜಗತ್ತಿಗೆ ಭರವಸೆಯ ನುಡಿಗಳು!

ಚೀನದ ಘನ ನಿರ್ಧಾರ

"ಕೊನೆ ಇಲ್ಲದ ಜಪಾನಿನ ಸ್ವಾರ್ಥ ಹಾಗೂ ಮಹತ್ವಾಕಾಂಕ್ಷೆಗಳು ತಡೆಯಲ್ಪಡದಿದ್ದರೆ, ಜಗತ್ತು ಪೆಸಿಫಿಕ್ ಸಾಗರದಲ್ಲಿ ಹಾಗೂ ಹಿಂದೂ ಸಾಗರಗಳಲ್ಲಿ ತನ್ನ ಅಧಿಕಾರ ಹಾಗೂ ಅಭಿಮಾನಗಳನ್ನು ಉಳಿಸಿಕೊಳ್ಳಲು ಎಡೆ ಇರದು. ಜಪಾನು ಎಲ್ಲರ ವೈರಿ ಎಂದು ಜಗತ್ತಿನ ಸಕಲ ರಾಷ್ಟ್ರಗಳೂ ತಿಳಿದಿರಬೇಕಾಗಿದೆ; ಅಲ್ಲದೆ ನಮ್ಮ ಕಾದಾಟ ಕ್ಕಾಗಿ, ಜಗತ್ತಿನ ಶಾಂತಿಗಾಗಿ ಅದರೊಡನಿದ್ದ ಸಂಬಂಧ ಮುರಿಯಬೇಕಾಗಿದೆ. ಮೂರು ವರ್ಷದ ನಮ್ಮ ಕಾದಾಟ ವೈರಿಯ ಶಕ್ತಿಯನ್ನು ಕೆಳಗಿಳಿಸಿದೆ. ನಮ್ಮ ವಿಜಯದ ಆಸ್ತಿವಾರ ಇಂದು ಎಂದಿಗಿಂತ ಬಲವಾಗಿದೆ. ಇನ್ನು ಮುಂದೆ ನಾವು ಆರ್ಥಿಕ, ರಾಜಕೀಯ, ಸೈನಿಕ ರಂಗಗಳ ಕಾದಾಟವನ್ನು ನಮ್ಮ ನಾಯಕನ ನುಡಿಯಂತೆ ನಡೆದು ಪ್ರಬಲಗೊಳಿಸಬೇಕಾಗಿದೆ. ವೈರಿಯು ಸಂಪೂರ್ಣವಾಗಿ ಓಡಿಸಲ್ಪಡುವ ತನಕ ಅದಾರ ಮಧ್ಯಸ್ಥಿಕೆಗೂ ಬಾಗದೆ ಕಾದುವುದೇ ನಮ್ಮ ನಿರ್ಧಾರ" ಎಂದು ಚೀನಾ ದೇಶದ ಸರಕಾರದ ಕಡೆಯ ಒಂದು ಕರಪತ್ರವು ಸಾರುತ್ತದೆ.

ಡಿಫೆನ್ಸ್ ಕಾನೂನು

ಪಾಟ್ನದ ಶ್ರೀ. ಜೋಗೇಂದ್ರ ಶುಕುಲ್ ಎಂಬ ಸೋಸಿಯಲಿಸ್ಟ್ ನಾಯಕರೂ, ಕಲ್ಕತ್ತೆಯ ಶ್ರೀ. ಅನಿಲ್‌ಚಂದ್ರ ರೋಯ್‌ಯವರೂ, ಮಧುರೆಯಲ್ಲಿ ಮಾವೆಲಿಕರ ಶ್ರೀ. ಯಂ. ಸಿ. ಸೇಖರನ್, ಶ್ರೀ.ಗಳಾದ ಕೃಷ್ಣಮುತ್ತು ಮತ್ತು ಅಯ್ಯಸ್ವಾಮಿಯವರುಗಳು ಸೆರೆ ಹಿಡಿಯಲ್ಪಟ್ಟಿದ್ದಾರೆ. ಅಲ್ಲಹಾಬಾದಿನಲ್ಲಿ ೮ ಮಂದಿಯನ್ನು ಗಡಿಪಾರು ಮಾಡಲಾಗಿದೆ. ಚಿತಗೋಂಗ್‌ನಲ್ಲಿ ವಿದ್ಯಾರ್ಥಿಗಳು, ಕಾಂಗ್ರೆಸ್ ಕೆಲಸಗಾರರು ಹಾಗೂ ಕಿಸಾನ್ ಕೆಲಸಗಾರರು ೧೨ ಮಂದಿ ಸೆರೆ ಹಿಡಿಯಲ್ಪಟ್ಟಿದ್ದು ಶಿಕ್ಷೆಗೆ ಗುರಿಪಡಿಸಲ್ಪಟ್ಟರು.

ಅಶಕ್ತ ಮಕ್ಕಳು
ಡೋಂಗರೇ
ಬಾಲಾಮೃತವನ್ನು
ಕೊಡುವದರಿಂದ
ಸಶಕ್ತರೂ,
ಚೆಲುವರೂ,
ಸಂತೋಷ ಚಿತ್ತರೂ
ಆಗುವರು

ನೂತನ ಪಾಠಪಟ್ಟಿಗನುಸಾರವಾಗಿ ಪ್ರಕಟಿಸಲ್ಪಟ್ಟ ಈ ಕೆಳಗಿನ ನಮ್ಮ ಹೊಸ ಪುಸ್ತಕಗಳು ಮದ್ರಾಸು ಟೆಕ್ಸ್‌ಟ್ ಬುಕ್ ಕಮಿಟಿಯವರಿಂದ ಕ್ಲಾಸು ಉಪಯೋಗಕ್ಕಾಗಿ ಮಂಜೂರಾತಿಯನ್ನು ಹೊಂದಿವೆ.
(Vide consolidated list of approved books, Fort St. George Gazette, dated 30-4-1940, pages 59, 60, 62, 68, 70, 71, 86, 87, 88, 92 & 155).

(1) ಹೊಸ ಕನ್ನಡ ಪಾಠಮಾಲೆ—1ರಿಂದ 5ನೇ ದರ್ಜೆಯ ವರೆಗೆ.
(2) ನೂತನ ಬಾಲ ಗಣಿತ—3ನೇ ದರ್ಜೆಯಿಂದ 8ನೇ ದರ್ಜೆಯ ವರೆಗೆ.
(3) ಭಾರತದ ಇತಿಹಾಸ—6ನೇ, 7ನೇ ಮತ್ತು 8ನೇ ದರ್ಜೆಗಳಿಗೆ.
(4) ಡಿ .ಡಿ I, II, III, IV ಮತ್ತು V ಫಾರ್ಮುಗಳಿಗೆ.
(5) ನೂತನ ಸಾಮಾನ್ಯ ಗಣಿತ—IV ಫಾರ್ಮಿಗೆ.

ಹೊಸ ಕನ್ನಡ ಪಾಠಮಾಲೆಯ 6, 7 ಮತ್ತು 8ನೇ ದರ್ಜೆಯ ಪುಸ್ತಕಗಳು ಅಚ್ಚಿನಲ್ಲಿವೆ.
ಹೆಚ್ಚಿನ ಮಾಹಿತಿಗೆ ನಮಗೆ ಬರೆದುಕೊಳ್ಳಿರಿ: –
ಬಾಲಸಾಹಿತ್ಯ ಮಂಡಲ, ಲಿಮಿಟೆಡ್, ಮಂಗಳೂರು.

THE PIE-MONEY BANK, LTD.,
MAIDAN ROAD, MANGALORE.
Undertakes all kinds of Banking Business.
Current account at 2½% per annum.
Savings Bank Deposits at 4½% per annum.
FIXED DEPOSITS.
For 2 years 5%. 1 year 4½%. For 6 months 4%. 3 months 3½%.
Auction Chit Funds ranging from Rs. 100—5,000 run regularly on systematic lines.
Unique Banking facilities to Businessmen and interested Public.
Apply for particulars:— K. R. GURU, *Managing Director.*

Jaya Laxmi Bank, Ltd., Mangalore.
ಜಯಲಕ್ಷ್ಮೀ ಬೇಂಕ್, ಲಿಮಿಟೆಡ್, ಮಂಗಳೂರು.
(ಸ್ಥಾಪಿಸಲ್ಪಟ್ಟದ್ದು—1923)
ಶಾಖೆಗಳು: ಪುತ್ತೂರು, ಕಾಸರಗೋಡು, ಚಿಕ್ಕಮಗಳೂರು, ಮೂಡಿಗೆರೆ ಮತ್ತು ಕಣ್ಣೂರು.

ಅಧಿಕೃತ ಮೂಲಧನ . . .	ರೂ. 1,00,000
ಅರ್ಪಿಸಲಾದ ಮತ್ತು ಚೆಂದಾಹಾಕಿದ ಮೂಲಧನ	ರೂ. 1,00,000
ತೆತ್ತ ಮೂಲಧನ	ರೂ. 92,705
ಕ್ಷೇಮ ಮತ್ತಿತರ ನಿಧಿಗಳು . .	ರೂ. 1,10,979

ಕಾಯ್ದಂ ಠೇವಣಾತಿಗಳು.
3 ತಿಂಗಳ ಠೇವಣಾತಿಗಳಿಗೆ—ಸೇ. 3%; 6 ತಿಂಗಳ ಠೇವಣಾತಿಗಳಿಗೆ—ಸೇ. 3½%; 12 ತಿಂಗಳ ಠೇವಣಾತಿಗಳಿಗೆ—4%.
ಮಾಸಿಕ, ಸೇವಿಂಗ್ಸ್ ಬೇಂಕ್, ಮತ್ತು ಚಾಲ್ತಿ ಠೇವಣಾತಿಗಳು ಯೋಗ್ಯ ತರಹ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.
ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲಾಗುವುವು. ಮುಖ್ಯವಾಗಿ ಭಂಗಾರದ ಸರಕು ಈಡಿನ ಮೇಲೆ, ಸಾಲವನ್ನು ಕೊಡುವುದು.
M. Ganesh Rao,
ಸೆಕ್ರಟರಿ.

ವಾಜೀಕರಣ ತೈಲ
ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗ ಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗ ಮಾಡುವುದರಿಂದಲೂ ದುಷ್ಪವಾದ ಭೋಗದಿಂದಲೂ ಹಸ್ತಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಎದ್ದಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯತಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧ ತೊಲೆ ತೀಸೆ 1ಕ್ಕೆ ರೂ. 5—0—0.
ಆತಂಕನಿಗ್ರಹ ಫಾರ್ಮಸಿ, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.
ಏಜೆಂಟ್ಸ್— [illegible] ಎಂಡ್ ಸನ್ಸ್, ಮಂಗಳೂರು.

THE BANK OF MANGALORE, LIMITED,
MANGALORE.

Head Office:-**Mangalore.** *Branches:*-**Moodabidri & Padubidri.**

Recurring Savings Bank Deposit

1. The minimum deposit payable at a time is only ONE ANNA.

2. Deposits collected at your door.

3. Every anna paid daily will grow, with interest, to Rs. **185/-**. Thus a depositor who pays in a sum of Re. 1/- daily will get at the end of seven years **2,960/-**.

4. Payment can even be discontinued and again continued, if and when convenient.

5. No forfeiture of interest for such discontinued period.

6. Maximum loan facilities on security of these deposits.

For further particulars please apply to our Head Office or Branches.

ಕೆ ಸ್ಟೊ ಫೇ ನ್

ಹರಳೆಣ್ಣೆಯಿಂದ ಮಕ್ಕಳಿಗೆ ಎಷ್ಟೊಂದು ದುಃಖ! ಈಗ ಅದನ್ನು ಕೊಡಬೇಕಾಗಿಲ್ಲ. ಕಾರಣ, ವಿಜ್ಞಾನಿಗಳು ಅದರ ಬದಲು ಆದರ್ಶಪ್ರಾಯದ ಇನ್ನೊಂದನ್ನು ಪೂರ್ಣಮಾಡಿದ್ದಾರೆ–ಕೆಸ್ಟೊಫೇನ್ ಕೇಸ್ಟರ್ ಆಯಿಲ್ ಚಾಕೊಲೆಟ್‌ಗಳು, ಸೇವನೆಗೆ ಮಿಠಾಯಿಯಷ್ಟು ರುಚಿಯಾದ ಈ ಭೇದಿಯ ಬಿಲ್ಲೆಗಳನ್ನು ಡಾಕ್ಟರರೂ, ನರ್ಸುಗಳೂ ಅದರ ಸ್ಫೂರ್ಣ ಆದರೆ ಮೃದುವಾದ ಕೆಲಸಕ್ಕಾಗಿ ಹೆಚ್ಚು ಶಿಫಾರಸು ಮಾಡುತ್ತಾರೆ. ಇದು, ಮಕ್ಕಳಷ್ಟೇ, ಪ್ರಾಯಸ್ಥರಿಗೂ ಆದರ್ಶಪ್ರಾಯವಾಗಿದೆ. ಯಾವಾಗಲೂ ಒಂದು ಬಾಟಲಿ ಕೈಯಲ್ಲಿಟ್ಟುಕೊಳ್ಳಿ. ದಕ್ಷಿಣ ಹಿಂದೂಸ್ಥಾನದ ಏಜಂಟರು:–

ಮೆಸರ್ಸ್ ಶಿವರಾಮ್ ಎಂಡ್ ಸ್ವಾಮಿ,
154, ನೈನಿಯಪ್ಪ ನಾಯಕ್ ಸ್ಟ್ರೀಟ್, ಪಿ. ಟಿ. ಮದ್ರಾಸು.

CASTOPHENE
CASTOR OIL CHOCOLATES

Diamonds! **Diamonds!**

Best Brilliancy!

K. R. K. SHET,

Opp. Government College,
MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ

ವಜ್ರಗಳು!

ಎಮ್ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಗೆ ಕಡಿಮೆಯಾಗಿ ದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ.

ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಜುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ. ಆಗ ತಾನೇ ನಿಮಗೆ ಖಚಿತವಾಗುವುದು.

ಯೋಗ್ಯ ದರದಲ್ಲಿ ಉತ್ತಮ ದೇವರ ಪೂಜಾ ಸಾಮಗ್ರಿ

ಅಪೇಕ್ಷಿಸುವವರು ಇಂದೇ ನನ್ನ ಪಾತ್ರೆಗೊಂದು ಪತ್ರ ಬರೆಯಿರಿ.

ಸಚಿತ್ರ ಕ್ಯಾಟಲಾಗ್ ಫುಕಟಾ ಕಳುಹಿಸಿಕೊಡುವೆವು. ಈ ಚಿತ್ರದಲ್ಲಿ ಕಾಣುವ ಉಪಕರಣಗಳು ಬೇಕಾದ ಸೈಜಿನಲ್ಲಿ ಖಾತ್ರಿಯಾಗಿ ಸದಾ ಸಿದ್ಧವಿರುವುವು. ಅಲ್ಲದೆ, ಉಡುಪಿಯಲ್ಲಿ ತಯಾರಾಗುವ ಬೆಳ್ಳಿ ಸಾಮಾನುಗಳನ್ನು ಶುದ್ಧ ಬೆಳ್ಳಿಯಿಂದ ತಯಾರಿಸಿ ಕಳುಹಿಸಬಲ್ಲೆವು. ಗಿರಾಕಿಗಳಿಗೆ ತುಂಬಾ ಅನುಕೂಲ. ಹೆಚ್ಚಿನ ಮಾಹಿತಿ ಕ್ಯಾಟಲಾಗಿನೊಂದಿಗೆ.

ಕಲ್ಮಂಜೆ ವ್ಯಾಸಾಚಾರ್ಯ, Kalmanje Vyasacharya,
ಭಾಂಡೆ ವ್ಯಾಪಾರಿ, Brass-ware Merchant,
ಉಡುಪಿ, ದ. ಕ. UDIPI, S. K.

(ರಿಜಿಸ್ಟರ್ಡ್) **ಬಾಲಾರ್ಕಮಧು** ಲಕ್ಷಗಟ್ಟಲೆ ಮಕ್ಕಳ ಪ್ರಾಣವನ್ನು ಕಾಪಾಡಿದೆ.

ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗ್ರಹಣಿ, ಅಸ್ತಿಜ್ವರವನ್ನು ಹೋಗಲಾಡಿಸುವುದು. ಗೂಡು ಕಟ್ಟಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ ಹೆಚ್ಚುವುದು. ಮಧುರವಿದೆ.

ಬೆಲೆ 0–12–0. ಟಿ. ಖ. 0–9–0.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ.

ಧಾರಾಳ ಕಮಿಶನ್ ಕೊಡಲ್ಪಡುವುದು. ಬರೆಯಿರಿ–

ಯಂ. ವಿ. ಪ್ರಸಾದಿಕ ಔಷಧಾಲಯ,
ಶಿವಮೊಗ್ಗಾ, (ಮೈಸೂರು ಸೀಮೆ).

ಗುಣ ಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ [ಹಣ ಪರತ.

ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ್)

ಈ ಚೂರ್ಣವು ಕೆಂಪು, ಬಿಳೆ ಶರಗಿಗೆ ಶತ್ರುವಾಗಿರುವದು! ಅನಿಯಮಿತನದಿಂದ ಮುಟ್ಟಾಗುವಿಕೆ, ಕ್ಲೇಶ, ಮೈಯಲ್ಲಿ ನೋವು, ಉಷ್ಣತಾ, ಕ್ಷೀಣತಾ, ಗರ್ಭಾಶಯದಲ್ಲಿಯ ದೋಷ, ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ, ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವುದು. ಮಕ್ಕಳಾಗುವುದಿಲ್ಲೆಂದು ತಿನೇ ಲಗ್ನವಾಗುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟು: ಮಾ। ರಾ। ಎ. ಎಮ್. ಇನ್ಸ್‌ಪೆಕ್ಟರ್ ಬೆಳಗಾಂವ–'ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳೂ ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯು ರಕ್ತ ಮತ್ತು ಬಿಳೆ ಶರಗು ಇಲ್ಲದಂತಾದವು.' ೩೧ ದಿವಸದ ಡಬ್ಬಿಯ ಕಿ. ರೂ. ೩. ಟಿ. ಖ. ಆಣೆ ೮.

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡೆಯುವುದರಿಂದ ಹೆಂಗಸರಿಗೆ ಆಶಕ್ತಿಯಾಗುತ್ತದೆ. ಬಡತನದಲ್ಲಿ ಮಕ್ಕಳಾಗುವದರಿಂದ ದುಃಖವಾಗುತ್ತದೆ, ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಗರ್ಭಧಾರಣ ಬಂದಾಗುವುದು. ತದನಂತರ ಏನೂ ಮಾಡಿದರೂ ಸುರುವಾಗುವುದಿಲ್ಲ. ಮೊದಲೆ ವಿಚಾರ ಮಾಡಿ ಔಷಧಬೇಡಿರಿ. ಮುಖ್ಯ ಸರ್ಟಿಫಿಕೇಟು—ಡಾಕ್ಟರ್ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್., ಕೆಳವಾಮೂಹಿವು, ಠಾಣೇ—ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ, ಗರ್ಭಧಾರಣವಾಗುವುದಿಲ್ಲ. ಪೂರ್ಣ ಗುಣಕಾರಿ. ಡಬ್ಬಿ ಕಿಮ್ಮತ್ತು ರೂ. ೪; ವಿ. ಪಿ. ಆಣೆ ೮.

ವಿಳಾಸ:—**ಸಂಜೀವಿನೀ ಔಷಧಾಲಯ, ಮು. ಪೊ. ಮಿರಜಿ, (S. M. C.)**

ಡಾಕ್ಟರ್ ಜಿ. ಬಿ. ಇವರ

ಸುಗಂಧ ನಸ್ಯದ ಪುಡಿ

?

ನೀವು ಯಾರು? ಉಪಾಧ್ಯಾಯರೆ? ವರ್ತಕರೆ? ಆರಂಭಗಾರರೆ? ಅಥವಾ ಚದುರಂಗ ಆಡುವವರೆ? ನೀವು ಯಾರಾದರೂ ಸರಿ— ನಿಮಗೆ ಬೇಸರಿಕೆಯುಂಟಾಗಿ, ಕೆಲಸದಲ್ಲಿ ಆಸಕ್ತಿ ತಪ್ಪಿದಾಗ, ಡಾಕ್ಟರ್ ಜಿ. ಬಿ. ಇವರ ಸುಗಂಧ ನಸ್ಯದ ಪುಡಿಯನ್ನು ಉಪಯೋಗಿಸಿ. ಆಗ ನಿಮ್ಮಲ್ಲಿ ನವಚೇತನವುಂಟಾಗಿ, ಉತ್ಸಾಹವೂ, ಸ್ಫೂರ್ತಿಯೂ ತೋರಿಬರುವುದು.

ಬೆಲೆ: ಬುಡ್ಡಿ ಒಂದಕ್ಕೆ ನಾಲ್ಕಾಣೆ (ಟಪ್ಪಾಲು ಖರ್ಚು ಪ್ರತ್ಯೇಕ).

ಗುರುಬಸವ ಅಂಡ್ ಕಂಪೆನಿ, ಲಿಮಿಟೆಡ್,
ಪೋಸ್ಟು ಬಾಕ್ಸು ನಂಬರು ೫೧೦, ಪಾರ್ಕು ಟೌನ್, ಮದರಾಸು.

B. Vittal Rau at the Kanteerava Office, Maidan North Road, Mangalore. Printed by U. Vittalacharya, Manager at the Dharma Prakash Press, Car Street, Mangalore.